# ಮಂತ್ರ

(ಅನಂತನ ದೈವೀ ಶಬ್ದ)




## ಅಖಿಲ ಭಾರತ ಪತ್ರಿಕೆ

**ಸೆಪ್ಟಂಬರ್ 2015**

**ಬೆಲೆ : 15/–**



*Keep an immutable faith.*
*Truth will triumph.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

# "ಮಂತ್ರ"

### (ಅನಂತನ ದೈವೀ ಶಬ್ದ)


**ಅನು : ಡಾ. ಕೆ.ಎಸ್. ಆಮೂರ**

ಮಂತ್ರದ ಸಿದ್ಧಾಂತ 3

ಮಂತ್ರ ಜಪದ ಆಚರಣೆ 15

ಮಂತ್ರದ ರೂಪದಲ್ಲಿ ಭಗವಂತನ ನಾಮ 26

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಜಪ 32

**ಅನು : ಶ್ರೀ ವೀರೇಂದ್ರ ಸಿಂಪಿ**

ಮಂತ್ರ ಹಾಗೂ ಸಮಗ್ರ ಯೋಗ 39

**ವಾರ್ತಾಪತ್ರ** 47


**(All India Magazine)ದ ಸಂಪಾದಕರ ಟಿಪ್ಪಟಿ:** ಮಂತ್ರ ಕುರಿತು ಶ್ರೀ ಅರವಿಂದರು ತಿಳಿಯಪಡಿಸಿದ್ದು ಹೀಗಿದೆ: "ಅಳಾತಿ ಆಳದ ಆಧ್ಯಾತ್ಮಿಕ ನೈಜತೆಯ ಕಾವ್ಯಾತ್ಮಕ ಅಭಿವ್ಯಕ್ತಿಯಾದ ಮಂತ್ರ ಬರುವುದು ಸಾಧ್ಯವಾಗಬೇಕಾದರೆ ಕಾವ್ಯಾತ್ಮಕ ವಚನ(speech)ದ ಮೂರು ಗಾಢತೆಗಳು ಭೇಟಿ ಮಾಡಿ ದೃಢವಾಗಿ ಏಕವಾಗಬೇಕು. ಆ ಮೂರು ಗಾಢತೆಗಳು ಹೀಗಿವೆ: ಲಯಬದ್ಧ ಚಲನೆಯ ಅತ್ಯುಚ್ಚ ಗಾಢತೆ, ಶಾಬ್ದಿಕ ರೂಪ, ಯೋಚನೆಯ ಮೂಲತತ್ವ, ಶೈಲಿ ಇವು ಅನ್ಯೋನ್ಯವಾಗಿ ಬೆರೆತದ್ದರ ಅತ್ಯುಚ್ಚ ಗಾಢತೆ, ಸತ್ಯವನ್ನು ಕುರಿತಾದ ಆತ್ಮದ ದರ್ಶನದ ಅತ್ಯುಚ್ಚ ಗಾಢತೆ:" ಅದು (ಮಂತ್ರ) ದೈವೀ ಸತ್ಯದ ದರ್ಶನದತ್ತ ದಿವ್ಯಾನಂದದಿಂದ, ಆರಾಧನೆಯಿಂದ ಜಿಗಿದೆದ್ದು ಬರುವ ಆತ್ಮದ ಕೂಗು. ಉಚ್ಚತರ ಗಗನ ಮಂಡಲ ಮಂತ್ರದ ರಹಸ್ಯ ಜನ್ಮಸ್ಥಳ, ಆತ್ಮ ಮರ್ತ್ಯ ಮನಸ್ಸಿನ ಸೀಮಿತ ವ್ಯಾಪ್ತಿಯಿಂದ ಹೊರಗೆ ಅನಂತನ ಸೀಮಿತವಲ್ಲದ ದರ್ಶನದಲ್ಲಿ ಆರೋಹಣ ಮಾಡುತ್ತಿದ್ದಂತೆ ಮಂತ್ರ ಜನ್ಮ ತಾಳುವುದಕ್ಕೆ ಸಾಕ್ಷಿಯಾಗುತ್ತದೆ. ಹಾಗಾಗಿ ಮಂತ್ರ ಕೇವಲ ಕೆಲವು ಗಾಢ ಅರ್ಥವನ್ನು ತುಂಬಿಕೊಂಡ ಸಂಸ್ಕೃತ ಶಬ್ದಗಳನ್ನು ಹೊಂದಿರುವುದಕ್ಕಿಂತ ಇನ್ನೂ ಹೆಚ್ಚಿನದಾಗಿರುತ್ತದೆ. ಮಂತ್ರ ಯಾವುದೇ ಭಾಷೆಯಲ್ಲಿರಬಹುದು, ಏಕೆಂದರೆ, ಅದು ದೈವೀ ನಿಶ್ಚಲ ನೀರವತೆಯಿಂದ ಜನಿಸಿ ಬಂದಿರುತ್ತದೆ, ಆ ನೀರವತೆ ದೈವೀ ಅದೃಶ್ಯನಾದವನ ಸುತ್ತ ತಾರೆಗಳ ಕಂಠಹಾರವನ್ನು ಹೆಣೆಯುತ್ತದೆ. ಅದರ ಆಳವು ಅರ್ಥ ಇಲ್ಲವೆ ವಿಚಾರ ಇಂತಹಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ, ಆದರಾಚೆಗೆ ಧ್ವನಿಯ ಕಂಪನಗಳತ್ತ ಸಾಗುತ್ತದೆ. ಆ ಕಂಪನಗಳು ಅಭೀಪ್ಸೆ ಮತ್ತು ಪ್ರೇಮ ಇವುಗಳ ರೆಕ್ಕೆಗಳ ಮೇಲೆ ಏರಿ ಹೋಗುತ್ತವೆ ಮತ್ತು ಕೇಳಿಸಿಕೊಳ್ಳುವವನನ್ನು ದೈವೀ ಸತ್ಯದ ಮನೆಯತ್ತ ಕೊಂಡೊಯ್ಯುತ್ತವೆ, ಇಲ್ಲವೆ ಸೃಷ್ಟಿಯ ಮುಖವಾಡಗಳ ಹಿಂದೆ ಅಡಗಿಕೊಂಡಿರುವ ಮಹಿಮೆಯ ಒಂದಿಷ್ಟನ್ನು ತೆರೆದು ತೋರಿಸುತ್ತವೆ. ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ತಮ್ಮ ಬರಹಗಳಿಂದ, ಮಾಂತ್ರಿಕ ಮಾತುಗಳಿಂದ ನಮಗೆ ತೆರೆದು ತೋರಿಸಿದ ಸತ್ಯಗಳನ್ನು ಹೊರತರುವುದನ್ನು ಈ ಸಂಚಿಕೆಯಲ್ಲಿ ಅರಸಿದ್ದೇವೆ.

*

## ಮಂತ್ರದ ಸಿದ್ಧಾಂತ

### ಭೌತಿಕ ಜಗತ್ತಿನಲ್ಲಿ ಧ್ವನಿಗೆ ಸಾಮರ್ಥ್ಯವಿದೆ

... ಧ್ವನಿಗೆ ಯಾವಾಗಲೂ ಸಾಮರ್ಥ್ಯವಿರುತ್ತದೆ, ಮನುಷ್ಯರು ಯೋಚಿಸುವುದಕ್ಕಿಂತ ಹೆಚ್ಚಿನ ಸಾಮರ್ಥ್ಯ ಅದಕ್ಕಿರುತ್ತದೆ. ಅದು ಒಳ್ಳೆಯ ಸಾಮರ್ಥ್ಯವಾಗಿರಬಹುದು ಇಲ್ಲವೆ ಕೆಟ್ಟ ಸಾಮರ್ಥ್ಯವಾಗಿರಬಹುದು. ನಿರಾಕರಿಸಲು ಸಾಧ್ಯವಿಲ್ಲದಷ್ಟು ಸಾಮರ್ಥ್ಯವನ್ನು ಧ್ವನಿ ಸೃಷ್ಟಿಸುತ್ತದೆ. ಧ್ವನಿಯನ್ನು ಕುರಿತು ಇರುವ ವಿಚಾರವಷ್ಟೇ ಧ್ವನಿಯದಾಗಿರುವುದಿಲ್ಲ, ವಿಚಾರಕ್ಕೂ ಅದರದೇ ಪ್ರಾಂತವಿದೆ, ವಿಚಾರಕ್ಕೆ ಅದರದೇ ಸಾಮರ್ಥ್ಯವಿದೆ – ಅದು ಹಾಗಿರುವಾಗ ಭೌತಿಕ ಜಗತ್ತಿನಲ್ಲಿ ಧ್ವನಿಗೆ ಸಾಮರ್ಥ್ಯವಿದೆ.

ಪ್ರಾಸಂಗಿಕವಾಗಿ, ಯಾವುದೇ ಚಿಂತನ ಕೈಕೊಳ್ಳದೆ, ಯಾವುದೇ ಮಹತ್ವವನ್ನು ಅಂಟಿಸದೆ ಹೇಳಿದ ಶಬ್ದಗಳನ್ನು ಒಳ್ಳೆಯದಾದ ಏನೋ ಒಂದನ್ನು ಕೈಕೊಳ್ಳಲು ಉಪಯೋಗಿಸಬಹುದೆಂದು ನಾನು ಒಮ್ಮೆ ನಿಮಗೆ ವಿವರಿಸಿ ಹೇಳಿದ್ದೇನೆಂದು ನನಗನಿಸುತ್ತದೆ. ಶುಭ ದಿನ (Bonjour, Goodday) ಶಬ್ದವನ್ನು ಕುರಿತು ನಾನು ಹೇಳಿದ್ದೇನೆಂದು ನನಗನಿಸುತ್ತದೆ. ಜನರು ಒಬ್ಬರನ್ನೊಬ್ಬರು ಭೇಟಿ ಮಾಡಿದಾಗ ಹೇಳುವ ಆ ಶಬ್ದವನ್ನು ಬಹಳ ಯಾಂತ್ರಿಕವಾಗಿ, ಅದರ ಬಗ್ಗೆ ಯೋಚಿಸದೆ ಹೇಳುತ್ತಾರೆ. ಯಾರೋ ಒಬ್ಬರಿಗೆ ಶುಭ ದಿನವನ್ನು ಹಾರೈಸಿದಾಗ ನೀವು ಅದರಲ್ಲಿ ಸಂಕಲ್ಪವನ್ನಿರಿಸಿದರೆ, ಅಭೀಪ್ಸೆಯೊಂದನ್ನಿರಿಸಿದರೆ ಅದು ಬಹಳ ಪರಿಣಾಮ–ಕಾರಿಯಾಗುತ್ತದೆ. ಯಾರೋ ಒಬ್ಬರನ್ನು ಭೇಟಿ ಮಾಡಿದಾಗ “ಅಹಾ, ಅವನಿಗೆ ಈ ದಿನ ಶುಭ ದಿನವಾಗಲಿ” ಎಂದು ಕೇವಲ ಮನಸ್ಸಿನಲ್ಲಿ ಯೋಚಿಸುವುದಕ್ಕಿಂತ ಮೇಲೆ ಹೇಳಿದ ರೀತಿಯನ್ನು ಅನುಸರಿಸಿದರೆ ಅದು ಹೆಚ್ಚು ಪರಿಣಾಮಕಾರಿ–ಯಾಗುತ್ತದೆ. ನಿಮ್ಮ ಯೋಚನೆಯಲ್ಲಿ ಆ ಆಶಯವನ್ನಿಟ್ಟುಕೊಂಡು ಅವನಿಗೆ ಒಂದು ರೀತಿಯಲ್ಲಿ “ನಿನಗೆ ಶುಭ ದಿನವಾಗಲಿ” ಎಂದು ಅವನಿಗೆ ಹೇಳಿದರೆ ನೀವು ಅದು ಹೆಚ್ಚು ಮೂರ್ತರೂಪದ್ದಾಗುವಂತೆ, ಪರಿಣಾಮಕಾರಿಯಾಗುವಂತೆ ಮಾಡುತ್ತೀರಿ.

ಶಾಪಗಳನ್ನು ಕೊಡುವಾಗ ಇಲ್ಲವೆ ಮನುಷ್ಯ ಸಿಟ್ಟಿಗೆದ್ದು ಜನರಿಗೆ ಕೆಟ್ಟ ವಿಷಯಗಳನ್ನು ಹೇಳುತ್ತಿರುವಾಗ ಕೂಡ ಅನುಸರಿಸುವ ರೀತಿ ಅಂತಹದೇ ಆಗಿರುತ್ತದೆ. ಅದು ಅವರ ಕಪಾಳದ ಮೇಲೆ ಹೊಡೆಯುವುದಕ್ಕಿಂತ ಹೆಚ್ಚಿನ ಹಾನಿಯನ್ನು – ಕೆಲವೊಮ್ಮೆ ಇನ್ನೂ ಹೆಚ್ಚಿನ ಹಾನಿಯನ್ನು ಮಾಡುತ್ತದೆ. ಅದು ಸೂಕ್ಷ್ಮ ಸಂವೇದಿಗಳಾದ ಜನರ ಹೊಟ್ಟೆಯನ್ನು ಹದಗೆಡಿಸಬಹುದು, ಇಲ್ಲವೆ



ಅವರು ಹೃದಯಾತಿಸ್ಪಂದನ (palpitation)ದ ಬಾಧೆಗೆ ಒಳಗಾಗಬಹುದು, ಏಕೆಂದರೆ ನೀವದರಲ್ಲಿ ವಿನಾಶಕಾರಿ ಶಕ್ತಿಯಿರುವುದರ ಸಾಮರ್ಥ್ಯವನ್ನು ಇರಿಸುತ್ತೀರಿ.

ಮಾತನಾಡುವುದು ಪರಿಣಾಮಕಾರಿಯಾಗಿರದೆ ಇರುವುದು ಸಾಧ್ಯವಿಲ್ಲ. ಸ್ವಾಭಾವಿಕವಾಗಿ ಅದು ಮನುಷ್ಯನ ಆಂತರಿಕ ಸಾಮರ್ಥ್ಯದ ಮೇಲೆ ಅವಲಂಬಿಸಿರುತ್ತದೆ. ಬಲವಿಲ್ಲದ, ಪ್ರಜ್ಞೆರಹಿತ ಜನರು ಬಹಳಷ್ಟನ್ನು ಕೈಕೊಳ್ಳಲಾರರು – ಅವರು ಅದಕ್ಕಾಗಿ ಭೌತಿಕ ಸಾಧನೆಗಳನ್ನು ಬಳಸಬೇಕಾಗುವುದು. ಆದರೆ ನೀವು ಬಲಿಷ್ಠರಾಗಿರುವಷ್ಟರ ಮಟ್ಟಿಗೆ, ವಿಶೇಷವಾಗಿ ನಿಮ್ಮದು ಸಾಮರ್ಥ್ಯಪೂರ್ಣ ಪ್ರಾಣಿಕವಾಗಿದ್ದರೆ ನಿಮ್ಮ ಮಾತಿನ ಮೇಲೆ ಬಹಳ ನಿಯಂತ್ರಣವಿರಬೇಕು, ಹಾಗಿಲ್ಲದಿದ್ದರೆ ನೀವು ಬಹಳ ಹಾನಿಯನ್ನು ಉಂಟುಮಾಡಬಲ್ಲಿರಿ. ಅದನ್ನು ನೀವು ಬಯಸದೆ, ತಿಳಿದುಕೊಳ್ಳದೆ ಅಜ್ಞಾನದಿಂದ ಕೈಕೊಳ್ಳುತ್ತೀರಿ.

**(CWM, 7/343–44)**

*

### ಶಬ್ದಗಳ ಸಾಮರ್ಥ್ಯ ಮೂರು ಭಿನ್ನ ಮೂಲಗಳಿಂದ ಬರುತ್ತದೆ

ಪ್ರತಿದಿನ ಉಚ್ಚರಿಸಲಾಗುವ ನಿರುಪಯುಕ್ತ ಶಬ್ದಗಳ ಮೊತ್ತ ಕುರಿತು ನಿಮ್ಮ ಲಕ್ಷ್ಯ ಸೆಳೆಯುವುದು ಅನವಶ್ಯಕ ಎಂದು ತೋರಿ ಬರುತ್ತದೆ. ಈ ಅನಿಷ್ಟ ಎಲ್ಲರಿಗೂ ಸುಪರಿಚಿತವಾದದ್ದು, ಹಾಗಿದ್ದಾಗ್ಯೂ ಅತಿ ಕಡಿಮೆ ಜನರು ಅದನ್ನು ನಿವಾರಿಸುವುದಕ್ಕೆ ಉಪಾಯ ಕುರಿತು ಯೋಚಿಸುವುದಿಲ್ಲ.

ಆದರೆ ಅನವಶ್ಯಕವಾಗಿ ಉಚ್ಚರಿಸಲಾಗುವ ಬಹಳಷ್ಟು ಇತರ ಶಬ್ದಗಳಿರುತ್ತವೆ. ಎಂದರೆ ದಿನದ ಸಮಯದಲ್ಲಿ ಸಹಾಯಕವಾಗುವ ಒಂದು ಇಲ್ಲವೆ ಇನ್ನೊಂದು ಶಬ್ದವನ್ನು ಉಚ್ಚರಿಸುವ ಅವಕಾಶ ಬಹಳಷ್ಟು ಸಲ ನಮಗಿರುತ್ತದೆ. ಅದಕ್ಕಾಗಿ ಶಬ್ದಗಳ ಹಿಂದೆ ಸಮಂಜಸವಾದ ಯೋಚನೆಯನ್ನು ಹೇಗೆ ಇರಿಸಬೇಕೆಂಬುದನ್ನು ನಾವು ತಿಳಿದುಕೊಂಡಿರಬೇಕು.

ಆದರೆ ನಮಗೆ ಪರಿಚಿತರಾದವರ ಸುತ್ತಲೂ ಪರೋಪಕಾರಿ ಮಾನಸಿಕ ವಾತಾವರಣವನ್ನು ಮತ್ತು ನಿಜವಾಗಿ ಅವರಿಗೆ ಸಹಾಯ ನೀಡುವುದನ್ನು ಎಳೆದು ತರಬಹುದಾದ ಅವಕಾಶವನ್ನು ನಾವು ಕಳೆದುಕೊಳ್ಳುತ್ತೇವೆ. ಅಲಕ್ಷಿಸುವ ಈ ವಿಷಯಕ್ಕೆ ನಿವಾರಿಸುವ ಉಪಾಯ ಹುಡುಕುವುದು ಬಹಳ ಉಪಯುಕ್ತವಾಗಿರುತ್ತದೆ.

ಇದನ್ನು ಕೈಕೊಳ್ಳಲು ಆ ಅಸ್ಪಷ್ಟ ಮತ್ತು ನಿಷ್ಕ್ರಿಯ ಹಾಗೂ ನಿಖರವಿಲ್ಲ–ದಿರುವಿಕೆಯ ಸ್ಥಿತಿಯಲ್ಲಿ ನಮ್ಮ ಮನಸ್ಸುಗಳು ಉಳಿದುಕೊಳ್ಳುವುದಕ್ಕೆ ಅನುವು ಮಾಡಿಕೊಡುವುದನ್ನು ತಿರಸ್ಕರಿಸಬೇಕು, ಆ ಸ್ಥಿತಿ ಬಹಳಷ್ಟು ಜನರಲ್ಲಿ ಬಹುಮಟ್ಟಿಗೆ ಸತತ ಇರುತ್ತದೆ.

ಈ ತೂಕಡಿಕೆಯ ಸ್ಥಿತಿಯಿಂದ ನಮ್ಮನ್ನು ಪ್ರಗತಿಪರವಾಗಿ ಚಿಕಿತ್ಸೆ–ಗೊಳಪಡಿಸಲು, ನಾವು ಒಂದು ಶಬ್ದವನ್ನು ಉಚ್ಚರಿಸಿ ಹೇಳುವಾಗ ಅದರ ನಿಜವಾದ ಅರ್ಥ ಹಾಗೂ ಪ್ರಾಧಾನ್ಯ ಕುರಿತು ಚಿಂತನ ಮಾಡಬೇಕು, ಅದರಿಂದಾಗಿ ಅದು ಪೂರ್ತಿ ಪರಿಣಾಮಕಾರಿಯಾಗುವುದು.

ಶಬ್ದಗಳ ಕ್ರಿಯಾಶೀಲ ಸಾಮರ್ಥ್ಯ ಮೂರು ಭಿನ್ನ ಕಾರಣಗಳಿಂದ ಬರುತ್ತದೆಂದು ಈ ಸಂದರ್ಭದಲ್ಲಿ ನಾವು ಹೇಳಬಹುದು. ಮೊದಲಿನ ಎರಡು ಕಾರಣಗಳು ಆ ಶಬ್ದದಲ್ಲಿಯೇ ಇರುತ್ತವೆ, ಅದು ಶಕ್ತಿಗಳನ್ನು ಸಂಗ್ರಹಿಸುವ ಬ್ಯಾಟರಿ (battery) ಯಾಗಿರುತ್ತದೆ. ಮೂರನೆಯದು ಆ ಶಬ್ದವನ್ನು ನಾವು ಉಚ್ಚರಿಸಿದಾಗ ಅದು ಅಭಿವ್ಯಕ್ತಪಡಿಸಿದ ಆಳವಾದ ಚಿಂತನದಲ್ಲಿ ಜೀವಿಸುವ ವಾಸ್ತವತೆಯಲ್ಲಿ ಉಳಿದುಕೊಂಡಿರುತ್ತದೆ. ಪರಿಣಾಮಕಾರಿತ್ವದ ಈ ಮೂರೂ ಕಾರಣಗಳನ್ನು ಒಟ್ಟಿಗೆ ಸೇರಿಸಿದಾಗ ಶಬ್ದದ ಸಾಮರ್ಥ್ಯ ಸಾಕಷ್ಟು ಹೆಚ್ಚಾಗುತ್ತದೆ.

1. ಕೆಲವು ಶಬ್ದಗಳಿವೆ, ಭೌತಿಕ ಜಗತ್ತಿನಲ್ಲಿ ಅವುಗಳ ಅನುರಣನ (resonance) ಯೋಚನೆಯಿಂದ ಅದರದೇ ಪ್ರಾಂತದಲ್ಲಿ ಉತ್ಪಾದಿಸಲಾದ ಸೂಕ್ಷ್ಮ ಕಂಪನಗಳು ಪರಿಪೂರ್ಣ ಕಂಪನಗಳ ರೂಪದಲ್ಲಿ ಮೂರ್ತರೂಪ ತಾಳಿರುವುದಾಗಿರುತ್ತದೆ.

   ಚಿಂತನ ಹಾಗೂ ಧ್ವನಿ ಇವುಗಳ ಕಂಪನಗಳಲ್ಲಿರುವ ಏಕರೂಪತೆಯನ್ನು ನಾವು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ನಾವು ಸೀಮಿತ ಸಂಖ್ಯೆಯಲ್ಲಿ ಬೇರಿನ ರೂಪದಲ್ಲಿರುವ ಉಚ್ಚಾರಾಂಶ (syllable) ಗಳನ್ನು ಶೋಧಿಸಬಹುದು, ಅವು ಅತ್ಯಂತ ಸರ್ವಸಾಧಾರಣ ವಿಚಾರಗಳನ್ನು ಅಭಿವ್ಯಕ್ತಗೊಳಿಸುತ್ತವೆ ಮತ್ತು ಅವುಗಳನ್ನು ನಿರ್ದಿಷ್ಟ ರೀತಿಯಲ್ಲಿ ಮಾತನಾಡುವ ಭಾಷೆಗಳಲ್ಲಿ ಬಹುಮಟ್ಟಿಗೆ ಒಂದೇ ರೀತಿಯ ಅರ್ಥ ಹೊಂದಿರುವ ರೀತಿಯಲ್ಲಿ ಕಂಡುಕೊಳ್ಳಬಹುದು. (ಭಾಷೆಯ ಈ ಮೂಲವನ್ನು ಬರಹದ ರೂಪದಲ್ಲಿರುವ ಭಾಷೆಯ ಮೂಲವೆಂದು ತಿಳಿದು ಗೊಂದಲಕ್ಕೀಡಾಗಬಾರದು, ಅವು ಒಟ್ಟಿನಲ್ಲಿ ಭಿನ್ನ ಸ್ವರೂಪದವಾಗಿದ್ದು, ಭಿನ್ನ ಆವಶ್ಯಕತೆಗಳಿಗೆ ಅನುಗುಣವಾಗಿರುತ್ತವೆ.)



2. ಇನ್ನಿತರ ಶಬ್ದಗಳಿವೆ, ಅವುಗಳನ್ನು ಕೆಲವೊಂದು ವಿಶಿಷ್ಟ ಸಂದರ್ಭಗಳಲ್ಲಿ, ನೂರಾರು ವರ್ಷಗಳ ಕಾಲದಲ್ಲಿ, ಪುನರುಚ್ಚರಿಸಲಾಗಿರುತ್ತದೆ, ಅವುಗಳನ್ನು ಉಚ್ಚರಿಸಿದ ಎಲ್ಲರ ಮಾನಸಿಕ ಶಕ್ತಿಗಳಿಂದ ಅವು ತುಂಬಿಕೊಂಡಿರುತ್ತವೆ.

   ಅವು ಚೈತನ್ಯದ ನಿಜವಾದ ಬ್ಯಾಟರಿ (battery) ಗಳಾಗಿರುತ್ತವೆ.

3. ಕೊನೆಯಲ್ಲಿ ಹೇಳಬಹುದಾದುದು ಇದು: ಉಚ್ಚರಿಸುವ, ಜೀವಂತವಿರುವ ಯೋಚನೆಯ ಪರಿಣಾಮದಿಂದಾಗಿ, ಉಚ್ಚರಿಸಿದ ಕೂಡಲೆ ಮೌಲ್ಯವನ್ನು ಪಡೆಯುವ ಅನ್ಯ ಶಬ್ದಗಳಿವೆ.

ನಾನು ಇದೀಗ ಹೇಳಿದುದಕ್ಕೆ ಉದಾಹರಣೆ ನೀಡುವೆ: ಆ ಮೂರೂ ವರ್ಗಗಳ ಗುಣಗಳನ್ನು ಕ್ರೋಡೀಕರಿಸುವ ಬಹಳ ಸಾಮರ್ಥ್ಯಪೂರ್ಣ ಶಬ್ದವೊಂದಿದೆ, ಅದು 'ಓಂ' ಎಂಬ ಸಂಸ್ಕೃತ ಶಬ್ದ.

ದೈವೀ ಸರ್ವವ್ಯಾಪಕತೆಯನ್ನು ಅಭಿವ್ಯಕ್ತಪಡಿಸಲು ಅದನ್ನು ಭಾರತದಲ್ಲಿ ಉಪಯೋಗಿಸಲಾಗುತ್ತದೆ. ಅಲ್ಲಿ ಪ್ರತಿಯೊಂದು ಧ್ಯಾನ, ಪ್ರತಿಯೊಂದು ಚಿಂತನ, ಪ್ರತಿಯೊಂದು ಯೌಗಿಕ ಆಚರಣೆ ಇವೆಲ್ಲವುಗಳೊಂದಿಗೆ ಅದನ್ನು ಜತೆಗೂಡಿಸ–ಲಾಗಿರುತ್ತದೆ.

ಬೇರೆ ಯಾವುದೇ ಧ್ವನಿಗಿಂತ ಹೆಚ್ಚಾಗಿ 'ಓಂ'ದ ಈ ಧ್ವನಿ ಶಾಂತಿ, ಪ್ರಶಾಂತತೆ ಹಾಗೂ ಶಾಶ್ವತತೆ ಇವುಗಳ ಭಾವನೆ ಮೇಲೆದ್ದು ಬರುವಂತೆ ಮಾಡುತ್ತದೆ.

ಅಲ್ಲದೆ ಈ ಶಬ್ದ ಮಾನಸಿಕ ಶಕ್ತಿಯಿಂದ ತುಂಬಿಕೊಂಡಿದೆ, ಅದನ್ನು ಶತಮಾನಗಳ ಕಾಲ ಉಪಯೋಗಿಸಿದವರು ಅದರ ಸುತ್ತ ಅದು ಅಭಿವ್ಯಕ್ತಪಡಿಸುವ ವಿಚಾರವನ್ನು ಸಂಗ್ರಹಿಸಿದ್ದಾರೆ. ಮತ್ತು ವಿಶೇಷವಾಗಿ ಹಿಂದೂ ಜನರಿಗೆ ಆ ಶಬ್ದ ಮನುಷ್ಯನನ್ನು ದೈವೀ ಸತ್ಯದ ಸಾರವನ್ನು ಆಹ್ವಾನಿಸುವತ್ತ ಸಂಪರ್ಕ ಕಲ್ಪಿಸುವ ಸಾಮರ್ಥ್ಯ ಹೊಂದಿರುತ್ತದೆ.

ಪೌರ್ವಾತ್ಯರಲ್ಲಿ ಧಾರ್ಮಿಕ ಮನಸ್ಸು ಮತ್ತು ಏಕಾಗ್ರತೆಯಲ್ಲಿರುವ ರೂಢಿ ಇರುವುದರಿಂದ ಈ ಶಬ್ದದಲ್ಲಿ ಅದು ಪೂರ್ತಿ ಪರಿಣಾಮಕಾರಿಯಾಗಲು ಅವಶ್ಯವಾದ ಮನವರಿಕೆಯನ್ನಿರಿಸದೆ ಉಚ್ಚರಿಸುವವರು ಅತಿ ಕಡಿಮೆ ಸಂಖ್ಯೆಯಲ್ಲಿರುತ್ತಾರೆ. ಚಾಯನಾ ದೇಶದಲ್ಲಿ 'ಓಂ'ದಂತಹ ಅರ್ಥವಿರುವ ಮತ್ತು ಅದಕ್ಕೆ ಸರಿಸಮವಾದ ಧ್ವನಿಯಿರುವ ಶಬ್ದ ತಾವೋ (TAO) ದಿಂದ ಅದೇ ಬಗೆಯ ಪರಿಣಾಮವನ್ನು ದೊರಕಿಸಲಾಗುತ್ತದೆ.

ನಮ್ಮ ಪಾಶ್ಚಿಮಾತ್ಯ ಭಾಷೆಗಳು, ಅವುಗಳ ಸದ್ಯದ ರೂಪದಲ್ಲಿ, ಕಡಿಮೆ ಅರ್ಥಗರ್ಭಿತವಾದವುಗಳಾಗಿವೆ, ಅವುಗಳಿಗೆ ಜನ್ಮ ನೀಡಿದ ಮೂಲ ಭಾಷೆಯಿಂದ ಬಹಳ ದೂರವಾಗಿವೆ. ಆದರೆ ಜೀವಂತವಿರುವ ಹಾಗೂ ಕ್ರಿಯಾಶೀಲವಾದ ನಮ್ಮ ಯೋಚನೆಯಿಂದ ಒಂದು ಶಬ್ದಕ್ಕೆ, ಯಾವಾಗಲೂ, ಜೀವ ತುಂಬಬಲ್ಲೆವು.

ಸಾಮಾನ್ಯ ರೀತಿಯಲ್ಲಿ ಉಪಯೋಗದಲ್ಲಿರುವ ಶಬ್ದಗಳಿಗೆ ನಾವು ಲಾಭದಾಯಕವಾಗುವಂತೆ ಅಧಿಕವಾಗಿ ಕೂಡಿಸಬಹುದಾದ ಸೂತ್ರಗಳಿವೆ.

ಪ್ರಾಚೀನ ಕಾಲದಲ್ಲಿ ದೀಕ್ಷೆ ಕೊಡುವ ಕೆಲವೊಂದು ಮಠಗಳಲ್ಲಿ ಈ ಸೂತ್ರಗಳನ್ನು ಉಪಯೋಗಿಸಲಾಗುತ್ತಿತ್ತು. ಅವುಗಳು ಅಭಿವಂದಿಸುವುದಕ್ಕಾಗಿ (greetings) ಉಪಯುಕ್ತವಾಗಿದ್ದವು, ಅವುಗಳನ್ನು ಕುರಿತು ಹೇಗೆ ಯೋಚಿಸಬೇಕು ಎಂದು ತಿಳಿದುಕೊಂಡವರ ಬಾಯಲ್ಲಿ ಅವುಗಳಿಗೆ ಕ್ರಿಯೆಯ ವಿಶಿಷ್ಟ ಸಾಮರ್ಥ್ಯವಿರುತ್ತಿತ್ತು. ಧಾರ್ಮಿಕ ಪಥದಲ್ಲಿ ಮೊದಲ ಹೆಜ್ಜೆ ಇರಿಸುತ್ತಿದ್ದ ಅನುಯಾಯಿಗಳು ಹಾಗೂ ಹೊಸದಾಗಿ ಮಠಕ್ಕೆ ಸೇರಿದವರು, ಇಂತಹರನ್ನು "ಸಮತೋಲನದ ಶಾಂತಿ ನಿಮ್ಮೊಂದಿಗಿರಲಿ" ಎಂದು ಅಭಿವಂದಿಸಲಾಗುತ್ತಿತ್ತು.

ಸತತ ಹಾಗೂ ಪ್ರಗತಿಪರ ಆಂತರಿಕ ಹಾಗೂ ಬಾಹ್ಯ ಮನೋಭಾವದಿಂದ ತಮ್ಮ ಆಳವಾದ ಹಾಗೂ ಉಳಿದುಕೊಳ್ಳುವ ಸದ್ಭಾವನೆಯನ್ನು ತೋರಿಸಿದವರಿಗೆ "ಅತ್ಯಂತ ಹೆಚ್ಚಿನ ಒಳ್ಳೆಯದು ನಿಮ್ಮದಾಗಲಿ" ಎಂದು ಅಭಿವಂದಿಸಲಾಗುತ್ತಿತ್ತು.

ಮತ್ತು, ವಿಶೇಷವಾಗಿ, ಉಚ್ಚ ಶಕ್ತಿಗಳನ್ನು ಪ್ರಕಟಿಸಬಲ್ಲ ಕೆಲವು ಬೋಧಕರಲ್ಲಿ ಈ ಶಬ್ದ ನಿಜವಾದ ಕಾಣಿಕೆಗಳನ್ನು ರವಾನಿಸುವ (transmitting) ಸಾಮರ್ಥ್ಯದಿಂದ ತುಂಬಿಕೊಂಡಿರುತ್ತಿತ್ತು, ಉದಾಹರಣೆಗೆ ರೋಗ ನಿವಾರಣ ಮಾಡುವ ಶಕ್ತಿಯ ಕಾಣಿಕೆ ಇಂತಹದಾಗಿತ್ತು.

**(CWM, 2/66–68)**

*

**ದೈವೀ ಶಬ್ದದ ಮೂಲ**

ದೈವೀ ಶಬ್ದ – ಅದು ಉಚ್ಚರಿಸಲಾದ ಮಾತಾಗಲಿ, ಶಬ್ದವಾಗಲಿ ಅಲ್ಲ. "ಪ್ರಕಾಶವಿರುವಂತಾಗಲಿ, ಆಗ ಅಲ್ಲಿ ಪ್ರಕಾಶವಿತ್ತು" ಎಂದು ಹೇಳುವ ಪ್ರಾಚೀನ ಕಾಲದ ಸಂಪ್ರದಾಯಗಳುಂಟು. ಆ ದೈವೀ ಶಬ್ದ ಮಂತ್ರವಾಗಿರುತ್ತದೆ. ಆದರೆ ಅದು ಅಸಾಧಾರಣವಾದ ಏನೋ ಒಂದು, ಆತ್ಮದಲ್ಲಿ ಸಂಕಲ್ಪ ಸೂತ್ರ ರೂಪ ತಾಳಿ



ಭೌತದ್ರವ್ಯದಲ್ಲಿ ಕೆಳಗಿಳಿದು ಬರಲು ಮತ್ತು ನೇರವಾಗಿ ಅ ಭೌತದ್ರವ್ಯದ ಮೇಲೆ ಕಾರ್ಯ ಕೈಕೊಳ್ಳಲು ಬಯಸಿದಾಗ ಅದು (ಸಂಕಲ್ಪ) ಧ್ವನಿಯ ಉಪಯೋಗ ಮಾಡುತ್ತದೆ, – ಶಬ್ದವನ್ನಷ್ಟೇ ಅಲ್ಲ, ಆದರೆ ಧ್ವನಿಯ ಹಾಗೂ ಅದರ ಕಂಪನದ ಉಪಯೋಗ ಮಾಡುತ್ತದೆ, ಅದು ಭೌತದ್ರವ್ಯದಲ್ಲಿ ನೇರವಾಗಿ ಭೌತದ್ರವ್ಯದ ಮೇಲೆ ಕ್ರಿಯೆ ಕೈಕೊಳ್ಳುತ್ತದೆ. ಅದು ವಿರುದ್ಧ ದಿಶೆಯಲ್ಲಾಗುವ ಚಲನೆ. ಶಬ್ದಗಳಿಂದ ಸೂತ್ರ ರೂಪ ತಾಳಿದ ಯೋಚನೆಯಿರುವ ಸ್ಥಳದಲ್ಲಿ ನೀವಿರುತ್ತೀರಿ, ಮತ್ತು ಆಗ ಅಲ್ಲಿಂದ ಮೇಲ್ಗಡೆಗೆ ಏರಿ ಹೋಗಬಹುದು ಮತ್ತು ಮೌನದಲ್ಲಿರುವ ವಿಚಾರದ ಅಭಿವ್ಯಕ್ತಿಯನ್ನು ದೊರಕಿಸಬಹುದು, ಮತ್ತೆ ಅಲ್ಲಿಂದ ಇನ್ನೂ ಉಚ್ಚತರವಾದುದರತ್ತ ಮೇಲಕ್ಕೇರಿ ಹೋಗಬಹುದು ಮತ್ತು ದೈವೀ ಶಕ್ತಿಯನ್ನು ಪಡೆಯಬಹುದು: ಯೋಚನೆಯದೇ ಮೂಲವಾದ ಅದು ದೈವೀ ಪ್ರಜ್ಞೆಯ ದೈವೀ ಶಕ್ತಿ ಮತ್ತು ಹಾಗಾಗಿ ಅದು ಇಡಿಯದಾದುರ ಪ್ರಜ್ಞೆ, ಸೂತ್ರ ರೂಪಗೊಂಡ ಏನೋ ಒಂದಾಗಲಿ ಇಲ್ಲವೆ, ಅಭಿವ್ಯಕ್ತಗೊಳಿಸಿ ಸೂತ್ರ ರೂಪ ಪಡೆದ ಏನೋ ಒಂದಾಗಲಿ ಅಲ್ಲ, ಎಂದರೆ ಅದರ ಬದಲಾಗಿ ನೀವು ಮೂಲದತ್ತ ಮರಳಿ ಸರಿಯಾಗಿ ಮೇಲಕ್ಕೇರಿ ಹೋಗುತ್ತೀರಿ. ಅಲ್ಲಿಂದ ಆ ಪ್ರಕಾಶವನ್ನು ಅದಿದ್ದ ಹಾಗೆ, ಆ ಪ್ರಜ್ಞೆಯನ್ನು ಅದಿದ್ದ ಹಾಗೆ ಪಡೆದಾಗ ಮತ್ತು ಒಂದು ಪರಿಣಾಮವನ್ನು ಉತ್ಪಾದಿಸಲು ಭೌತದ್ರವ್ಯದ ಮೇಲೆ ಕೈಕೊಳ್ಳಲು ಬಯಸಿದಾಗ, ಈ ಸಂಕಲ್ಪ ಒಂದು ಸ್ತರದಿಂದ ಇನ್ನೊಂದು ಸ್ತರಕ್ಕೆ ಕೆಳಗಿಳಿದು ಬರುತ್ತದೆ ಮತ್ತು ಅದು ಹೆಚ್ಚು ಹೆಚ್ಚಾಗಿ ಭೌತದ್ರವ್ಯದ ರೂಪದ್ದಾಗ ತೊಡಗಿದಾಗ, ಅದು ತನಗಾಗಿ ಶಬ್ದಗಳಲ್ಲಿ ಇಲ್ಲವೆ ಒಂದೇ ಶಬ್ದದಲ್ಲಿ ವ್ಯಾಖ್ಯೆ ಪಡೆಯುತ್ತದೆ ಮತ್ತು ಅದು ಭೌತದ್ರವ್ಯವನ್ನು ಸ್ಪರ್ಶಿಸಿದಾಗ, ಅದು ಮೌನದಲ್ಲಿರುವ ಏಕೈಕ ಶಬ್ದವಾಗಿರುವುದರ ಬದಲಾಗಿ, ಶಬ್ದಗಳೊಂದಿಗೆ ಸ್ಫುಟವಾಗಿ ಉಚ್ಚರಿಸಬಹುದಾದ ಧ್ವನಿಗಳೊಂದಿಗೆ ಒಂದು ಶಬ್ದವಾಗುತ್ತದೆ, ಭೌತದ್ರವ್ಯದ ಮೇಲೆ ನೇರವಾಗಿ ಕ್ರಿಯೆ ಕೈಕೊಳ್ಳಬಹುದಾದ ಕಂಪನವಾಗುತ್ತದೆ. ಮತ್ತೆ ಕೆಳಗಿಳಿದು ಬರಲು ಶಕ್ತನಾಗುವುದಕ್ಕೆ ಮನುಷ್ಯ ಎತ್ತರಕ್ಕೆ ಏರಿ ಹೋಗಬೇಕಾಗುತ್ತದೆ. ಕೆಳಗಿಳಿದು ಇದನ್ನು ಕೈಕೊಳ್ಳಲು ಶಕ್ತನಾಗುವುದಕ್ಕಾಗಿ ಮನುಷ್ಯ ನಿಶ್ಚಲ ನೀರವತೆಯಲ್ಲಿರುವ ಪ್ರಜ್ಞೆಯನ್ನು ತಲುಪಿರಬೇಕಾಗುತ್ತದೆ. ಅದು ಮೇಲಿನಿಂದ ಬರಬೇಕು, ಈ ಶಬ್ದದ ಮೂಲ ಮೇಲ್ಗಡೆ ಅಲ್ಲಿರಬೇಕು, ಮಧ್ಯವರ್ತಿ ಪ್ರಾಂತದಲ್ಲಿರಬಾರದು. ಆಗ ಅದು ದೈವೀ ಶಬ್ದ. ಮನುಷ್ಯ ನಾನು ಹೇಳಿದ್ದನ್ನು ಕೈಕೊಳ್ಳಬೇಕು – ಅದು ಸುಲಭವಾಗಿರುವ ಸಂಗತಿ ಅಲ್ಲ.

**(CWM, 6/98–99)** **– ಶ್ರೀಮಾತೆ**

*

## ಅನುಭಾವಿಗಳ ಪದ್ಧತಿಯಲ್ಲಿ ದೈವೀ ಶಬ್ದ

ಅನುಭಾವಿಗಳ ಪದ್ಧತಿ ಭಾರತೀಯ ಯೋಗಾಚರಣೆ ನಡೆದುಕೊಂಡು ಬಂದಿರುವ ಸ್ಥಳಗಳಲ್ಲಿ ಭಾಗಶಃ ಉಳಿದುಕೊಂಡಿದೆ. ದೈವೀ ಶಬ್ದ ಒಂದು ಸಾಮರ್ಥ್ಯ, ದೈವೀ ಶಬ್ದ ಸೃಷ್ಟಿಸುತ್ತದೆ. ಏಕೆಂದರೆ ಎಲ್ಲ ಸೃಷ್ಟಿ ಅಭಿವ್ಯಕ್ತಿಯಾಗಿದೆ, ಪ್ರತಿಯೊಂದು ಅದಾಗಲೆ ಅನಂತನ ನಿವಾಸದಲ್ಲಿ ಅಸ್ತಿತ್ವದಲ್ಲಿದೆ 'ಗುಹಾಽಹಿತಮ್' ಮತ್ತು ಅದನ್ನು ಇಲ್ಲಿ ಕ್ರಿಯಾಶೀಲ ಪ್ರಜ್ಞೆಯಿಂದ ಕೇವಲ ತೋರಿಕೆಯ ರೂಪದಲ್ಲಿ ಹೊರತರಬೇಕಾಗಿರುತ್ತದೆ. ವೈದಿಕ ಚಿಂತನಗಳನ್ನು ಅನುಸರಿಸುವ ಕೆಲವೊಂದು ಪಂಥ(school)ಗಳು ದೈವೀ ಶಬ್ದದ ದೇವಿಯಿಂದ ಲೋಕಗಳ ಸೃಷ್ಟಿಯಾಯಿ–ತೆಂದು ಮತ್ತು ರೂಪ ತಾಳುವಿಕೆಯ ಹಿಂದೆ ಶಬ್ದ ಆಕಾಶದ್ರವ್ಯದ ಮೊದಲ ಕಂಪನವಾಗಿತ್ತೆಂದು ಭಾವಿಸುತ್ತಾರೆ. ವೇದದಲ್ಲಿಯೇ ಸ್ವತಃ ಕೆಲವು ನಿರ್ದಿಷ್ಟ ಭಾಗಗಳಿವೆ, ಅವು ಪವಿತ್ರ ಮಂತ್ರಗಳು, ಅವುಗಳಿಗೆ ಅನುಷ್ಟುಪ್, ತ್ರಿಸ್ತುಭ, ಜಾಗತಿ ಹಾಗೂ ಗಾಯತ್ರಿ ಎಂಬ ಛಂದಸ್ಸುಗಳಿವೆ, ಅವು ಲಯಬದ್ಧತೆಯ ಸಂಕೇತಗಳಾಗಿದ್ದು ಅವುಗಳಲ್ಲಿ ವಸ್ತು–ವಿಷಯಗಳ ಚಲನೆಗೆ ರೂಪ ಕೊಡಲಾಗಿದೆ.

ಅಭಿವ್ಯಕ್ತಿಯ ಮೂಲಕ ನಾವು ಸೃಷ್ಟಿಸುತ್ತೇವೆ. ಮಂತ್ರದ ಮೂಲಕ ಮನುಷ್ಯರು ತಮ್ಮಲ್ಲಿ ದೇವತೆಗಳನ್ನು ಸೃಷ್ಟಿಸುತ್ತಾರೆಂದು ಕೂಡ ಹೇಳಲಾಗಿದೆ. ಮತ್ತೆ ದೈವೀ ಶಬ್ದದ ಮೂಲಕ ನಮ್ಮ ಪ್ರಜ್ಞೆಯಲ್ಲಿ ಸೃಷ್ಟಿಸಿದ್ದನ್ನು ಆ ದೈವೀ ಶಬ್ದದ ಮೂಲಕ ಅಲ್ಲಿಯೇ ಸ್ಥಿರಗೊಳಿಸಬಹುದು, ಅದು ನಮ್ಮ ಭಾಗವಾಗುತ್ತದೆ, ನಮ್ಮ ಆಂತರಿಕ ಜೀವನದಲ್ಲಿಯಷ್ಟೇ ಅಲ್ಲ ಆದರೆ ಬಾಹ್ಯ ಭೌತಿಕ ಜಗತ್ತಿನ ಮೇಲೂ ಕೂಡ ಪರಿಣಾಮಕಾರಿಯಾಗುತ್ತದೆ. ಅಭಿವ್ಯಕ್ತಿಯ ಮೂಲಕ ನಾವು ರೂಪಿಸುತ್ತೇವೆ, ದೃಢೀಕರಿಸುವುದರ ಮೂಲಕ ನಾವು ಸ್ಥಾಪಿಸುತ್ತೇವೆ. ಅಭಿವ್ಯಕ್ತಿಯ ಸಾಮರ್ಥ್ಯವೆಂದು ಆ ಶಬ್ದವನ್ನು ಗಿಹ್(gih) ಎಂದು ಇಲ್ಲವೆ ವಚಸ್ ಎಂದು ಕರೆಯುತ್ತಾರೆ. ದೃಢೀಕರಣದ ಸಾಮರ್ಥ್ಯವೆಂದು ಸ್ತೋಮ(stoma) ಎಂದು ಕರೆಯುತ್ತಾರೆ.

**(CWSA, 15/271–72)**

*

## ನಮ್ಮ ಮಾತಿನ ಹಿಂದಿರುವ ದೈವೀ ವಚನ

ದೈವೀ ಶಬ್ದವನ್ನು ಉಪಯೋಗಿಸುವ ಅತಿ ಮನಸ್ಸು ಸೃಷ್ಟ್ಯಾತ್ಮಕ ಲಾಂಛನ (logos).



ವೇದದಲ್ಲಿ ಬರುವ ಸನಾತನ ದೈವೀ ಶಬ್ದ 'ಓಂ'ದ ಉಚ್ಚಾರಾಂಶವನ್ನು ಸೂಚಿಸುವ ಅದರ ಬೀಜದ ಧ್ವನಿಗಳಿರುತ್ತವೆ, ಹಾಗೆಯೇ ವಸ್ತು–ವಿಷಯಗಳ ತತ್ವಗಳನ್ನು ಕೊಂಡೊಯ್ಯುವ ತಾಂತ್ರಿಕರ ಬೀಜ ರೂಪದ ಧ್ವನಿಗಳಿವೆ. ಓಂ ಶಬ್ದಕ್ಕೆ ದಿವ್ಯಜ್ಞಾನ ನೀಡುವ ಮತ್ತು ಸ್ಫೂರ್ತಿದಾಯಕವಾಗಿರುವ ಮಾತಿನ ಹಿಂದೆ ನಿಂತಿರುವ ರೂಪಗಳಿವೆ, ಆ ಮಾತು ಮನುಷ್ಯನ ಪರಮೋಚ್ಚ ಕಾರ್ಯ ಸಾಮರ್ಥ್ಯಗಳಿಗಾಗಿ ಬರುತ್ತದೆ, ಮತ್ತು ಇವು ವಿಶ್ವದಲ್ಲಿರುವ ವಸ್ತು–ವಿಷಯಗಳಿಗೆ ರೂಪಗಳನ್ನು ಒತ್ತಾಯದಿಂದ ನೀಡುತ್ತವೆ. ಅದಕ್ಕೆ ಅದರ ಲಯಬದ್ಧತೆಗಳಿವೆ – ಏಕೆಂದರೆ ಅದು ಅಸ್ತವ್ಯಸ್ತವಾದ ಕಂಪನವಲ್ಲ, ಆದರೆ ವಿಶ್ವವ್ಯಾಪಿ ಶ್ರೇಷ್ಠ ಗಾತ್ರಗಳಲ್ಲಿ ಬರುವಂತಹದು – ಮತ್ತು ಲಯಬದ್ಧತೆಗೆ ಅನುಗುಣವಾಗಿ ನಿಯಮ, ವ್ಯವಸ್ಥೆ, ಸಾಮರಸ್ಯ, ಮತ್ತು ಅದು ನಿರ್ಮಾಣ ಮಾಡುವ ಜಗತ್ತಿನ ವಿಧಾನಗಳಿವೆ. ಸ್ವತಃ ಜೀವನವೇ ಭಗವಂತನ ಒಂದು ಲಯಬದ್ಧತೆ. ...

ಆ ದೈವೀ ಶಬ್ದ, ನಮ್ಮ ಮಾತಿನ ಹಿಂದಿರುವ ದೈವೀ ವಚನ, ಅದರ ಸಾಮರ್ಥ್ಯದ ಸಾರದಲ್ಲಿ ಸ್ವತಃ ಸನಾತನನೇ ಆಗಿರುತ್ತದೆ ಮತ್ತು ಅದರ ಪರಮೋಚ್ಚ ಚಲನೆಯಲ್ಲಿ ಅವನದೇ ರೂಪದ ಭಾಗ ಮತ್ತು ಎಂದೆಂದಿಗೂ ಉಳಿದುಕೊಳ್ಳುವ ಆಧ್ಯಾತ್ಮಿಕ ದೇಹವಾಗಿರುತ್ತದೆ. 'ಬ್ರಹ್ಮಣೋ ರೂಪಮ್'. ಮಾನವನ ಮಾತು ಕೇವಲ ಗೌಣವಾದ ಅಭಿವ್ಯಕ್ತಿ ಮತ್ತು ಅದರ ತುತ್ತತುದಿಯಲ್ಲಿ ದೈವೀ ಶಬ್ದದ, ಬೀಜ ಧ್ವನಿಗಳ, ಸಮಾಧಾನ ನೀಡುವ ಲಯಬದ್ಧತೆಗಳ, ಮತ್ತು ಸನಾತನ ಚಿಂತಕ, ಸ್ವರಮೇಳ ಚತುರ, ಸೃಷ್ಟಿಕರ್ತ ಇವೆಲ್ಲವೂ ಆದ ಸರ್ವಜ್ಞ ಹಾಗೂ ಸರ್ವಸಮರ್ಥನ ಧ್ವನಿ ತೆರೆದು ತೋರಿಸುವ ರೂಪಗಳನ್ನು ಕುರಿತು ಅತ್ಯುಚ್ಚ ಮಟ್ಟದಲ್ಲಿ ಅವುಗಳ ಛಾಯೆ ಮಾತ್ರ. ಮಾನವನ ಮನಸ್ಸು ಸಿದ್ಧಿಸಿಕೊಳ್ಳಬಹುದಾದ ಅತ್ಯುಚ್ಚ ಮಟ್ಟದಲ್ಲಿ ಸ್ಫೂರ್ತಿ ಪಡೆದ ಮಾತು, ಪರಮೋಚ್ಚ ಸತ್ಯವನ್ನು ಹೆಚ್ಚಿನ ರೀತಿಯಲ್ಲಿ ಪ್ರಕಟಪಡಿಸುವ, ವಿಶ್ಲೇಷಣೆಗೊಳಗಾಗದ ಶಬ್ದ, ಮಂತ್ರದ ಅತ್ಯಂತ ಬಲವತ್ತರವಾದ ಉಚ್ಚಾರಾಂಶ ಇವೆಲ್ಲ ಅದಕ್ಕೆ ಅತಿ ದೂರದಲ್ಲಿರುವ ಪ್ರತಿನಿಧಿ ಸ್ವರೂಪದ್ದು ಮಾತ್ರ ಆಗಬಹುದು.

**(CWSA, 18/32–33)**

*

## ದೈವೀ ಶಬ್ದದ ರಹಸ್ಯ ಸಾಮರ್ಥ್ಯ

ಪ್ರಾಚೀನ ಕಾಲದ ವೈದಿಕ ಸಿದ್ಧಾಂತ ಮತ್ತು ಆಚರಣೆ ಮಾತಿನ ಈ ಸೃಷ್ಟ್ಯಾತ್ಮಕ

ಕ್ರಿಯೆಯನ್ನು ಮಂತ್ರದ ಮೂಲಕ ವಿಸ್ತರಿಸಿತು. ಮಂತ್ರದ ಸಿದ್ಧಾಂತವೆಂದರೆ ಇದು: ಮಂತ್ರ ಸಾಮರ್ಥ್ಯವಿದ್ದ ಶಬ್ದ, ನಮ್ಮ ಸತ್ತೆಯ ಆಳಾತಿ ಆಳದಲ್ಲಿರುವ ರಹಸ್ಯದಿಂದ ಜನಿಸಿದ್ದು, ಅಲ್ಲಿ ಮಾನಸಿಕವಾದದ್ದಕ್ಕಿಂತ ಹೆಚ್ಚು ಆಳದಲ್ಲಿರುವ ಪ್ರಜ್ಞೆಯಿಂದ ಚಿಂತನ ಕೈಕೊಂಡದ್ದು, ಹೃದಯದಲ್ಲಿ ರೂಪ ನೀಡಲಾಗಿರುವಂತಹದು, ಮೂಲತಃ ಬುದ್ಧಿಮತ್ತೆಯಿಂದ ರಚಿತವಾಗದೆ ಮನಸ್ಸಿನಲ್ಲಿ ಹಿಡಿದಿಟ್ಟುಕೊಳ್ಳದೆ ಇರುವಂತಹದು, ಮತ್ತೆ ಎಚ್ಚತ್ತ ಮಾನಸಿಕ ಪ್ರಜ್ಞೆಯಿಂದ ಅದನ್ನು ಏಕಾಗ್ರತೆಗೊಳಪಡಿಸಿ, ಮೌನದಿಂದ ಇಲ್ಲವೆ ಮಾತಿನ ಮೂಲಕ ಹೊರಗೆ ಚೆಲ್ಲಿಕೊಟ್ಟದ್ದು. ಸೃಷ್ಟಿಯ ಕಾರ್ಯಕ್ಕಾಗಿ, ನಿಖರವಾಗಿ, ಮಾತಿನಲ್ಲಿ ಹೇಳಿದ ಶಬ್ದಕ್ಕಿಂತ ಮೌನದಲ್ಲಿರಿಸಿದ ಶಬ್ದಕ್ಕೆ ಬಹುಶಃ ಹೆಚ್ಚಿನ ಸಾಮರ್ಥ್ಯವಿರಬಹುದು. ಮಂತ್ರ ಹೊಸ ವ್ಯಕ್ತಿನಿಷ್ಠ ಸ್ಥಿತಿಗಳನ್ನು ನಮ್ಮಲ್ಲಿಯೇ ಸೃಷ್ಟಿಸಬಲ್ಲದಷ್ಟೇ ಅಲ್ಲ, ನಮ್ಮ ಚೈತ್ಯ ಸತ್ತೆಯನ್ನು ಬದಲಿಸಬಲ್ಲದು. ಮೊದಲು ನಾವು ವಶದಲ್ಲಿ ಇರಿಸಿಕೊಂಡಿರದ ಜ್ಞಾನ ಹಾಗೂ ಕಾರ್ಯ ವಿಧಾನಗಳನ್ನು ತೆರೆದು ತೋರಿಸಬಲ್ಲದು. ಮಂತ್ರವನ್ನು ಉಪಯೋಗಿಸಿದವನ ಮನಸ್ಸಿನ ಹೊರತಾಗಿ ಇತರ ಮನಸ್ಸುಗಳಲ್ಲಿಯೂ ಕೂಡ ಅದೇ ಬಗೆಯ ಪರಿಣಾಮಗಳನ್ನು ಉತ್ಪಾದಿಸಬಲ್ಲದಷ್ಟೇ ಅಲ್ಲ, ಆದರೆ ಮಾನಸಿಕ ಹಾಗೂ ಪ್ರಾಣಿಕ ವಾತಾವರಣದಲ್ಲಿ ಕಂಪನಗಳನ್ನು ಉತ್ಪಾದಿಸಬಹುದು, ಅವು ಫಲಿತಾಂಶದಲ್ಲಿ, ಕ್ರಿಯೆಯಲ್ಲಿ, ಭೌತಿಕ ಸ್ತರದಲ್ಲಿ ಭೌತಿಕ ರೂಪಗಳ ಉತ್ಪಾದನೆಯಲ್ಲಿಯೂ ಕೂಡ ಪರಿಣಾಮಗಳನ್ನುಂಟು ಮಾಡುತ್ತವೆ.

ವಾಸ್ತವವಾಗಿ, ಸಾಧಾರಣವಾಗಿಯೂ ಕೂಡ, ದೈನಂದಿನವಾಗಿ, ಗಂಟೆ ಗಂಟೆಯಲ್ಲೂ ಶಬ್ದದ ಮೂಲಕ ನಾವು ಯೋಚನೆಯ ಕಂಪನಗಳನ್ನು, ರೂಪಗಳನ್ನು ಉತ್ಪಾದಿಸುತ್ತೇವೆ, ಅವು ತಮಗೆ ಅನುಗುಣವಾದ ಪ್ರಾಣಿಕ ಹಾಗೂ ಭೌತಿಕ ರೂಪಗಳಲ್ಲಿ ಪರಿಣಾಮ ಬೀರುತ್ತವೆ, ನಮ್ಮ ಮೇಲೆ ಕ್ರಿಯೆ ಕೈಕೊಳ್ಳುತ್ತವೆ, ನಮ್ಮ ಮೇಲೆ ಹಾಗೂ ಇತರರ ಮೇಲೆ ಕಾರ್ಯ ಕೈಕೊಳ್ಳುತ್ತವೆ ಮತ್ತು ಭೌತಿಕ ಜಗತ್ತಿನಲ್ಲಿ, ಕ್ರಿಯೆಗಳಲ್ಲಿ ಹಾಗೂ ರೂಪಗಳಲ್ಲಿ ನೇರವಲ್ಲದ ಸೃಷ್ಟಿಸುವಿಕೆಯಲ್ಲಿ ಕೊನೆಗೊಳ್ಳುತ್ತವೆ.

ಮನುಷ್ಯ ಮನುಷ್ಯನ ಮೇಲೆ ಸತತ ಕಾರ್ಯ ಕೈಕೊಳ್ಳುತ್ತಿರುತ್ತಾನೆ, ಅದನ್ನು ಅವನು ಮೌನದಿಂದ ಮತ್ತು ಮಾತಿನಲ್ಲಿ ವ್ಯಕ್ತಪಡಿಸಿದ ಶಬ್ದಗಳ ಮೂಲಕ ಮಾಡುತ್ತಾನೆ, ಮತ್ತು ಹೀಗೆ ಪ್ರಕೃತಿಯ ಉಳಿದ ಭಾಗದಲ್ಲಿ ನೇರವಲ್ಲದ ರೀತಿಯಲ್ಲಿ ಸಾಮರ್ಥ್ಯಪೂರ್ಣವಾಗಿ ಅವನು ಕ್ರಿಯೆ ಕೈಕೊಳ್ಳುತ್ತಾನೆ ಹಾಗೂ ಸೃಷ್ಟಿಸುತ್ತಾನೆ.



ಆದರೆ ನಾವು ಹೆಡ್ಡತನದಿಂದ ಬಾಹ್ಯ ರೂಪಗಳಲ್ಲಿ, ಜಗತ್ತಿನ ಗೋಚರ ರೂಪಗಳಲ್ಲಿ ಮಗ್ನರಾಗಿರುವುದರ ಕಾರಣದಿಂದಾಗಿ ಮತ್ತು ಅದರ ಸೂಕ್ಷ್ಮ ಮತ್ತು ಭೌತಿಕವಲ್ಲದ ವಿಧಾನಗಳನ್ನು ಪರೀಕ್ಷಿಸುವ ತೊಂದರೆ ತೆಗೆದುಕೊಳ್ಳದೆ ಇರುವುದರಿಂದಾಗಿ ನಾವು ವಿಜ್ಞಾನದ ಹಿಂದಿರುವ ಈ ಕ್ಷೇತ್ರದಲ್ಲಿ ಅಜ್ಞಾನಿಗಳಾಗಿ ಉಳಿದುಕೊಳ್ಳುತ್ತೇವೆ.

ಮಂತ್ರದ ವೈದಿಕ ರೀತಿಯ ಉಪಯೋಗ ಕೇವಲ ಶಬ್ದದ ರಹಸ್ಯ ಸಾಮರ್ಥ್ಯದ ಉಪಯುಕ್ತತೆ ಕುರಿತಾಗಿರುತ್ತದೆ. ಪ್ರತಿಯೊಂದು ರೂಪ ತಾಳುವಿಕೆಯ ಹಿಂದೆ ಸೃಷ್ಟ್ಯಾತ್ಮಕ ಧ್ವನಿಯ ಕಂಪನವಿದೆ ಎಂಬ ನಮ್ಮ ಆಧಾರ ಕಲ್ಪನೆ (hypothesis) ಯೊಂದಿಗೆ ಮಂತ್ರದ ಮೂಲಾಧಾರವಿರುದರ ಸಿದ್ಧಾಂತವನ್ನು ಒಟ್ಟಿಗೆ ತೆಗೆದುಕೊಂಡರೆ, ಮೂಲ ಸೃಷ್ಟ್ಯಾತ್ಮಕ ದೈವೀ ಶಬ್ದದ ವಿಚಾರವನ್ನು ನಾವು ತಿಳಿದುಕೊಳ್ಳಲು ಪ್ರಾರಂಭಿಸುತ್ತೇವೆ. ಧ್ವನಿಯ ಕಂಪನಗಳ ಪ್ರಜ್ಞಾಪೂರ್ಣ ಉಪಯೋಗ ಕುರಿತು ಭಾವನೆಗೆ ತಂದುಕೊಳ್ಳೋಣ, ಅವು ತಮಗೆ ಅನುಗುಣವಾದ ರೂಪಗಳನ್ನು ಉತ್ಪಾದಿಸುತ್ತವೆ ಇಲ್ಲವೆ ರೂಪಗಳನ್ನು ಬದಲಿಸುತ್ತವೆ. ಆದರೆ ಪ್ರಾಚೀನ ಕಾಲದವರ ದೃಷ್ಟಿಕೋನದಲ್ಲಿ ಭೌತದ್ರವ್ಯ ಅಸ್ತಿತ್ವದ ಅತಿ ಕೆಳಗಿರುವ ಸ್ತರವಾಗಿದೆ.

**(CWSA, 18/30–32)**

*

**ಸ್ಫೂರ್ತಿಯಿಂದ ಕೂಡಿದ ಮತ್ತು ತೆರೆದು ತೋರಿಸಿದ ದರ್ಶನ**

ಮಂತ್ರವನ್ನು ವೈದಿಕ ಋಷಿಗಳು ಅರ್ಥೈಸಿದ್ದು ಸ್ಫೂರ್ತಿಗೊಂಡ ದರ್ಶನದಲ್ಲಿ ತೆರೆದು ತೋರಿಸಿದ್ದು ಎಂದಾಗಿತ್ತು, ಅದರ ಜೊತೆಗೆ ಸ್ವಾರಸ್ಯವಿಲ್ಲದ ಆದರೆ ಅವಶ್ಯವಾದ ಆಧುನಿಕ ಶಬ್ದವನ್ನು ಉಪಯೋಗಿಸಿ ಹೇಳುವುದಾದರೆ ದೇವನ, ಆತ್ಮದ, ಮನುಷ್ಯನ ಮತ್ತು ವಿಶ್ವದ, ಜೀವನದ, ವಸ್ತು–ವಿಷಯಗಳ, ಯೋಚನೆಯ ಹಾಗೂ ಅನುಭವದ, ಸಾಹಸ ಕಾರ್ಯದ ಆಂತರಿಕ ಸತ್ಯದ ಬಗ್ಗೆ ತೆರೆದು ತೋರಿಸಿದ್ದು ಜೊತೆಗಿತ್ತು. ಛಂದಸ್ ಎಂಬುದು ಆತ್ಮದ ಶ್ರೇಷ್ಠ ಲಯಬದ್ಧತೆಯ ರೆಕ್ಕೆಗಳ ಮೇಲಿಂದ ಬಂದ ಒಂದು ಯೋಚನೆಯಾಗಿತ್ತು. ಏಕೆಂದರೆ ದರ್ಶನವನ್ನು ಕೇಳಿಸಿಕೊಳ್ಳುವಿಕೆಯಿಂದ ಪ್ರತ್ಯೇಕಪಡಿಸಲಾಗುತ್ತಿರಲಿಲ್ಲ, ಅದು ಒಂದು ಕ್ರಿಯೆ–ಯಾಗಿತ್ತು. ಹಾಗೆಯೇ ನಾವು ಸಿದ್ಧಿಯೆಂದು ಅರ್ಥೈಸುವ ಸತ್ಯವನ್ನು ಮನುಷ್ಯ ತನ್ನಲ್ಲಿಯೇ ಜೀವಿಸುವುದನ್ನು ಅವೆರಡರಲ್ಲಿ ಯಾವುದೊಂದರಿಂದ ಪ್ರತ್ಯೇಕಿಸ–ಲಾಗುತ್ತಿರಲಿಲ್ಲ, ಏಕೆಂದರೆ ಪ್ರಕಾಶಮಯವಾದ ಶಬ್ದಕ್ಕೆ ಆಕಾರ ನೀಡುವ ಆಂತರಿಕ

ದರ್ಶನ ಹಾಗೂ ಕೇಳಿಸಿಕೊಳ್ಳುವಿಕೆ ಇವುಗಳ ಅಭಿವ್ಯಕ್ತಿ ಸೃಷ್ಟಿಸುವವನಲ್ಲಿ ಇಲ್ಲವೆ ಮಾನವ ವಾಹಿನಿಯಲ್ಲಿ ಆಗುವುದಕ್ಕಿಂತ ಮೊದಲು ಇಲ್ಲವೆ ಆಗುವುದರ ಜೊತೆಗೆ ಆತ್ಮದಲ್ಲಿ ಅದರ ಸಾನ್ನಿಧ್ಯ ಮತ್ತು ಮನಸ್ಸಿನ ಮೇಲೆ ಅದರ ಒಡೆತನ ಬರಬೇಕು. ಮಂತ್ರ ಹೃದಯದ ಮೂಲಕ ಜನಿಸುತ್ತದೆ ಮತ್ತು ಯೋಚಿಸುವ ಮನಸ್ಸಿನಿಂದ ಅದಕ್ಕೆ ಆಕಾರ ಕೊಡಲಾಗುತ್ತದೆ, ಆ ಆಕಾರ ಸನಾತನ ದೇವ ಪ್ರಮುಖನ ರಥದ ಹಾಗಿರುತ್ತದೆ, ಅವನನ್ನು ದರ್ಶನ ಮಾಡಿಕೊಂಡ ಸತ್ಯ ಒಂದು ಮುಖ ಇಲ್ಲವೆ ರೂಪವಾಗಿರುತ್ತದೆ. ದಾರ್ಶನಿಕ ಕವಿಯ ಶಬ್ದವನ್ನು ಕೇಳಿಸಿಕೊಳ್ಳಲು ಯೋಗ್ಯನಾದ ಬಾಹ್ಯ ಮನುಷ್ಯನ ಮನಸ್ಸಿನಲ್ಲಿಯೂ ಕೂಡ ಈ ಮೂರು ವಿಷಯಗಳು ಒಟ್ಟಿಗೆ ಬರಬೇಕು, ಅದಕ್ಕಾಗಿ ನಮ್ಮ ಶಬ್ದ ನಿಜವಾದ ಮಂತ್ರವಾಗಿರಬೇಕು; ಆಳಾತಿ ಆಳದಲ್ಲಿರುವ ಸತ್ಯದ ದರ್ಶನ ಕೇಳಿಸಿಕೊಳ್ಳುವಿಕೆಯ ಜೊತೆಗಿರಬೇಕು, ಅದರ ಆಳಾತಿ ಆಳದ ಆತ್ಮವನ್ನು ಮನಸ್ಸು ಒಡೆತನದಲ್ಲಿ ಇಟ್ಟುಕೊಂಡಿರಬೇಕು ಮತ್ತು ಆತ್ಮದ ಮನೆಯತ್ತ ಅದರ ಬರುವಿಕೆಯು ಆ ದೈವೀ ಶಬ್ದದ ಲಯಬದ್ಧ ಸಂದೇಶ ಮತ್ತು ಸತ್ಯದ ಮನಸ್ಸಿನ ದರ್ಶನ ಜೊತೆಗಿರಬೇಕು ಇಲ್ಲವೆ ಕೂಡಲೆ ಅನುಸರಿಸಬೇಕು.

**(CWSA, 26/217–18, SABCL, 9/199–200)**

*

## ರಹಸ್ಯ ಉಚ್ಚಾರಾಂಶ ಓಂ

ಶ್ರೇಷ್ಠ 'ಓಂ'ದಿಂದ ಎಲ್ಲ ಶಬ್ದ ಹಾಗೂ ಯೋಚನೆ ಇವು ಹೊರಗೆ ಅರಳಿಕೊಂಡಿವೆ. ಓಂ – ದೈವೀ ಶಬ್ದ, ಸನಾತನವಾದದ್ದು, ಇಂದ್ರಿಯಗೋಚರ ವಸ್ತುಗಳಲ್ಲಿ ಪ್ರಕಟವಾದದ್ದು, ಸೃಷ್ಟ್ಯಾತ್ಮಕ ಸ್ವ–ಕಲ್ಪನೆಯ ಲೀಲೆಯಲ್ಲಿ ಪ್ರಕಟವಾದದ್ದು, ಅದರಲ್ಲಿಯ ರೂಪಗಳು ಮತ್ತು ವಸ್ತುಗಳು ಇವೆಲ್ಲ ಆಕಾರಗಳು, ಅವು ಅನಂತನು ತನ್ನಲ್ಲಿ ಒಂದುಗೂಡಿಸಿಕೊಂಡ ಅತಿ ಪ್ರಜ್ಞೆಯ ಸಾಮರ್ಥ್ಯದಲ್ಲಿ ಹಿಂದೆ ಪ್ರಕಟವಾದವುಗಳು, ಓಂ ಸಾರ್ವಭೌಮ ಮೂಲ, ಬೀಜ, ವಸ್ತು ವಿಚಾರಗಳ ನಾಮ ರೂಪಗಳ ಗರ್ಭ – ಅದು ಅದೇ ಆಗಿದೆ, ಸಮಗ್ರವಾಗಿ ಪರಮೋಚ್ಚ ಸ್ಪರ್ಶಾತೀತವಾದದ್ದು, ಮೂಲ ದೈವೀ ಏಕತೆ, ಕಾಲರಹಿತ ದೈವೀ ರಹಸ್ಯ, ಸ್ವರ್ಗೀಯ (supernal) ಸತ್ತೆಯ ಎಲ್ಲ ಪ್ರಕಟಣೆಯ ಮೇಲೆ ಸ್ವ–ಅಸ್ತಿತ್ವದಲ್ಲಿರು–ವಂತಹದು. ಆದ್ದರಿಂದ ಈ ಯಜ್ಞ ಒಮ್ಮೆಗೆ ಕರ್ಮಗಳು, ಆರಾಧನೆ ಹಾಗೂ ಜ್ಞಾನ.

ಈ ರೀತಿ ಅರಿತುಕೊಂಡಿರುವ, ಆರಾಧಿಸುವ, ತನ್ನ ಎಲ್ಲ ಕಾರ್ಯಗತಿಗಳನ್ನು ತನ್ನ ಸತ್ತೆಯ ಶ್ರೇಷ್ಠ ಶರಣಾಗತಿಯಿಂದ ಸನಾತನನಿಗೆ ಸಮರ್ಪಿಸುವ ಆತ್ಮಕ್ಕೆ ದೇವ



ಎಲ್ಲವೂ ಆಗಿರುತ್ತಾನೆ, ಎಲ್ಲವೂ ದೇವಪ್ರಮುಖವಾಗಿರುತ್ತದೆ. ದೇವನನ್ನು ಜಗತ್ತಿನ ಪಿತನೆಂದು, ತನ್ನ ಮಕ್ಕಳನ್ನು ಆರೈಕೆ ಮಾಡುವವನೆಂದು, ಪ್ರೀತಿಸುವವನೆಂದು, ಜಾಗರೂಕತೆಯಿಂದ ನೋಡಿಕೊಳ್ಳುವವನೆಂದು ಆ ಆತ್ಮ ತಿಳಿದುಕೊಂಡಿರುತ್ತದೆ. ಹಾಗೆಯೇ ದೇವನನ್ನು ದೈವೀ ಮಾತೆಯೆಂದೂ, ಆಕೆ ತನ್ನ ಎದೆಯ ಮೇಲೆ ನಮ್ಮನ್ನು ಹಿಡಿದಿಟ್ಟುಕೊಂಡಿದ್ದಾಳೆಂದೂ, ತನ್ನ ಪ್ರೇಮದ ಮಾಧುರ್ಯವನ್ನು ನಮ್ಮ ಮೇಲೆ ಧಾರಾಳವಾಗಿ ಸುರಿಸುವಳೆಂದೂ ಮತ್ತು ಜಗತ್ತನ್ನು ತನ್ನ ಸೌಂದರ್ಯದ ರೂಪಗಳಿಂದ ತುಂಬುತ್ತಾಳೆಂದೂ ಆ ಆತ್ಮ ತಿಳಿದಿರುತ್ತದೆ. ದೇವ ಮೊದಲ ಸೃಷ್ಟಿಕರ್ತನೆಂದು, ಕಾಲ ದೇಶಗಳಲ್ಲಿ, ಸಂಬಂಧದಲ್ಲಿ ಉತ್ಪತ್ತಿಯಾಗುವುದೆಲ್ಲ, ಸೃಷ್ಟಿಯಾಗುವುದೆಲ್ಲ ಅವನಿಂದ ಉತ್ಪತ್ತಿಯಾಗಿದೆಯೆಂದು ಆ ಆತ್ಮ ತಿಳಿದಿರುತ್ತದೆ. ಅದು ಅವನನ್ನು ದೈವೀ ಪ್ರಭುವೆಂದು ಮತ್ತು ಎಲ್ಲ ವಿಶ್ವಂಭರ ಮತ್ತು ಪ್ರತಿಯೊಂದು ವೈಯಕ್ತಿಕ ದೈವಸಂಕಲ್ಪವನ್ನು ವಿಧಿಸುವವನೆಂದು ತಿಳಿದಿರುತ್ತದೆ. ಸನಾತನನಿಗೆ ತನ್ನನ್ನು ಅರ್ಪಿಸಿಕೊಂಡ ಮನುಷ್ಯನಿಗೆ ಜಗತ್ತು ಮತ್ತು ವಿಧಿ, ಅನಿಶ್ಚಿತ ಸಂಭವನೀಯ ಘಟನೆ ಇವು ಭಯ ಹುಟ್ಟಿಸಲಾರವು. ವೇದನೆ ಹಾಗೂ ಅನಿಷ್ಟದ ಮುಖ, ಅವನನ್ನು ದಿಗ್ಭ್ರಮೆಗೆ ಒಳಪಡಿಸಲಾರವು, ಕಂಡುಕೊಳ್ಳುವ ಆತ್ಮಕ್ಕೆ ದೇವನೇ ಮಾರ್ಗ, ಅದರ ಪ್ರಯಾಣದ ಗುರಿ, ಆ ಮಾರ್ಗದಲ್ಲಿ ಆತ್ಮವನ್ನು ಕಳೆದು–ಕೊಳ್ಳುವುದಿಲ್ಲ, ಜಾಣತನದಿಂದ ಮಾರ್ಗದರ್ಶನಕ್ಕೆ ಒಳಗಾದ ಅವನ ಹೆಜ್ಜೆಗಳು ಪ್ರತಿಕ್ಷಣ ನಿಶ್ಚಿತವಾಗಿ ಆ ಗುರಿಯನ್ನು ತಲುಪುತ್ತಿರುತ್ತವೆ. ದೇವಪ್ರಮುಖ ತನ್ನ ಹಾಗೂ ಎಲ್ಲ ಸತ್ತೆಯ ದೈವೀ ಪ್ರಭು ಎಂದು, ತನ್ನ ಸ್ವಭಾವಕ್ಕೆ ಆಶ್ರಯ ನೀಡುವವನೆಂದು, ತನ್ನ ಸಹಜ ಗುಣದ ಆತ್ಮ ಪತಿಯೆಂದು, ಅದರ ಪ್ರೇಮಿ ಹಾಗೂ ಪ್ರೀತಿಸುವವ ಎಂದು, ತನ್ನ ಎಲ್ಲ ಯೋಚನೆಗಳ ಹಾಗೂ ಕ್ರಿಯೆಗಳ ಆಂತರಿಕ ಸಾಕ್ಷಿ ಎಂದು ಅವನು ತಿಳಿದಿರುತ್ತಾನೆ. ದೇವನೇ ಅವನ ಮನೆ ಹಾಗೂ ದೇಶ, ಅವನ ಅರಸುವಿಕೆಗಳಿಗೆ ಹಾಗೂ ಬಯಸುವಿಕೆಗಳಿಗೆ ಆಶ್ರಯ, ಎಲ್ಲ ಸತ್ತೆಗಳ ಜಾಣ, ಹತ್ತಿರದ ಮತ್ತು ದಯಾಪೂರ್ಣ ಮಿತ್ರ. ಎಲ್ಲ ಜನ್ಮತಾಳುವಿಕೆ, ಸ್ಥಾನಮಾನ, ತೋರಿಕೆಯ ಅಸ್ತಿತ್ವಗಳನ್ನು ನಾಶಪಡಿಸುವಿಕೆ ಇವು ಅವನ ದರ್ಶನದಲ್ಲಿ ದೈವೀ ಏಕೈಕನಾದವನಿಂದಾಗಿರುತ್ತವೆ. ಆ ದೈವೀ ಏಕೈಕನಾದವನು ನಿರಂತರ ಪುನರಾವೃತ್ತಿಯಾಗುವುದರಲ್ಲಿ, ತನ್ನ ತಾತ್ಕಾಲಿಕ ಪ್ರಕಟಣೆಯನ್ನು ಮುಂದೆ ತರುವುದರಲ್ಲಿ, ನಿರ್ವಹಿಸುವುದರಲ್ಲಿ ಹಾಗೂ ಹಿಂತೆಗೆದುಕೊಳ್ಳುವುದರಲ್ಲಿ ತೊಡಗಿ–ಕೊಂಡಿರುತ್ತಾನೆ. ಜನ್ಮತಾಳುತ್ತದೆ, ನಾಶವಾಗುತ್ತದೆ ಎಂದು ತೋರಿಬರುವುದರಲ್ಲಿ, ಈ ಕ್ರಿಯೆಯಲ್ಲಿ ತೊಡಗಿಕೊಳ್ಳದೆ ಪ್ರಕಟವಾಗದೆ ಇರುವುದಕ್ಕೆ ಶಾಶ್ವತ ಆಶ್ರಯ

ಸ್ಥಾನವಾಗಿರುವುದರಲ್ಲಿ ಅವನು ಮಾತ್ರ ನಾಶವಾಗದ ಬೀಜ ಹಾಗೂ ಮೂಲವಾಗಿರುತ್ತಾನೆ. ಸೂರ್ಯನ ಶಾಖದಲ್ಲಿ, ಜ್ವಾಲೆಯಲ್ಲಿ ಉರಿಯುತ್ತಿರುವವನು ಅವನೇ, ಧಾರಾಕಾರವಾಗಿ ಬರುವ ಮಳೆ, ಅದರ ಬರದಿರುವಿಕೆ ಇವುಗಳಲ್ಲಿ ಅವನೇ ಇರುತ್ತಾನೆ, ಅವನು ಈ ಎಲ್ಲ ಭೌತಿಕ ಪ್ರಕೃತಿ ಹಾಗೂ ಅದರ ಕಾರ್ಯಗತಿಗಳಾಗಿರುತ್ತಾನೆ. ಮೃತ್ಯು ಅವನ ಮುಖವಾಡ, ಅಮರತ್ವ ಅವನ ಸ್ವ–ಜ್ಞಾನ ಪ್ರಕಾಶನ. ಅಸ್ತಿತ್ವದಲ್ಲಿ ಇರುವುದೆಲ್ಲವೂ ಅವನೇ, ನಾವು ಅಸ್ತಿತ್ವದಲ್ಲಿಲ್ಲ ಎಂದು ಭಾವಿಸುವುದು ಅನಂತದಲ್ಲಿ ರಹಸ್ಯವಾಗಿ ಇರುತ್ತದೆ ಮತ್ತು ಅದು ದೈವೀ ಬದಲಾಗದವನ ರಹಸ್ಯ ಸತ್ತೆಯ ಒಂದು ಭಾಗವಾಗಿರುತ್ತದೆ.

**(CWSA, 19/328–30, SABCL, 13/315–16)** – ಶ್ರೀ ಅರವಿಂದರು

*

**ಯಾವಾಗಲೂ ಶ್ರೀಮಾತೆಯವರಿಗೆ ಕರೆ ಕೊಡಿರಿ**

ಶ್ರೀಮಾತೆಯವರಿಗೆ ಕರೆಕೊಡುವುದು ಮತ್ತು ಅದರೊಂದಿಗೆ ಅಭೀಪ್ಸೆಪಡುವುದು, ಪ್ರಕಾಶ ಬಂದಾಗ ಅದಕ್ಕೆ ಒಪ್ಪಿಗೆ ನೀಡುವುದು, ಆಸೆ ಮತ್ತು ಯಾವುದೇ ಅಂಧಕಾರದ ಚಲನೆಯನ್ನು ತಿರಸ್ಕರಿಸುವುದು ಯಾವಾಗಲೂ ಮುಖ್ಯವಾದ ವಿಷಯ. ಈ ಇತರ ವಿಷಯಗಳನ್ನು ಯಶಸ್ವಿಯಾಗಿ ಕೈಕೊಳ್ಳುವುದು ಮನುಷ್ಯನಿಗೆ ಸಾಧ್ಯವಾಗದೆ ಇದ್ದಾಗಲೂ ಶ್ರೀಮಾತೆಯವರಿಗೆ ಕರೆ ಕೊಡಬೇಕು.

**(CWSA, 31/134)**

ಅಪಾಯ ಬಂದಾಗ ಶ್ರೀಮಾತೆಯವರಿಗೆ ಕರೆ ಕೊಡುವುದು ಮೊದಲು ಕೈಕೊಳ್ಳಬೇಕಾದ ವಿಷಯ, ಅದು ಸರ್ವಸಾಧಾರಣ ರಕ್ಷಣೆ ಒಮ್ಮೆಗೆ ಪರಿಣಾಮ–ಕಾರಿಯಾಗುವಂತೆ ಮಾಡುವುದು.

**(CWSA, 32/308)** – ಶ್ರೀ ಅರವಿಂದರು

*

## ಮಂತ್ರ ಜಪದ ಆಚರಣೆ

**ಪ್ರತಿಯೊಬ್ಬನೂ ತನ್ನದೇ ಮಂತ್ರವನ್ನು ಕಂಡುಕೊಳ್ಳಬೇಕು**

... ಪ್ರತಿಯೊಬ್ಬನೂ ತನ್ನ ಮೇಲೆ ಕ್ರಿಯೆ ಕೈಕೊಳ್ಳಬಹುದಾದ ಏನೋ ಒಂದನ್ನು ಕಂಡುಹಿಡಿಯಬೇಕು. ನಾನು ಕೇವಲ ಭೌತಿಕ ಸ್ತರದಲ್ಲಿ ಆಗುವ ಕ್ರಿಯೆಯನ್ನು ಕುರಿತು ಮಾತನಾಡುತ್ತಿದ್ದೇನೆ. ಏಕೆಂದರೆ ಮಾನಸಿಕವಾಗಿ, ಪ್ರಾಣಿಕವಾಗಿ



ಆಂತರಿಕ ಭಾಗಗಳಲ್ಲಿ ಅಭೀಪ್ಸೆ ಯಾವಾಗಲೂ ಸ್ವಯಂಪ್ರೇರಿತವಾಗಿರುತ್ತದೆ. ನಾನು ಕೇವಲ ಭೌತಿಕ ಸ್ತರಕ್ಕೆ ಸಂಬಂಧಿಸಿದ್ದನ್ನು ಕುರಿತು ಹೇಳುತ್ತಿದ್ದೇನೆ.

ಭೌತಿಕವಾದದ್ದು ಪುನರಾವರ್ತನೆಯನ್ನು ಒಳಗೊಂಡ ಏನೋ ಒಂದಕ್ಕೆ ಹೆಚ್ಚು ತೆರೆದಿರಿಸಿಕೊಂಡಿರುತ್ತದೆ. ಉದಾಹರಣೆಗೆ ರವಿವಾರಗಳಂದು ನಾವು ನುಡಿಸುವ ಸಂಗೀತ. ಅದರಲ್ಲಿ ಒಟ್ಟಿಗಿರಿಸಿದ ಮೂರು ಸರಣಿಗಳಿವೆ ಮೊದಲನೆಯದು ವಿಶ್ವಂಭರ ಮಾತೆ ಚಂಡಿಯನ್ನು ಉದ್ದೇಶಿಸಿ ಹೇಳುವುದಾಗಿದೆ:

**ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ**
**ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ**
**ಯಾ ದೇವೀ ಸರ್ವಭೂತೇಷು ಶಾಂತಿರೂಪೇಣ ಸಂಸ್ಥಿತಾ**
**ನಮಸ್ತಸ್ಸೈ ನಮಸ್ತಸ್ಸೈ ನಮಸ್ತಸ್ಸೈ ನಮೋನ್ನಮಃ**

ಎರಡನೆಯದು ಶ್ರೀ ಅರವಿಂದರನ್ನು ಉದ್ದೇಶಿಸಿ ಹೇಳುವುದಾಗಿದೆ: (ನನ್ನ ಹೆಸರನ್ನು ಕೊನೆಗೆ ಇರಿಸಿದ್ದಾರೆ): ಅದು ನಾನು ಮಂತ್ರವನ್ನು ಕುರಿತು ಹೇಳುತ್ತಿದ್ದುದನ್ನು ಒಟ್ಟಿಗಿರಿಸಲಾಗಿದೆ.

**ಓಂ ನಮೋ ಭಗವತೆ ಶ್ರೀ ಅರವಿಂದಾಯ, ಓಂ ನಮಃ ಶ್ರೀ ಮೀರಾಂಬಿಕಾಯೈ**

ಮೂರನೆಯದು ಶ್ರೀ ಅರವಿಂದರನ್ನು ಉದ್ದೇಶಿಸಿ ಹೇಳುವುದಾಗಿದೆ:

**ಶ್ರೀ ಅರವಿಂದಃ ಶರಣಂ ಮಮ**

ಈ ಮಂತ್ರಗಳನ್ನು ಕುರಿತು ಹೇಳುವುದಾದರೆ ಅವುಗಳನ್ನು ಯಾವ ರೀತಿಯಲ್ಲಿ ಉಪಯೋಗಿಸಬೇಕು ಎಂಬುದರ ಮೇಲೆ ಪ್ರತಿಯೊಂದು ಅವಲಂಬಿಸಿದೆ. ನಾನು ಚಿಕ್ಕ ಮಂತ್ರವನ್ನು ಇಷ್ಟ ಪಡುತ್ತೇನೆ. ವಿಶೇಷವಾಗಿ ಮಂತ್ರವನ್ನು ಅನೇಕ ಸಲ, ಸ್ವಯಂಪ್ರೇರಿತವಾಗಿ ಉಚ್ಚರಿಸುವುದು ಸುಲಭವಾಗಿರಬೇಕು – ಒಂದು ಇಲ್ಲವೆ ಎರಡು ಶಬ್ದಗಳು, ಅತಿ ಹೆಚ್ಚೆಂದರೆ ಮೂರು ಶಬ್ದಗಳು. ಏಕೆಂದರೆ ಎಲ್ಲ ಸಂದರ್ಭಗಳಲ್ಲಿ, ಉದಾಹರಣೆಗೆ ಅಪಘಾತವೊಂದು ಸಂಭವಿಸಲಿದೆ ಎಂಬ ಸಂದರ್ಭದಲ್ಲಿ ನೀವು ಅವುಗಳನ್ನು ಉಪಯೋಗಿಸಲು ಶಕ್ತರಾಗುವಂತಿರಬೇಕು. ಯೋಚನೆಗೆ ಅವಕಾಶ ಕೊಡದೆ, ಕರೆ ಕೊಡುವ ಆವಶ್ಯಕತೆ ಇಲ್ಲದೆ ಅದು ಜಿಗಿದೆದ್ದು ಬರಬೇಕು, ಅದು ಸತ್ತೆಯಿಂದ ಸ್ವಯಂಪ್ರೇರಿತವಾಗಿ ಹೊರಗೆ ಹರಿದು ಬರಬೇಕು, ನಿಖರವಾಗಿ ಪ್ರತಿಫಲಿತ ರೂಪದಲ್ಲಿ ಬರಬೇಕು. ಆಗ ಆ ಮಂತ್ರಕ್ಕೆ ಪೂರ್ತಿ ಶಕ್ತಿಯಿರುತ್ತದೆ.

ನನಗೆ ವಿಶೇಷ ಪೂರ್ವಮಗ್ನತೆಯಾಗಲಿ, ತೊಂದರೆಗಳಾಗಲಿ ಇರದೆ ಇದ್ದ ದಿನಗಳಲ್ಲಿ (ಆ ದಿನಗಳನ್ನು ನಾನು ಸಾಮಾನ್ಯ ದಿನಗಳೆಂದು ಕರೆಯುತ್ತೇನೆ, ನಾನು ಸಾಮಾನ್ಯ ರೀತಿಯಲ್ಲಿದ್ದಾಗ) ನಾನು ಕೈಕೊಳ್ಳುವುದೆಲ್ಲವೂ, ಈ ದೇಹದ ಎಲ್ಲ ಚಲನೆಗಳು, ನಾನು ಉಚ್ಚರಿಸುವುದೆಲ್ಲವೂ, ನಾನು ಮಾಡುವ ಎಲ್ಲ ಇಂಗಿತ ಸೂಚನೆಗಳು ಇವೆಲ್ಲವುಗಳ ಜೊತೆಗೂಡಿಕೊಂಡು, 'ಓಂ ನಮೋ ಭಗವತೆ' ಮಂತ್ರ ಅವೆಲ್ಲವುಗಳನ್ನು ಎತ್ತಿ ಹಿಡಿದಿರುತ್ತದೆ, ಸಾಲಿನಲ್ಲಿರಿಸುತ್ತದೆ, ಇದು ಎಲ್ಲ ಕಾಲಕ್ಕೂ ಆಗುತ್ತದೆ.

ಅದೇ ಸಹಜ ಸ್ಥಿತಿ. ಅದು ಸೂಕ್ಷ್ಮ ಭೌತಿಕಕ್ಕಿಂತ ಹೆಚ್ಚಾಗಿ ಭೌತಿಕವಾದ ಗಾಢತೆ ಇರುವ ವಾತಾವರಣವನ್ನು ಸೃಷ್ಟಿಸುತ್ತದೆ. ಅದು ಬಹುಮಟ್ಟಿಗೆ ಮಾಧ್ಯಮ–ವೊಂದರಿಂದ ಕತ್ತಲಲ್ಲಿ ಮಿನುಗುವ ವಿಕಿರಣದ ಹಾಗಿರುತ್ತದೆ ಮತ್ತು ಅದಕ್ಕೆ ಶ್ರೇಷ್ಠ ಕ್ರಿಯಾಶಕ್ತಿ ಇರುತ್ತದೆ, ಅದು ಅಪಘಾತವನ್ನು ತಪ್ಪಿಸಬಹುದು. ಅದು ಎಲ್ಲ ಕಾಲಕ್ಕೆ ನಿಮ್ಮ ಜೊತೆಗಿರುತ್ತದೆ.

ಹಾಗಾಗಿ ನಿಮಗೆ ಆವಶ್ಯಕತೆಯೊಂದರ ಭಾವನೆ ಬಂದಾಗ – ನಿಮ್ಮ ತಲೆಯಲ್ಲಲ್ಲ, ಆದರೆ ಇಲ್ಲಿ (ಶ್ರೀಮಾತೆಯವರು ಹೃದಯ ಕೇಂದ್ರವನ್ನು ತೋರಿಸುತ್ತಾರೆ) ಅದು ಬರುತ್ತದೆ. ಒಂದು ದಿನ ನೀವು ಶಬ್ದಗಳನ್ನು ಕೇಳುವಿರಿ, ಇಲ್ಲವೆ ಅವು ನಿಮ್ಮ ಹೃದಯದಿಂದ ಜಿಗಿದು ಬರುತ್ತವೆ. ... ಅದು ಸಂಭವಿಸಿದಾಗ ನೀವು ಅದನ್ನು ಗಟ್ಟಿಯಾಗಿ ಹಿಡಿದಿಟ್ಟುಕೊಳ್ಳಬೇಕು.

**(ಅನುಯಾಯಿಯೊಂದಿಗೆ ಮಾತುಕತೆ, ಸಪ್ಟಂಬರ 16, 1958)**

*

**ಅಂತರಂಗದಲ್ಲಿ ಸ್ವಯಂಪ್ರೇರಿತವಾಗಿ ಜಿಗಿದು ಬಂದ ಮಂತ್ರಕ್ಕೆ ಜೀವನವಿರುತ್ತದೆ**

ನಿಜವಾದ ಮಂತ್ರವನ್ನು ನಿಮಗೆ ಯಾರೂ ಕೊಡಲಾರರು. ಅದು ಕೊಡಬಹುದಾದ ಏನೋ ಒಂದಲ್ಲ; ಅದು ಅಂತರಂಗದಿಂದ ಮೇಲೆದ್ದು ಬರುವಂತಹ ಏನೋ ಒಂದು. ಅದು ಒಮ್ಮಿಂದೊಮ್ಮೆಗೆ, ಸ್ವಯಂಪ್ರೇರಿತವಾಗಿ ಅಂತರಂಗದಿಂದ ನಿಮ್ಮ ಸತ್ತೆಯ ಗಂಭೀರವಾದ, ಗಾಢವಾದ ಆವಶ್ಯಕತೆಯ ಹಾಗೆ ಜಿಗಿದು ಬರಬೇಕು – ಆಗ ಅದಕ್ಕೆ ಸಾಮರ್ಥ್ಯವಿರುತ್ತದೆ, ಏಕೆಂದರೆ ಅದು ಬಾಹ್ಯದಿಂದ ಬರುವ ಏನೋ ಒಂದಲ್ಲ, ಅದು ಸ್ವತಃ ನಿಮ್ಮದೇ ಕೂಗು.

ನನ್ನ ಸಂದರ್ಭದಲ್ಲಿ ನನ್ನ ಮಂತ್ರಕ್ಕೆ ಅಮರತ್ವದ ಸಾಮರ್ಥ್ಯವಿರುವುದನ್ನು



ನೋಡಿದೆ, ಸಂಭವಿಸುವುದು ಏನೇ ಆಗಿರಲಿ, ಅದನ್ನು ಉಚ್ಚರಿಸಿದರೆ ಅದು ಮೇಲ್ಗೈ ಹೊಂದಿರುವ ಪರಮೋಚ್ಚವಾದದ್ದಾಗಿರುತ್ತದೆ, ಅದು ಇನ್ನು ಮುಂದೆ ನಿಮ್ನತರ ನಿಯಮವಾಗಿರುವುದಿಲ್ಲ ಮತ್ತು ಶಬ್ದಗಳು ಅಪ್ರಸ್ತುತ, ಅವುಗಳಿಗೆ ಯಾವ ಅರ್ಥವಿರಲಿಕ್ಕಿಲ್ಲ – ಬೇರೆಯವರಿಗೆ, ನನ್ನ ಮಂತ್ರ ಅರ್ಥರಹಿತವಾಗಿದೆ, ಆದರೆ ನನಗೆ ಅದು ಅರ್ಥದಿಂದ ತುಂಬಿಕೊಂಡಿದೆ ಮತ್ತು ಪರಿಣಾಮಕಾರಿ, ಏಕೆಂದರೆ ಅದು ನನ್ನ ಕೂಗು, ನನ್ನ ಇಡೀ ಸತ್ತೆಯ ಗಾಢವಾದ ಅಭೀಪ್ಸೆ.

**ಮಂತ್ರದ ಸಾಮರ್ಥ್ಯ**

ಗುರುವೊಬ್ಬನಿಂದ ಕೊಡಲಾದ ಮಂತ್ರ, ಆ ಮಂತ್ರವನ್ನು ಶೋಧಿಸಿದವನ ಅನುಭವವನ್ನು ಮನಗಾಣುವಂತೆ ಮಾಡುವ ಸಾಮರ್ಥ್ಯ ಹೊಂದಿರುತ್ತದೆ. ಆ ಸಾಮರ್ಥ್ಯ ಅಲ್ಲಿ ಸ್ವಯಂಚಾಲಿತವಾಗಿ ಇರುತ್ತದೆ, ಏಕೆಂದರೆ ಆ ಧ್ವನಿ ಅನುಭವವನ್ನು ಒಳಗೊಂಡಿರುತ್ತದೆ. ಅದನ್ನು ನಾನು ಪ್ಯಾರಿಸ್ ನಗರದಲ್ಲಿ ಒಮ್ಮೆ ನೋಡಿದೆ, ಆಗ ನನಗೆ ಭಾರತದ ಬಗ್ಗೆ ಏನೂ ತಿಳಿದಿರಲಿಲ್ಲ, ಸಂಪೂರ್ಣವಾಗಿ ಏನೂ ಇಲ್ಲ, ಕೇವಲ ಸಾಮಾನ್ಯವಾದದ್ದು, ಅರ್ಥವಿಲ್ಲದ್ದು ತಿಳಿದಿತ್ತು. ಮಂತ್ರ ಎಂದರೆ ಏನು ಎಂಬುದು ನನಗೆ ಗೊತ್ತಿರಲಿಲ್ಲ. ಹಿಮಾಲಯದಲ್ಲಿ ಒಂದು ವರ್ಷ ಕಾಲ ಯೋಗವನ್ನಾಚರಿಸಿ ಬಂದಿದ್ದ ಎಂದು ಹೇಳಲಾದ ಒಬ್ಬನ ಭಾಷಣವನ್ನು ಕೇಳಲು ಹೋಗಿದ್ದೆ. ಅವನು ತನ್ನ ಅನುಭವಗಳನ್ನು ಕುರಿತು ಮಾತನಾಡುತ್ತಿದ್ದ (ಅದೇನೂ ಅಷ್ಟೊಂದು ಸ್ವಾರಸ್ಯಕರವಾಗಿರಲಿಲ್ಲ) ಅವನ ಭಾಷಣ ನಡೆಯುತ್ತಿದ್ದಾಗ ಒಮ್ಮೆ ಅವನು ಓಂ ಶಬ್ದವನ್ನು ಒಮ್ಮಿಂದೊಮ್ಮೆಗೆ ಉಚ್ಚರಿಸಿದ. ಆಗ ಆ ಇಡೀ ಸಭಾಂಗಣ, ಇದ್ದಕ್ಕಿದ್ದಂತೆ, ಪ್ರಕಾಶದಿಂದ ತುಂಬಿಕೊಂಡದ್ದನ್ನು ನೋಡಿದೆ, ಆ ಪ್ರಕಾಶ ಬಂಗಾರ ವರ್ಣದ್ದಾಗಿದ್ದು ಕಂಪಿಸುತ್ತಿತ್ತು... ಅದನ್ನು ಗಮನಿಸಿದವಳು ಬಹುಶಃ ನಾನೊಬ್ಬಳೇ ಆಗಿರಬಹುದು. ನಾನು ನನಗೆ 'ಸರಿ' ಎಂದು ಹೇಳಿಕೊಂಡೆ. ನಂತರ ಅದನ್ನು ಕುರಿತು ಯಾವ ಯೋಚನೆಯನ್ನೂ ಮಾಡಲಿಲ್ಲ. ಆ ಕತೆಯನ್ನು ಮರೆತುಬಿಟ್ಟಿದ್ದೆ. ಆದರೆ ಅದು ಮತ್ತೆ ಸಂಭವಿಸಿತು, ಆ ಅನುಭವ ಬೇರೆ ಎರಡು, ಮೂರು ದೇಶಗಳಲ್ಲಿ ಮತ್ತೆ ಬಂದಿತು, ಅಲ್ಲಿ ಬೇರೆ ಜನರಿದ್ದರು, ಪ್ರತಿಸಲ 'ಓಂ' ಧ್ವನಿ ಅಲ್ಲಿರುತ್ತಿತ್ತು, ನಾನು ಇದ್ದಕ್ಕಿದ್ದಂತೆ ಅದೇ ಬಗೆಯ ಪ್ರಕಾಶ ಆ ಸ್ಥಳವನ್ನು

---

**AUM-A:** ಸ್ಥೂಲ ಹಾಗೂ ಬಾಹ್ಯ ವಿರಾಟ್; **U:** ಸೂಕ್ಷ್ಮವಾದ, ಅಂತರಂಗದಲ್ಲಿರುವ ಆತ್ಮ, ತೈಜಸ್, **M:** ಅತಿಪ್ರಜ್ಞೆಯ ಸರ್ವಸಮರ್ಥ ರಹಸ್ಯವಾದುದರ ಆತ್ಮ, ಪ್ರಜ್ಞಾ, ಓಂ: ಪರಿಪೂರ್ಣ, ತುರೀಯ–ಮಾಂಡೂಕ್ಯ ಉಪನಿಷತ್, 2.IX, 16-17

ತುಂಬಿಕೊಂಡದ್ದನ್ನು ನೋಡಿದೆ. ಹಾಗಾಗಿ ನಾನು ಅರ್ಥಮಾಡಿಕೊಂಡೆ. ಸಹಸ್ರಾರು ವರ್ಷಗಳ ಕಾಲದ ಆಧ್ಯಾತ್ಮಿಕ ಅಭೀಪ್ಸೆಯ ಕಂಪನಗಳನ್ನು ಆ ಧ್ವನಿ ಒಳಗೊಂಡಿದೆ – ಅದರಲ್ಲಿ ಪರಮೋಚ್ಚನತ್ತ ಜನರ ಇಡೀ ಅಭೀಪ್ಸೆಯಿದೆ. ಅದರ ಸಾಮರ್ಥ್ಯ ಸ್ವಯಂಚಾಲಿತವಾಗಿ ಅಲ್ಲಿದೆ, ಏಕೆಂದರೆ ಆ ಅನುಭವ ಅಲ್ಲಿದೆ.

**(ಅನುಯಾಯಿಯೊಂದಿಗೆ ಮಾತುಕತೆ, ಮೇ 11, 1963)**

*

**ಗುರು ಹಾಗೂ ಮಂತ್ರ**

**ಪ್ರಶ್ನೆ** : *ಅನುಭವದ ಸಾಮರ್ಥ್ಯವನ್ನು ಮಂತ್ರ ಸ್ವಯಂಚಾಲಿತವಾಗಿ ಒಳಗೊಂಡಿದ್ದಾಗಲೂ ನಿಮ್ಮ ಗುರುವಿನಿಂದ ಮಂತ್ರ ಸ್ವೀಕರಿಸದಿದ್ದರೆ ಅದಕ್ಕೆ ಸಾಮರ್ಥ್ಯವಿರುವುದಿಲ್ಲ ಎಂದು ಹೇಳುವುದು ಯಾವ ಕಾರಣಕ್ಕಾಗಿ?*

**ಶ್ರೀಮಾತೆ** : ನಿಮ್ಮದೇ ಆದ ಯಾವ ಸಾಮರ್ಥ್ಯವೂ ಇರದೆ ಇದ್ದಾಗ ಹಾಗಾಗುವುದು ಸ್ವಾಭಾವಿಕ. ಉದಾಹರಣೆಗೆ ಯಾರಾದರೂ ನನ್ನ ಬಳಿಗೆ ಬಂದು ತನಗೆ ಒಂದು ಮಂತ್ರ ಬೇಕು ಎಂದು ನನ್ನನ್ನು ಕೇಳಿದಾಗ ಅವನಿಗೆ 'ನಿನ್ನ ಮಂತ್ರವನ್ನು ನೀನೇ ಕಂಡುಕೋ' ಎಂದು ನಾನು ಹೇಳುವುದಿಲ್ಲ.

ತಮ್ಮ ಆತ್ಮದೊಂದಿಗೆ ಸಂಪರ್ಕ ಹೊಂದಿದವರಿಗೆ ಅಲ್ಲಿ ನಾನು ಹೇಳಿದ್ದು ಅನ್ವಯಿಸುತ್ತದೆ, ಹಾಗೆ ಸಂಪರ್ಕ ಹೊಂದದೇ ಇದ್ದವರು ತಮ್ಮ ಮಂತ್ರವನ್ನು ಕಂಡುಕೊಳ್ಳಲಾರರು – ಅವರ ಮಿದುಳು ಶಬ್ದಗಳನ್ನು ಹುಡುಕುತ್ತದೆ, ಆದರೆ ಅದೇನೂ ಅಲ್ಲ, ಮಂತ್ರ ಅಂತರಂಗದಿಂದ ಮೇಲೆದ್ದು ಬರಬೇಕೆಂದು ಹೇಳಿದ್ದೇನೆ – ಆದರೆ ಅವರಿಗೆ ಯಾವುದೂ ಮೇಲೆದ್ದು ಬರುವುದಿಲ್ಲ. ಅವರು ಅದನ್ನು ಕಂಡುಕೊಳ್ಳುವುದಿಲ್ಲ, ಅಂತಹ ಯಾವ ಅವಕಾಶವೂ ಇರುವುದಿಲ್ಲ. ಹಾಗಾಗಿ ಅಂತಹ ಸಂದರ್ಭದಲ್ಲಿ ಗುರು ತನ್ನದೇ ಸಾಮರ್ಥ್ಯವನ್ನು ಶಿಷ್ಯನತ್ತ ಸಾಗಿಸುತ್ತಾನೆ.

**ಪ್ರಶ್ನೆ** : *ಹೌದು, ಆದರೆ ಉದಾಹರಣೆಗೆ, ನೀವೊಂದು ಪುಸ್ತಕದಲ್ಲಿ ಮಂತ್ರವೊಂದನ್ನು ಓದಿದಾಗ, ಅದರಲ್ಲಿ ಶಕ್ತಿ ಇರುವುದಿಲ್ಲ ಎಂದು ಹೇಳಲಾಗಿದೆ – ಅದರಲ್ಲಿ ಕಂಪನವಿದ್ದಾಗಲೂ ಹೀಗೆ ಏಕೆ ಆಗುತ್ತದೆ?*

**ಶ್ರೀಮಾತೆ** : ಆದರೆ ನಿಮ್ಮೊಳಗೇ ಸಾಮರ್ಥ್ಯವಿದ್ದಾಗ ಮತ್ತು ಪುಸ್ತಕವನ್ನು ಓದಿದಾಗ ನಿಮಗೆ ಶಕ್ತಿ ದೊರಕುತ್ತದೆ. (ಶ್ರೀಮಾತೆಯವರು ನಗುತ್ತಾರೆ) ಅವಶ್ಯವಾದದ್ದು ಏನೆಂದರೆ ಭಾವನೆಗೆ ತಂದುಕೊಳ್ಳುವುದಕ್ಕೆ ಕ್ಷಮತೆ ಇರುವುದು ಮತ್ತು ಸಂಪರ್ಕ



ಸಾಧಿಸುವುದಾಗಿದೆ.

ಕಟ್ಟಕಡೆಗೆ ಗುರು ಏನನ್ನು ಕೈಕೊಳ್ಳುತ್ತಾನೆ? ಅವನು (ಸಂಧಿಸ್ಥಾನ (junction) ವಿರುವತ್ತ ಇಂಗಿತ ಸೂಚನೆ ಮಾಡುತ್ತಾರೆ) ಸಂಪರ್ಕ ಕಲ್ಪಿಸುತ್ತಾನೆ, ಅವನು ಒಂದು ಕೊಂಡಿಯಲ್ಲದೆ ಬೇರೇನಲ್ಲ. ಅವನು ತನ್ನ ಸಾಮರ್ಥ್ಯವನ್ನು ಕೊಡುವುದಿಲ್ಲ (ಅವನು ಹಾಗೆ ಮಾಡುತ್ತಿದ್ದೇನೆ ಎಂದು ಯೋಚಿಸುತ್ತಾನೆ, ಆದರೆ ಅದು ಸತ್ಯವಲ್ಲ): ಅವನು ಒಂದು ಕೊಂಡಿ. ಅವನು ನಿಮ್ಮನ್ನು ದೈವೀ ಸಾಮರ್ಥ್ಯದತ್ತ ತರುತ್ತಾನೆ – ಅವನಿಲ್ಲದೆ ನೀವು ಆ ಸಂಪರ್ಕ ಹೊಂದುವುದು ಸಾಧ್ಯವಿಲ್ಲ. ಗುರುವಿನ ಆವಶ್ಯಕತೆ ಇಲ್ಲದವರು ಗುರುವಿನ ಸಹಾಯವಿಲ್ಲದೆ ಸಂಪರ್ಕ ಸಾಧಿಸುತ್ತಾರೆ. ...

ಮೂಲಭೂತವಾಗಿ ಗುರುವಿನ ಸಾಮರ್ಥ್ಯ ಅಂತರಗಳನ್ನು ತುಂಬಿಬಿಡುವು–ದಾಗಿದೆ! ನಿಮ್ಮನ್ನು ಸಂಪರ್ಕದಲ್ಲಿ ತರುವುದು: ನೀವು ಉಚ್ಚತರ ಸ್ತರಗಳಲ್ಲಿದ್ದಾಗ ನಿಮ್ಮನ್ನು ಅತ್ಯುಚ್ಚ ಸ್ತರದತ್ತ ತರುವುದಾಗಿರುತ್ತದೆ, ಇಲ್ಲವೆ ನಿಮ್ಮ ಆತ್ಮದತ್ತ, ನಿಮ್ಮ ಅಂತರಂಗದಲ್ಲಿರುವ ಚೈತ್ಯದತ್ತ ನಿಮ್ಮನ್ನು ತರುವುದಾಗಿರುತ್ತದೆ ಇಲ್ಲವೆ ಪರಮೋಚ್ಚನ ಸಂಪರ್ಕದಲ್ಲಿ ತರುವುದಾಗಿರುತ್ತದೆ. ಅದನ್ನು ಕೈಕೊಳ್ಳಬಲ್ಲ ಜನರು ಅತಿ ಕಡಿಮೆ ಸಂಖ್ಯೆಯಲ್ಲಿರುತ್ತಾರೆ.

**(ಅನುಯಾಯಿಯೊಂದಿಗೆ ಮಾತುಕತೆ, ಜುಲೈ 10, 1963)**

*

**ಅಭೀಪ್ಸೆಯ ನಿಷ್ಕಾಪಟ್ಯ ಮತ್ತು ಮಂತ್ರ**

ಶಬ್ದಗಳು ಏನನ್ನು ಪ್ರತಿನಿಧಿಸುತ್ತವೆ ಮತ್ತು ತಮ್ಮ ಕಂಪನಗಳೊಂದಿಗೆ ಏನನ್ನು ತರುತ್ತವೆ ಎಂಬುದನ್ನು ನೋಡಿದಾಗ ಅವು ತಮ್ಮಲ್ಲಿಯೇ ಅಷ್ಟೊಂದು ಹೆಚ್ಚಿನವಾಗಿರುವುದಿಲ್ಲ ಎಂದು ತೋರಿಬರುತ್ತದೆ. "ಕೇವಲ ಈ ಶಬ್ದಗಳು ಸಹಾಯಕವಾಗಿವೆ" ಎಂದು ಹೇಳುವುದು ಸರಿಯಾದದ್ದಲ್ಲ, ಅಲ್ಲ, ಅದಲ್ಲ. ಆದರೆ ಆ ಶಬ್ದಗಳು ಸೂಕ್ಷ್ಮ, ಭೌತಿಕ ಕಂಪನಗಳಿಗೆ ಜೊತೆಯನ್ನು ಒದಗಿಸುತ್ತವೆ, ಆ ಜೊತೆ ಒಂದು ಅನುಭವವನ್ನು ಇಲ್ಲವೆ ಒಂದು ವಿಶಿಷ್ಟ ಸ್ಥಿತಿಯನ್ನು ನಿರ್ಮಾಣ ಮಾಡಿದೆ, ಅದು ಆ ಶಬ್ದಗಳ ಸಾನ್ನಿಧ್ಯ ಮತ್ತು ಈ ಸನಾತನ ದೈವೀ ಜೀವನದ ಚಲನೆ, ತರಂಗದಂತಿರುವ ಆ ಕಂಪನ ಇವುಗಳ ನಡುವೆ ಉಂಟಾದ ನಿರ್ಮಾಣವಾಗಿದೆ.

ಸರ್ವಸಾಧಾರಣ ಭಾಷೆಯಲ್ಲಿ ಹೇಳುವುದಾದರೆ ಮಂತ್ರದ ಕಂಪನದಿಂದಾಗಿ ದೇಹ ಒಂದು ಸ್ಥಿತಿಯಲ್ಲಿ ಪ್ರವೇಶ ಮಾಡುವಂತಾಗುತ್ತದೆ – ಆದರೆ ವಿಶೇಷವಾಗಿ 'ಈ' ಮಂತ್ರವಲ್ಲ: ಅದು ಒಂದು ಮಂತ್ರ (ನಿಜವಾದ ಸಾಮರ್ಥ್ಯದಿಂದ ಯುಕ್ತವಾದದ್ದು) ಮತ್ತು ದೇಹ ಇವುಗಳ ನಡುವೆ ಸ್ಥಾಪಿತಗೊಂಡ ವಿಶೇಷ ಸಂಬಂಧ, ಅದು ಸ್ವಯಂಪ್ರೇರಿತವಾಗಿ ಉಕ್ಕೇರಿ ಬರುತ್ತದೆ: ದೇಹ ನಡೆದಾಡಲು ಪ್ರಾರಂಭಿಸಿದ ಕೂಡಲೆ ಅದು ಆ ದೈವೀ ಶಬ್ದಗಳ ಲಯಬದ್ಧತೆಗೆ ಅನುಸಾರವಾಗಿ ನಡೆದಾಡುತ್ತದೆ. ಮತ್ತು ದೈವೀ ಶಬ್ದಗಳ ಲಯಬದ್ಧತೆ, ಸ್ವಾಭಾವಿಕವಾಗಿ, ಒಂದು ವಿಶಿಷ್ಟ ಕಂಪನ ಉಂಟಾಗುವಂತೆ ಮಾಡುತ್ತದೆ, ಅದು ತನ್ನ ಸರದಿಯಲ್ಲಿ ಆ ಸ್ಥಿತಿ ಉಂಟಾಗುವಂತೆ ಮಾಡುತ್ತದೆ.

ಆದರೆ ಪ್ರತ್ಯೇಕವಾಗಿ ಈ ಶಬ್ದಗಳೇ ಎಂದು ಹೇಳುವುದು ಹಾಸ್ಯಾಸ್ಪದವಾದದ್ದು. ಅಭೀಪ್ಸೆಯಲ್ಲಿರುವ ನಿಷ್ಕಾಪಟ್ಯ ಅಭಿವ್ಯಕ್ತಿಯ ನಿಖರತೆ ಹಾಗೂ ಸಾಮರ್ಥ್ಯ ಇವು ಲೆಕ್ಕಕ್ಕೆ ಬರುವಂತಹವು ಎಂದರೆ ಮಂತ್ರದಿಂದ ಬರುವ ಸಾಮರ್ಥ್ಯವನ್ನು ಸ್ವೀಕರಿಸುವುದಾಗಿರುತ್ತದೆ. ಇದು ಬಹಳ ಸ್ವಾರಸ್ಯಕರವಾದ ಏನೋ ಒಂದು: ಪರಿಣಾಮಕಾರಿ ಉಪಕರಣವೆಂದು ಪರಮೋಚ್ಚ ದೈವೀ ಸಾಮರ್ಥ್ಯದಿಂದ ಮಂತ್ರವನ್ನು ಸ್ವೀಕರಿಸಲಾಗಿರುತ್ತದೆ ಮತ್ತು ಹಾಗಾಗಿ ಅದು ಸ್ವಯಂಚಾಲಿತವಾಗಿ ವಿಶಿಷ್ಟ ಶಕ್ತಿ ಹಾಗೂ ಸಾಮರ್ಥ್ಯಗಳನ್ನು ಒಳಗೊಂಡಿರುತ್ತದೆ. ದೈವೀ ಸಿದ್ಧಿಯನ್ನು ಪಡೆಯುವತ್ತ ಒಬ್ಬನನ್ನು ಕರೆದೊಯ್ಯುವ ಒಂದು ಮಂತ್ರ ಇನ್ನೊಬ್ಬ ಮನುಷ್ಯ ಭಾವಶೂನ್ಯವಾಗಿ, ಬಲವಿಲ್ಲದವನಂತಾಗಿ ಉಳಿದುಕೊಳ್ಳುವಂತೆ ಮಾಡುತ್ತದೆ.

**(ಅನುಯಾಯಿಯೊಂದಿಗೆ ಮಾತುಕತೆ, ಮೇ 31, 1962)**

*

**ತೊಂದರೆಯಿದ್ದಾಗ ಮಂತ್ರ ಜಪಿಸುವ ರೂಢಿಯನ್ನು ಅಭಿವೃದ್ಧಿಪಡಿಸಿಕೊಳ್ಳಿರಿ**

ನೀವು ಆಟವಾಡುತ್ತಿರುವಾಗ ಒಮ್ಮೆಗೆ ಏನೋ ಒಂದು ತಪ್ಪು ದಾರಿಯತ್ತ ಸಾಗುತ್ತಿದೆ ಎಂಬ ಅರಿವು ತಂದುಕೊಂಡಾಗ – ನೀವು ತಪ್ಪು ಮಾಡುತ್ತಿರುತ್ತೀರಿ, ಲಕ್ಷ್ಯಗೊಡುತ್ತಿರುವುದಿಲ್ಲ, ಕೆಲವೊಮ್ಮೆ ನೀವು ಕೈಕೊಳ್ಳುತ್ತಿರುವುದಕ್ಕೆ ಅಡ್ಡಲಾಗಿ ವಿರೋಧೀ ಪ್ರವಾಹಗಳು ಬರುತ್ತಿರುತ್ತವೆ – ಇಂತಹ ಕ್ಷಣದಲ್ಲಿ ಮಂತ್ರದ ಮೂಲಕ ಕರೆ ಕೊಟ್ಟರೆ, ಮಂತ್ರದ ಶಬ್ದವನ್ನು ಪುನರಾವರ್ತಿಸುತ್ತಿದ್ದರೆ ಅದಕ್ಕೆ ಅಸಾಧಾರಣವಾದ ಪರಿಣಾಮವಿರುತ್ತದೆ.



ನಿಮ್ಮ ಮಂತ್ರವನ್ನು ನೀವು ಆಯ್ಕೆ ಮಾಡಿಕೊಳ್ಳುತ್ತೀರಿ, ಇಲ್ಲವೆ ಅದಕ್ಕೂ ಹೆಚ್ಚಾಗಿ ಒಂದು ದಿನ, ತೊಂದರೆಯಿದ್ದ ಕ್ಷಣದಲ್ಲಿ ಅದು ನಿಮಗೆ ಸ್ವಯಂಚಾಲಿತವಾಗಿ ಬರುತ್ತದೆ. ವಿಷಯಗಳು ಬಹಳ ಕಠಿಣವಾಗಿವೆ ಎಂದೆನಿಸುತ್ತಿದ್ದಾಗ, ನಿಮ್ಮಲ್ಲಿ ಒಂದು ಬಗೆಯ ತಳಮಳ, ಕಾತರ ಇದ್ದಾಗ, ಏನು ಸಂಭವಿಸಲಿದೆ ಎಂಬುದು ತಿಳಿಯದೆ ಇದ್ದಾಗ ಶಬ್ದ (ಮಂತ್ರ) ಒಮ್ಮೆಗೆ ನಿಮ್ಮಲ್ಲಿ ಜಿಗಿದು ಬರುತ್ತದೆ, ಪ್ರತಿಯೊಬ್ಬನಿಗೆ ಅದು ಭಿನ್ನವಾಗಿರಬಹುದು. ನೀವು ಇದನ್ನು ಗುರುತಿಸಿದರೆ ಮತ್ತು ತೊಂದರೆಯೊಂದನ್ನು ಎದುರಿಸಿದ ಪ್ರತಿ ಸಲ ಆ ಮಂತ್ರವನ್ನು ಪುನರುಚ್ಚರಿಸಿದರೆ ಅದು ಎದುರಿಸಲಾಗದಂತಹದಾಗುತ್ತದೆ. ಉದಾಹರಣೆಗೆ ನೀವು ರೋಗಕ್ಕೆ ಈಡಾಗುತ್ತಿದ್ದೀರಿ ಎಂಬ ಭಾವನೆ ಬಂದಾಗ, ನೀವು ಕೈಕೊಳ್ಳುತ್ತಿರುವುದು ಕೆಟ್ಟ ರೀತಿಯಲ್ಲಿ ಆಗುತ್ತಿದೆ ಎಂಬ ಭಾವನೆ ಬಂದಾಗ, ಅನಿಷ್ಟವಾದ ಏನೋ ಒಂದು ನಿಮ್ಮ ಮೇಲೆ ಆಕ್ರಮಣ ಮಾಡಲಿದೆ ಎಂದೆನಿಸಿದಾಗ ಮಂತ್ರ ಸಹಾಯಕವಾಗುತ್ತದೆ. ಆದರೆ ಅದು ಸತ್ತೆಯಲ್ಲಿ ಸ್ವಯಂಪ್ರೇರಣೆಯ ರೀತಿಯದಾಗಿರಬೇಕು, ನೀವು ಅದನ್ನು ಕುರಿತು ಯೋಚಿಸುವ ಆವಶ್ಯಕತೆ ಇಲ್ಲದೆ ಜಿಗಿದೆದ್ದು ಮೇಲೆ ಬರಬೇಕು. ನಿಮ್ಮ ಮಂತ್ರವನ್ನು ನೀವು ಆಯ್ದುಕೊಳ್ಳುತ್ತೀರಿ. ಏಕೆಂದರೆ ಅದು ನಿಮ್ಮ ಅಭೀಪ್ಸೆಯ ಸ್ವಯಂಪ್ರೇರಿತ ಅಭಿವ್ಯಕ್ತಿಯಾಗಿರುತ್ತದೆ, ಅದು ಒಂದು ಶಬ್ದ, ಎರಡು ಇಲ್ಲವೆ ಮೂರು ಶಬ್ದಗಳು, ಒಂದು ವಾಕ್ಯ ಹೊಂದಿರಬಹುದು, ಅದು ಪ್ರತಿಯೊಬ್ಬರ ಮೇಲೆ ಅವಲಂಬಿಸಿರುತ್ತದೆ, ಆದರೆ ಅದು ಒಂದು ಧ್ವನಿಯಾಗಿದ್ದು ನಿಮ್ಮಲ್ಲಿ ಒಂದು ವಿಶಿಷ್ಟ ಸ್ಥಿತಿ ಎಚ್ಚತ್ತುಕೊಳ್ಳುವಂತಾಗಬೇಕು. ಅದನ್ನು ಪಡೆದುಕೊಂಡಾಗ ನೀವು ಪ್ರತಿಯೊಂದರಳೊಗಿನಿಂದ ಯಾವ ತೊಂದರೆಯಿಲ್ಲದೆ ಸಾಗಿಹೋಗಬಲ್ಲಿರಿ ಎಂದು ನಾನು ಆಶ್ವಾಸನೆ ನೀಡುತ್ತೇನೆ. ನಿಜವಾದ, ದಿಟ ಎನ್ನಬಹುದಾದ ಅಪಾಯವನ್ನು ಎದುರಿಸುತ್ತಿದ್ದಾಗ, ಉದಾಹರಣೆಗೆ ಒಂದು ಆಕ್ರಮಣ ನಿಮ್ಮ ಮೇಲಿದ್ದಾಗ, ಯಾರೋ ಒಬ್ಬರು ನಿಮ್ಮನ್ನು ಕೊಂದುಹಾಕಬೇಕೆಂದು ಬಯಸುತ್ತಿದ್ದಾಗ ನೀವು ಉದ್ರೇಕಕ್ಕೊಳಗಾಗದೆ, ಗೊಂದಲಕ್ಕೀಡಾಗದೆ, ನಿಶ್ಚಲತೆಯಲ್ಲಿದ್ದುಕೊಂಡು ಮಂತ್ರವನ್ನು ಪಠಿಸುತ್ತಿದ್ದರೆ ನಿಮಗೆ ಯಾರೂ ಏನೂ ಮಾಡಲಾರರು. ಸ್ವಾಭಾವಿಕವಾಗಿ ನೀವು ನಿಮ್ಮ ಮೇಲೆ ನಿಜವಾದ ಪ್ರಭುತ್ವ ಹೊಂದಿರಬೇಕು, ಸತ್ತೆಯ ಒಂದು ಭಾಗ ಅಲ್ಲಿ ಎಲೆ ಅಲುಗಾಡಿದಂತೆ ನಡುಗುತ್ತಿರಬಾರದು, ಹಾಗಲ್ಲ, ನೀವು ಅದನ್ನು ಇಡಿಯಾಗಿ, ನಿಷ್ಕಾಪಟ್ಯದಿಂದ ಕೈಕೊಳ್ಳಬೇಕು, ಆಗ ಅದು ಸರ್ವಸಮರ್ಥ–ವಾಗಿರುತ್ತದೆ. ಅತ್ಯಂತ ಒಳ್ಳೆಯ ರೀತಿಯೆಂದರೆ ಶಬ್ದ (ಮಂತ್ರ) ಸ್ವಯಂಪ್ರೇರಣೆಯಿಂದ ಬಂದಾಗ ದೊಡ್ಡ ತೊಂದರೆ ಇದ್ದಾಗ (ಅದು ಮಾನಸಿಕ, ಪ್ರಾಣಿಕ, ಭೌತಿಕ,

ಭಾವನಾತ್ಮಕ, ಹೀಗೇ ಏನೇ ಆಗಿರಲಿ) ಆ ಕ್ಷಣದಲ್ಲಿ ನೀವು ಕರೆ ಕೊಡಬೇಕು ಮತ್ತು ಒಮ್ಮೆಗೆ ಅದು ನಿಮ್ಮೊಳಗೆ ಜಿಗಿದು ಬರುತ್ತದೆ, ಎರಡು, ಮೂರು ಜಾದೂ ಶಬ್ದಗಳಿರುತ್ತವೆ. ನೀವು ಈ ಶಬ್ದಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ಅವುಗಳನ್ನು ಸಂಕಟದ ಸಮಯದಲ್ಲಿ ಪುನರುಚ್ಚರಿಸುವುದನ್ನು ಕುರಿತು ರೂಢಿ ಮಾಡಿಕೊಳ್ಳಬೇಕು. ನೀವು ರೂಢಿ ಮಾಡಿಕೊಂಡರೆ ಒಂದು ದಿನ ಅವು ಸ್ವಯಂಪ್ರೇರಿತವಾಗಿ ಬರುತ್ತವೆ: ತೊಂದರೆಗಳು ಬಂದ ಸಮಯದಲ್ಲಿಯೇ ಅವು ಸ್ವಯಂಪ್ರೇರಿತವಾಗಿ ಬರುತ್ತವೆ, ಅದೇ ಸಮಯದಲ್ಲಿ ಮಂತ್ರ ಬರುತ್ತದೆ. ಆಗ ಪರಿಣಾಮಗಳು ಅದ್ಭುತವಾಗಿರುವುದನ್ನು ನೀವು ನೋಡುತ್ತೀರಿ. ಆದರೆ ಅದು ಕೃತ್ರಿಮವಾದದ್ದಾಗಿರಬಾರದು. ಇಲ್ಲವೆ ನೀವು ಸ್ವೇಚ್ಛೆಯಿಂದ "ನಾನು ಆ ಶಬ್ದಗಳನ್ನು ಉಪಯೋಗಿಸುತ್ತೇನೆ" ಎಂದು ನಿರ್ಧರಿಸಿದ್ದಾಗಬಾರದು ಇಲ್ಲವೆ ಯಾರೋ ಒಬ್ಬರು" ಓಹ್ ಇದು ಬಹಳ ಒಳ್ಳೆಯದೆಂಬುದು ನಿಮಗೆ ತಿಳಿದಿದೆಯೆ" ಎಂದು ಹೇಳಿರಬಾರದು – ಅದು ಅವರಿಗೆ ಒಳ್ಳೆಯದಾಗಿರಬಹುದು, ಆದರೆ ಪ್ರತಿಯೊಬ್ಬರಿಗೂ ಒಳ್ಳೆಯದಾಗಿರುವುದಿಲ್ಲ.

**(CWM, 4/388–89)**

*

**ನಿದ್ರೆ ಮಾಡುವುದಕ್ಕಿಂತ ಮೊದಲು ನಿಮ್ಮ ಮಂತ್ರವನ್ನು ಜಪಿಸಿರಿ**

ನಿಮ್ಮ ಬೆನ್ನ ಮೇಲೆ ಅಂಗಾತಾಗಿ ಮಲಗಿಕೊಳ್ಳಬೇಕು, ಎಲ್ಲ ಸ್ನಾಯುಗಳನ್ನು, ನರಗಳನ್ನು ಸಡಿಲಿಸಬೇಕು – ಅದನ್ನು ಕಲಿತುಕೊಳ್ಳುವುದು ಸುಲಭ – ನಾನು ಅದನ್ನು ಹಾಸಿಗೆಯ ಮೇಲಿನ ಚಿಂದಿಬಟ್ಟೆಯಂತಾಗಬೇಕು ಎಂದು ಹೇಳುತ್ತೇನೆ: ಬೇರೇನೂ ಉಳಿದುಕೊಂಡಿರುವುದಿಲ್ಲ. ನೀವದನ್ನು ಮನಸ್ಸಿನೊಂದಿಗೆ ಕೂಡ ಮಾಡಬಲ್ಲಿರಾದರೆ, ಹಾಸಿಗೆಯ ಮೇಲೆ ಮಲಗಿಕೊಂಡಾಗಿನಿಗಿಂತ ಹೆಚ್ಚು ದಣಿದವರನ್ನಾಗಿ ಮಾಡುವ ಹೆಡ್ಡತನದ ಕನಸುಗಳನ್ನೆಲ್ಲ ತೊಡೆದು ಹಾಕುವಿರಿ. ಅದು ನಿಯಂತ್ರಣವಿಲ್ಲದೆ ಮುಂದುವರಿದುಕೊಂಡು ಹೋಗುವ ಮಿದುಳಿನ ಜೀವಕೋಶಗಳ ಚಟುವಟಿಕೆ. ಅದು ಮನುಷ್ಯ ಹೆಚ್ಚು ದಣಿದುಕೊಳ್ಳುವಂತೆ ಮಾಡುತ್ತದೆ. ಹಾಗಾಗಿ ಇಡೀ ವಿಶ್ರಾಂತಿ, ಒಂದು ಬಗೆಯ ಸಂಪೂರ್ಣ ನಿಶ್ಚಲತೆ, ಉದ್ವೇಗವಿಲ್ಲದಿರುವಿಕೆ ಇದೆಲ್ಲ ಇರುವ ಸ್ಥಿತಿಯಲ್ಲಿ ಪ್ರತಿಯೊಂದೂ ನಿಂತು ಹೋಗಿರುತ್ತದೆ.

ಆದರೆ ಅದು ಪ್ರಾರಂಭ ಮಾತ್ರ.



ನಂತರ ನೀವು ಸ್ವ–ಅರ್ಪಣೆಯನ್ನು ಸಾಧ್ಯವಿದ್ದಷ್ಟು ಇಡಿಯಾಗುವಂತೆ ಮಾಡುತ್ತೀರಿ, ಅದನ್ನು ತಲೆಯಿಂದ ಪಾದದವರೆಗೆ, ಬಾಹ್ಯದಿಂದ ಅಂತರಂಗದೊಳಗೆ ಮಾಡುವುದಿರುತ್ತದೆ. ಮತ್ತು ಅಹಂಕಾರದ ಎಲ್ಲ ತಡೆಹಿಡಿಯುವಿಕೆಯನ್ನು ಸಾಧ್ಯವಿದ್ದಷ್ಟು ಇಡಿಯಾಗಿ ನಿರ್ಮೂಲ ಮಾಡುತ್ತೀರಿ ಮತ್ತು ನಿಮ್ಮ ಮಂತ್ರವನ್ನು ಜಪಿಸಲು ಪ್ರಾರಂಭಿಸುತ್ತೀರಿ, ಆ ಮಂತ್ರ ನಿಮ್ಮಲ್ಲಿ ಇದ್ದುದಾಗಿರಬಹುದು, ಇಲ್ಲವೆ ನಿಮಗೆ ಸಾಮರ್ಥ್ಯಪೂರ್ಣ ಆದದ್ದೆನಿಸುವ ಶಬ್ದವಾಗಿರಬಹುದು, ಪ್ರಾರ್ಥನೆಯ ರೂಪದಲ್ಲಿರಲು ಹೃದಯದಿಂದ ಸ್ವಯಂಪ್ರೇರಿತವಾಗಿ ಮುಂದೆ ಜಿಗಿದು ಬಂದದ್ದಾಗಿರಬಹುದು, ಆ ಶಬ್ದ ನಿಮ್ಮ ಅಭೀಪ್ಸೆಯನ್ನು ಒಟ್ಟುಗೂಡಿಸುತ್ತದೆ. ಆ ಮಂತ್ರವನ್ನು ಕೆಲಕಾಲ ಪುನರುಚ್ಚರಿಸಿದ ನಂತರ, ನಿಮಗೆ ರೂಢಿಯಾಗಿದ್ದರೆ ಸಮಾಧಿ ಸ್ಥಿತಿಯಲ್ಲಿ ಪ್ರವೇಶಿಸುತ್ತೀರಿ. ಆ ಸಮಾಧಿ ಸ್ಥಿತಿಯಿಂದ ನಿದ್ರೆಯಲ್ಲಿ ಸಾಗಿ ಹೋಗುತ್ತೀರಿ. ಸಮಾಧಿ ಸ್ಥಿತಿ ಅದು ಉಳಿದುಕೊಳ್ಳಬೇಕಾದಷ್ಟು ಕಾಲ ಉಳಿದು–ಕೊಳ್ಳುತ್ತದೆ ಮತ್ತು ಸ್ವಾಭಾವಿಕವಾಗಿ, ಸ್ವಯಂಪ್ರೇರಿತರಾಗಿ, ನಿದ್ರೆಯ ಸ್ಥಿತಿಯಲ್ಲಿ ಸಾಗಿ ಹೋಗುತ್ತೀರಿ. ಆದರೆ ನಿದ್ರೆಯಿಂದ ಎಚ್ಚತ್ತುಕೊಂಡಾಗ, ಎಲ್ಲವನ್ನೂ ನೆನಪಿಗೆ ತಂದುಕೊಳ್ಳುತ್ತೀರಿ. ನಿದ್ರೆ ಸಮಾಧಿ ಸ್ಥಿತಿ ಮುಂದುವರಿದುಕೊಂಡು ಹೋದ ಹಾಗಿರುತ್ತದೆ.

ಮೂಲಭೂತವಾಗಿ ನಿದ್ರೆಯ ಏಕೈಕ ಉದ್ದೇಶ, ದೇಹ ಸಮಾಧಿ ಸ್ಥಿತಿಯ ಪರಿಣಾಮವನ್ನು ಜೀರ್ಣಿಸಿಕೊಳ್ಳುವುದಾಗಿದೆ, ಅದರಿಂದಾಗಿ ಪರಿಣಾಮವನ್ನು ಎಲ್ಲೆಡೆ ಸ್ವೀಕರಿಸುವಂತಾಗಬಹುದು ಮತ್ತು ದೇಹದಲ್ಲಿ ಸಂಗ್ರಹವಾದ ವಿಷ ಪದಾರ್ಥಗಳನ್ನು ಹೊರಗೆ ಚೆಲ್ಲಿಕೊಡುವುದಕ್ಕಾಗಿ ರಾತ್ರಿ ಕಾಲದ ಕಾರ್ಯ ವಿಧಾನಗಳನ್ನು ಕೈಕೊಳ್ಳುವಂತಾಗುವುದು ಮತ್ತು ನೀವು ಎಚ್ಚತ್ತುಕೊಂಡಾಗ, ನಿದ್ರೆಯಿಂದ ಬರುವ ಭಾರದ ಗುರುತು ಅಲ್ಲಿರುವುದಿಲ್ಲ: ಸಮಾಧಿಯ ಪರಿಣಾಮ ಮುಂದುವರಿದುಕೊಂಡು ಹೋಗುತ್ತದೆ.

ಸಮಾಧಿ ಸ್ಥಿತಿಯಲ್ಲಿ ಎಂದಿಗೂ ಪ್ರವೇಶಿಸದೆ ಇದ್ದವರೂ ಕೂಡ ಮಂತ್ರವೊಂದನ್ನು, ಶಬ್ದವೊಂದನ್ನು ಪುನರುಚ್ಚರಿಸುವುದು, ಪ್ರಾರ್ಥನೆ ಮಾಡುವುದು ಒಳ್ಳೆಯದು. ಆದರೆ ಶಬ್ದಗಳಲ್ಲಿ ಜೀವಂತಿಕೆ ಇರಬೇಕು, ಬೌದ್ಧಿಕ ಪ್ರಾಮುಖ್ಯತೆಯನ್ನು ಕುರಿತು ನಾನು ಹೇಳುತ್ತಿಲ್ಲ, ಅಂತಹದೇನನ್ನೂ ಅಲ್ಲ, ಆದರೆ ಕಂಪನವಿರಬೇಕು. ದೇಹದ ಮೇಲೆ ಅದರ ಪರಿಣಾಮ ಅಸಾಧಾರಣವಾಗಿರುತ್ತದೆ, ಅದು ಕಂಪಿಸಲು ಪ್ರಾರಂಭಿಸುತ್ತದೆ ಮತ್ತು ನಿಶ್ಚಲತೆಯಿಂದ ನೀವು ನಿದ್ರೆ ಮಾಡುವುದಕ್ಕಾಗಿ ನಿಮ್ಮನ್ನು

ಬಿಟ್ಟುಕೊಡುತ್ತೀರಿ. ದೇಹ ಹೆಚ್ಚು ಹೆಚ್ಚಾಗಿ ಕಂಪಿಸುತ್ತದೆ ಮತ್ತು ನೀವು ದೂರ ಹೋಗಿಬಿಡುತ್ತೀರಿ. ಅದು ತಮಸ್ಸಿಗೆ ಚಿಕಿತ್ಸೆ ನೀಡುತ್ತದೆ.

**(CWM, 15/379–80)** **– ಶ್ರೀಮಾತೆ**

*

**ಧ್ವನಿಯಲ್ಲಿ ಒಂದು ಸಾಮರ್ಥ್ಯವಿದೆ**

ನಾನು ಜಪ ಕೈಕೊಳ್ಳುವುದಕ್ಕೆ ಇದೇ (ಧ್ವನಿಯೇ) ಮುಖ್ಯ ಕಾರಣ. ಧ್ವನಿಯಲ್ಲಿಯೇ ಒಂದು ಸಾಮರ್ಥ್ಯವಿದೆ ಮತ್ತು ಆ ಧ್ವನಿಯನ್ನು ಪುನರುಚ್ಚರಿಸುವಂತೆ ದೇಹಕ್ಕೆ ಒತ್ತಾಯ ಮಾಡುವುದರ ಮೂಲಕ ಅದರ ಕಂಪನವನ್ನು ಅದೇ ಕಾಲಕ್ಕೆ ದೇಹ ಸ್ವೀಕರಿಸುವಂತೆ ಮಾಡುತ್ತೀರಿ. ದೇಹದಲ್ಲಿರುವ ಏನೋ ಒಂದರ ಕಾರ್ಯಗತಿ ಕ್ಷೋಭೆಗೊಳಗಾದಾಗ (ನೋವು, ಅಸ್ತವ್ಯಸ್ತತೆ, ಯಾವುದೋ ರೋಗ ಕಾಣಿಸಿಕೊಳ್ಳುವ ಸ್ಥಿತಿ ಇಂತಹ ಯಾವುದಾದರೊಂದು ಇದ್ದಾಗ) ನನ್ನ ಗಮನಕ್ಕೆ ಬಂದದ್ದು ಇದು: ಒಂದು ವಿಶಿಷ್ಟ ರೀತಿಯಲ್ಲಿ ನನ್ನ ಮಂತ್ರವನ್ನು ಜಪಿಸುತ್ತೇನೆ. ಆದಾಗ್ಯೂ ಶಬ್ದಗಳು ಅವೇ ಆಗಿರುತ್ತವೆ, ಅದೇ ಮಂತ್ರ ಇರುತ್ತದೆ, ಆದರೆ ಒಂದು ಉದ್ದೇಶವನ್ನಿರಿಸಿಕೊಂಡು ಹೇಳಿದ್ದು, ಎಲ್ಲದಕ್ಕಿಂತಲೂ ಹೆಚ್ಚಾಗಿ, ಶರಣಾಗತಿಯ ಚಲನೆಯೊಂದಿಗೆ, ನೋವನ್ನು ಅಸ್ತವ್ಯಸ್ತತೆಯನ್ನು ಅರ್ಪಿಸುವುದರೊಂದಿಗೆ ಮತ್ತು ತೆರೆದಿರಿಸಿಕೊಳ್ಳುವ ರೀತಿಯಲ್ಲಿ ಹೇಳಿದ ಮಂತ್ರಕ್ಕೆ ಅತ್ಯದ್ಭುತ ಪರಿಣಾಮವಿದೆ. ಮಂತ್ರ ಸರಿಯಾದ ರೀತಿಯಲ್ಲಿ ಕಾರ್ಯ ಮಾಡುತ್ತದೆ, ಈ ರೀತಿಯಲ್ಲಷ್ಟೇ ಹಾಗೆ ಮಾಡುತ್ತದೆ, ಬೇರೆ ರೀತಿಯಲ್ಲಲ್ಲ ಮತ್ತು ಕೆಲ ಕಾಲದ ನಂತರ ಎಲ್ಲವನ್ನೂ ವ್ಯವಸ್ಥಿತ ರೂಪದಲ್ಲಿ ಮರಳಿ ಇರಿಸಲಾಗುತ್ತದೆ ಮತ್ತು ಏಕಕಾಲಕ್ಕೆ, ಸಹಜವಾಗಿ, ಅಸ್ತವ್ಯಸ್ತತೆಯ ಹಿಂದೆ ಏನಿದೆ, ಅದನ್ನು ಸರಿಪಡಿಸಲು ಏನು ಮಾಡಬೇಕೆಂಬುದರ ನಿಖರವಾದ ಜ್ಞಾನ ನನಗೆ ಬರುತ್ತದೆ. ಇದಕ್ಕೂ ಹೊರತಾಗಿ ಮಂತ್ರ ನೇರವಾಗಿ ನೋವಿನ ಮೇಲೆಯೇ ಕಾರ್ಯ ಕೈಕೊಳ್ಳುತ್ತದೆ.

**– ಶ್ರೀಮಾತೆ**

*

**ಓಂ ಮತ್ತು ಮಂತ್ರದ ಕಾರ್ಯ ವಿಧಾನ**

'ಓಂ' ಎಂಬುದು ಮಂತ್ರ. ತುರೀಯದಿಂದ ಹಿಡಿದು ಬಾಹ್ಯ ಭೌತಿಕ ಸ್ತರದವರೆಗಿನ ನಾಲ್ಕು ಪ್ರಾಂತಗಳಲ್ಲಿ ಓಂ ಮಂತ್ರ ಅಭಿವ್ಯಕ್ತಿಕಾರಕ ಧ್ವನಿ ಸಂಕೇತವಾಗಿದೆ. ಮಂತ್ರದ ಕಾರ್ಯವಿಧಾನ ಆಂತರಿಕ ಪ್ರಜ್ಞೆಯಲ್ಲಿ ಕಂಪನಗಳನ್ನು



ಸೃಷ್ಟಿಸುವುದಾಗಿದೆ, ಮಂತ್ರ ಸಂಕೇತಿಸುವುದನ್ನು ಮತ್ತು ನಿಜವಾಗಿ ಅದು ತನ್ನಲ್ಲಿಯೇ ಕೊಂಡೊಯ್ಯುವುದನ್ನು ಪ್ರಜ್ಞೆ ಸಿದ್ಧಿಸಿಕೊಳ್ಳುವಂತೆ ಮಾಡುತ್ತದೆ. ಹಾಗಾಗಿ ಮಂತ್ರ ಓಂ ಪ್ರಜ್ಞೆಯನ್ನು ಏಕೈಕವಾದ ದೈವೀ ಪ್ರಜ್ಞೆಯ ದರ್ಶನ ಹಾಗೂ ಭಾವನೆಗಳತ್ತ ಕೊಂಡೊಯ್ಯಬೇಕು, ಆ ದೈವೀ ಪ್ರಜ್ಞೆ ಎಲ್ಲ ಭೌತಿಕ ವಸ್ತು–ವಿಷಯಗಳಲ್ಲಿದೆ, ಆಂತರಿಕ ಸತ್ತೆಯಲ್ಲಿ, ಅತಿಭೌತಿಕ ಲೋಕಗಳಲ್ಲಿ, ಈಗ ನಮಗೆ ಅತಿಪ್ರಜ್ಞೆಯ– ದೆನಿಸುವ, ಮೇಲ್ಗಡೆಗಿರುವ ಕಾರ್ಯಕಾರಣ ಸಂಬಂಧದ (causal) ಲೋಕದಲ್ಲಿ, ಕೊನೆಯಲ್ಲಿ ಹೇಳುವುದಾದರೆ ಎಲ್ಲ ವಿಶ್ವವ್ಯಾಪಿ ಅಸ್ತಿತ್ವದ ಮೇಲಿರುವ ಪರಮೋಚ್ಚ ವಿಶ್ವಾತೀತತೆಯಲ್ಲಿಯೂ ಇದೆ. ಕೊನೆಯದು ಸಾಮಾನ್ಯವಾಗಿ ಆ ಮಂತ್ರವನ್ನು ಉಪಯೋಗಿಸುವವರ ಮುಖ್ಯ ಪೂರ್ವಮಗ್ನತೆಯಾಗಿರುತ್ತದೆ.

**(SABCL, 23/745)**

*

**ಪ್ರಶ್ನೆ :** *ಓಂ ಶಬ್ದ ಬ್ರಹ್ಮನ್‌ನನ್ನು ಪ್ರತಿನಿಧಿಸುತ್ತದೆ ಎಂದು ಹೇಳಲಾಗಿದೆ.*

**ಶ್ರೀ ಅ :** ಹೌದು, 'ಓಂ' ಶಬ್ದ ಶ್ರೇಷ್ಠ ಸಾಮರ್ಥ್ಯ ಹೊಂದಿದೆ – ಅದರ ಉಚ್ಚಾರ ಉತ್ಪಾದಿಸುವ ಧ್ವನಿ–ಶಕ್ತಿ ತನ್ನಲ್ಲಿ ಜಗತ್ತಿನಲ್ಲಿರುವ ಎಲ್ಲ ಧ್ವನಿ–ಶಕ್ತಿಗಳನ್ನು ಒಳಗೊಂಡಿರುತ್ತದೆ ಮತ್ತು ಹೀಗೆ ಅದು ಬ್ರಹ್ಮನ್‌ನನ್ನು ಪ್ರತಿನಿಧಿಸುತ್ತದೆ ಎಂದು ಹೇಳಲಾಗಿದೆ.

**ಪ್ರಶ್ನೆ :** *ಶಬ್ದಗಳ ಧ್ವನಿಗಳಲ್ಲಿ ಯಾವುದಾದರೂ ಶಕ್ತಿ ಇರುವುದೇ?*

**ಶ್ರೀ ಅ :** ಏಕಿರಬಾರದು? ಧ್ವನಿ ಒಂದು ಶಕ್ತಿಯಾಗಿದೆಯಲ್ಲವೆ? ಧ್ವನಿ ಭೌತಿಕ ಕಂಪನಗಳನ್ನು ಉತ್ಪಾದಿಸಬಲ್ಲದಾದರೆ – ಅದು ಆಧ್ಯಾತ್ಮಿಕ ಪರಿಣಾಮಗಳನ್ನು ಕೂಡ ಉತ್ಪಾದಿಸುತ್ತದೆ.

*

## ಮಂತ್ರ ರೂಪದಲ್ಲಿ ಭಗವಂತನ ನಾಮ

**ಎಲ್ಲ ಕಾಲದಲ್ಲಿ ಭಗವಂತನನ್ನು ಸ್ಮರಿಸಿರಿ**

ಇಲ್ಲಿ ಗೀತೆ ಮೃತ್ಯುವಿನ ಸಮಯದಲ್ಲಿ ಯೋಚನೆ ಮತ್ತು ಮನಸ್ಸಿನ ಸ್ಥಿತಿ ಕುರಿತು ದೊಡ್ಡ ಒತ್ತು ನೀಡುತ್ತದೆ. ಪ್ರಜ್ಞೆಯ ಸ್ವ–ಸೃಷ್ಟ್ಯಾತ್ಮಕ ಸಾಮರ್ಥ್ಯವನ್ನು ಗುರುತಿಸದಿದ್ದರೆ ಈ ಒತ್ತು ನೀಡುವಿಕೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟಕರವಾಗುತ್ತದೆ. ಆಂತರಿಕ ಪರಿಗಣನೆ, ನಂಬಿಕೆ, ಶ್ರದ್ಧಾ ಇವೆಲ್ಲವುಗಳಲ್ಲಿ

ಯಾವುದು ಯೋಚನೆಯೊಂದಿಗೆ ತನ್ನನ್ನು ನೆಲೆಗೊಳಿಸಿಕೊಳ್ಳುವುದೋ, ಸಂಪೂರ್ಣ ಹಾಗೂ ನಿಶ್ಚಿತ ಒತ್ತು ನೀಡುವುದೋ ಅದರಲ್ಲಿ ನಮ್ಮ ಆಂತರಿಕ ಸತ್ತೆ ಬದಲಾಗಲು ಪ್ರವೃತ್ತಿ ಹೊಂದಿರುತ್ತದೆ. ಜೀವನದ ಮರ್ತ್ಯ ಸ್ಥಿತಿಯಿಂದ ಸಾಗಿ ಹೋಗುವ ವಿಷಮ ಸ್ಥಿತಿಯ ಕ್ಷಣದಲ್ಲಿ ನಮ್ಮಲ್ಲಿರುವ ಪ್ರಜ್ಞೆಯ ಸ್ಥಿತಿಯ ಮಹತ್ವ ಸ್ಪಷ್ಟವಾಗುತ್ತದೆ. ಆದರೆ ಮರಣಶಯ್ಯೆಯೊಂದಿಗೆ ಇರುವ ಅಭಿಪ್ರಾಯ ಭೇದ ಇಲ್ಲವೆ ನಮ್ಮ ಜೀವನ ಧಾಟಿಯಿಂದ ಮಾಡಿಕೊಂಡ ಅಸಮರ್ಪಕ ತಯಾರಿ ಮತ್ತು ನಮ್ಮ ಗತಕಾಲದ ಅಧೀನತೆ ಇವುಗಳಿಗೆ ಸಂರಕ್ಷಿಸುವ ಸಾಮರ್ಥ್ಯವಿರುವುದಿಲ್ಲ. ಇಲ್ಲಿ ಗೀತೆಯ ಯೋಚನೆ ಧರ್ಮದ ಪ್ರಚಲಿತ ಲೋಲುಪತೆ ಮತ್ತು ಅನುಕೂಲತೆಗಳು ಇವುಗಳಿಗೆ ಸರಿಸಮವಾಗಿರುವುದಿಲ್ಲ, ಅದಕ್ಕೆ ಒರಟಾದ ನಿರಾಧಾರವಾದ ಊಹೆಗಳು, ಕ್ರಿಶ್ಚಿಯನ್‌ರ ಪಾಪವಿಮೋಚನ ಕ್ರಿಯೆ, ಪುರೋಹಿತರಿಂದ ಕೊನೆಯ ಅಭ್ಯಂಜನ, ಆತ್ಮೋದ್ಧಾರಕ್ಕೆ ಮಾರ್ಗದರ್ಶನ ಪಡೆಯದೆ ಲೌಕಿಕ ಜೀವನ ನಡೆಸಿದ ನಂತರ ಕ್ರಿಶ್ಚಿಯನ್‌ರ ರೀತಿಯಲ್ಲಿ ಆತ್ಮೋದ್ಧಾರಕ್ಕೆ ಮಾರ್ಗದರ್ಶನ ಪಡೆದು ಮರಣ ಹೊಂದುವುದು, ಇಲ್ಲವೆ ಕಾಶೀಕ್ಷೇತ್ರದ ಗಂಗಾ ನದಿಯಲ್ಲಿ ಅಪಘಾತದಿಂದಾಗಲಿ ಇಲ್ಲವೆ ಕಾಳಜಿಪೂರ್ವಕವಾಗಲಿ ಮರಣ ಹೊಂದುವುದು ಇಂತಹವುಗಳ ಯಾವ ಸಮಾನತೆಯೂ ಇಲ್ಲ. ಭೌತಿಕ ಮರಣದ ಕ್ಷಣದಲ್ಲಿ ಮನಸ್ಸು ಬಾಹ್ಯ ಯಥಾರ್ಥ ಸಂಗತಿಗಳನ್ನು ಅವಲಂಬಿಸದೆ ಮಾನವನ ದೈವೀ ವಿಶಿಷ್ಟ ಗುಣಗಳನ್ನು ಅವಲಂಬಿಸಿದ ದೈವೀ ಸಂಭೂತಿಯ ಮೇಲೆ ನೆಟ್ಟಿರಬೇಕು. 'ಯಮ್ ಸ್ಮರನ್ ಭಾವಮ್ ತ್ಯಜೇತಿ ಅಂತ್ಯೆ ಕಲೇವರಮ್' ಭೌತಿಕ ಜೀವನದ ಕಾಲದಲ್ಲಿ ಈ ಮಂತ್ರದ ಭಾವದಲ್ಲಿ ಆತ್ಮ ಪ್ರತಿಯೊಂದು ಕ್ಷಣ ಆಂತರಿಕವಾಗಿ ಬೆಳೆಯುತ್ತಿರಬೇಕು, 'ಸದಾ ತದ್ಭಾವ ಭಾವಿತಃ', "ಆದ್ದರಿಂದ" ದೈವೀ ಗುರು ಹೇಳುವುದೇನೆಂದರೆ "ಎಲ್ಲ ಕಾಲದಲ್ಲಿ ನನ್ನನ್ನು ಸ್ಮರಿಸುತ್ತಿರು ಮತ್ತು ಯುದ್ಧ ಮಾಡು, ಏಕೆಂದರೆ ನಿನ್ನ ಮನಸ್ಸು ಮತ್ತು ತಿಳಿವಳಿಕೆ ಯಾವಾಗಲು ನನ್ನ ಮೇಲೆ ಸ್ಥಿರಗೊಂಡಿದ್ದರೆ ಮತ್ತು ಅವುಗಳನ್ನು ನನಗೆ ಅರ್ಪಿಸಿದ್ದರೆ ಮಯಿ ಅರ್ಪಿತ ಮನೋಬುದ್ಧಿಃ ನೀನು ನಿಶ್ಚಿತವಾಗಿ ನನ್ನ ಬಳಿಗೆ ಬರುವಿ. ಏಕೆಂದರೆ ಸತತ ಆಚರಿಸುವ, ದಾರಿ ತಪ್ಪದ ಯೋಗದಲ್ಲಿ ಯಾವಾಗಲೂ ಅವನನ್ನು ಅವನ ಪ್ರಜ್ಞೆಯೊಡನೆ ಏಕಗೊಂಡು ಯೋಚಿಸುವುದರ ಮೂಲಕ ಮನುಷ್ಯ ದೈವೀ ಪರಮೋಚ್ಚ ಪುರುಷನತ್ತ ಬರುತ್ತಾನೆ."

**(CWSA, 19/295–96, SABCL, 13/281–82)**

*



## ಎಲ್ಲ ಜೀವನವನ್ನು ವಿಚ್ಛೇದವಿಲ್ಲದ ಯೋಗವಾಗುವಂತೆ ಹೊರಳಿಸುವುದು

ಇಡೀ ಸತ್ತೆಯನ್ನು ಭಗವಂತನೊಡನೆ ಏಕವಾಗುವಂತೆ ಮಾಡುವುದು ಅದೆಷ್ಟರ ಮಟ್ಟಿಗೆ ಇಡಿಯಾಗಿ ಮತ್ತು ಎಲ್ಲ ರೀತಿಗಳಲ್ಲಿ ಎಂದರೆ ಮನುಷ್ಯ ಸ್ವಾಭಾವಿಕವಾಗಿ ಹಾಗೂ ಸತತವಾಗಿ ಏಕತೆಯಲ್ಲಿ ಉಳಿದುಕೊಳ್ಳುವಂತಾಗಬೇಕು. ಮತ್ತು ಈ ರೀತಿಯಲ್ಲಿ ಎಲ್ಲ ಜೀವನ, ಕೇವಲ ಯೋಚನೆ ಹಾಗೂ ಧ್ಯಾನ ಇವುಗಳಷ್ಟೇ ಅಲ್ಲ, ಆದರೆ ಕ್ರಿಯೆ, ಶ್ರಮ, ಯುದ್ಧ, ಇವೂ ಕೂಡ ಭಗವಂತನನ್ನು ನೆನಪಿಸಿಕೊಳ್ಳುವಂತಾಗಬೇಕು, ಏಕೆಂದರೆ ಅದು ಒಟ್ಟಿನಲ್ಲಿ ಅವಶ್ಯವಾಗಿದೆ. "ನನ್ನನ್ನು ನೆನಪಿಸಿಕೋ ಹಾಗೂ ಯುದ್ಧ ಮಾಡು" ಎಂಬುದರ ಅರ್ಥ ಎಂದೆಂದಿಗೂ ಉಪಲಬ್ಧವಿರುವ ಭಗವಂತನನ್ನು ಕುರಿತಾದ ಯೋಚನೆಯನ್ನು ಕ್ಷಣಮಾತ್ರಕ್ಕಾದರೂ ಲೌಕಿಕವಾದುದರಲ್ಲಿ ತೊಡಗಿಸಿಕೊಂಡು ಕಳೆದುಕೊಳ್ಳಬಾರದು. ಲೌಕಿಕವಾದುದರಲ್ಲಿ, ಸಾಮಾನ್ಯವಾಗಿ, ನಮ್ಮ ಮನಸ್ಸುಗಳು ತೊಡಗಿಕೊಂಡಿರುವುದರಿಂದ ಅದನ್ನು ಕೈಕೊಳ್ಳುವುದು ಸಾಕಷ್ಟು ಕಠಿಣವಾಗಿರುತ್ತದೆ, ಬಹುಮಟ್ಟಿಗೆ ಅಸಾಧ್ಯವಾಗಿರುತ್ತದೆ ಎಂದು ತೋರಿಬರಬಹುದು. ... ಭಗವಂತನನ್ನು ನೆನಪಿಸಿಕೊಳ್ಳುವುದು ಇನ್ನು ಮುಂದೆ ಬಿಟ್ಟು ಬಿಟ್ಟು ಮರಳಿ ಬರುವ ಮನಸ್ಸಿನ ಕ್ರಿಯೆಯಾಗುವುದಿಲ್ಲ, ಆದರೆ ನಮ್ಮ ಚಟುವಟಿಕೆಗಳ ಸಾಮಾನ್ಯ ಸ್ಥಿತಿಯಾಗುತ್ತದೆ ಮತ್ತು ಒಂದು ರೀತಿಯಲ್ಲಿ ನಮ್ಮ ಪ್ರಜ್ಞೆಯದೇ ದ್ರವ್ಯವಾಗುತ್ತದೆ. ಜೀವ ತನ್ನ ಸ್ವಾಭಾವಿಕ ಹಕ್ಕನ್ನು ವಶದಲ್ಲಿ ಇಟ್ಟುಕೊಂಡಿರುತ್ತದೆ. ಪುರುಷೋತ್ತಮನೊಂದಿಗೆ ಆಧ್ಯಾತ್ಮಿಕ ಸಂಬಂಧ ಮತ್ತು ನಮ್ಮ ಎಲ್ಲ ಜೀವನ ಒಂದು ಯೋಗವಾಗುತ್ತದೆ, ಅದು ಸಿದ್ಧಿಸಿಕೊಂಡದ್ದು, ಆದಾಗ್ಯೂ ಶಾಶ್ವತವಾಗಿ ಸ್ವ–ಸಿದ್ಧಿಗೊಳಪಡಿಸುವ ಏಕತೆಯಾಗಿರುತ್ತದೆ.

**(CWSA, 19/300; SABCL, 13/285–86)** – ಶ್ರೀ ಅರವಿಂದರು

*

## ನಿಮಗೆ ಸ್ವಲ್ಪ ಸಮಯವಿದ್ದಾಗ

ನಿಮಗೆ ಯಾವ ಕಾರ್ಯವೂ ಇಲ್ಲದೆ ಇದ್ದಾಗ, ಸಮಾಧಿ ಸ್ಥಿತಿಯಲ್ಲಿ ಸಾಗಿ ಹೋಗಿರಿ, ಯಾವುದಾದರೊಂದು ಮಂತ್ರವನ್ನು ಜಪಿಸಿರಿ. ಅದು "ಓಂ" ಇಲ್ಲವೆ "ದೈವೀ ಪ್ರಭು" ಇಲ್ಲವೆ "ಶ್ರೀಮಾತಾ" ಹೀಗೆ ಒಂದು ಮಂತ್ರವಾಗಿರಬಹುದು. ನಿಮ್ಮ ಹೃದಯದಾಳದಲ್ಲಿ ಇಳಿದು ಹೋಗಿರಿ, ಅಲ್ಲಿ ದೈವೀ ಪ್ರಭುವಿನ ಹೃದಯದಲ್ಲಿ ಆಶ್ರಯ ಪಡೆಯಿರಿ, ಏಕೆಂದರೆ ಅವನ ಹೃದಯ ಬಹಳ ಮೃದುವಾಗಿದೆ, ಮಧುರವಾಗಿದೆ, ಸ್ನೇಹಪರ (nice)ವಾಗಿದೆ.

ನೀವು ಅಸ್ತವ್ಯಸ್ತತೆಗೆ ಒಳಗಾದಾಗ, ಅಸ್ತವ್ಯಸ್ತತೆಯ ಹೊರತಾಗಿ ಬೇರೇನನ್ನೂ ಯೋಚಿಸದಂತಾದಾಗ ಅಂತರಂಗದಲ್ಲಿ ಸಾಗಿ ಹೋಗಿ ದೈವೀ ಪ್ರಭುವಿಗೆ ಕರೆ ಕೊಡಿರಿ. ಸಹಜವಾಗಿ (ಉತ್ತರ ದೊರಕಿಸುವುದರಲ್ಲಿ) ನೀವು ಬೇಗನೆ ಯಶಸ್ಸನ್ನು ಕಂಡುಕೊಳ್ಳದೆ ಇರಬಹುದು, ಆದರೆ ಕ್ರಮೇಣ ಅದನ್ನು ದೊರಕಿಸುವಿರಿ.

ದೈವೀ ಪ್ರಭುವನ್ನು ಭೌತಿಕ ಕಣ್ಣುಗಳಿಂದ ನೋಡಲಾಗುವುದಿಲ್ಲ. ನೀವು ಅವನ ಹೃದಯದಲ್ಲಿಯೇ ಇರುವಿರೆಂಬ ರೀತಿಯಲ್ಲಿ ಅವನ ಬಗ್ಗೆ ಭಾವನೆ ತಂದುಕೊಳ್ಳಬೇಕು. ಸ್ವಾಭಾವಿಕವಾಗಿ ಇದನ್ನು ಭಾವನೆಗೆ ತಂದುಕೊಳ್ಳಲು ಕಾಲಾವಧಿ ಬೇಕಾಗುತ್ತದೆ.

ಎಷ್ಟೋ ವರ್ಷಗಳು ಕಳೆದು ಹೋದ ನಂತರವೂ ಜನರು ಈ ಸ್ಥಿತಿಯನ್ನು ಸಿದ್ಧಿಸಿಕೊಳ್ಳಲಾರರು. ದೈವೀ ಪ್ರಭುವೇ ಪ್ರಾರಂಭದಲ್ಲಿರುವವನು, ಅವನೇ ಕೊನೆಯವನು ಎಂಬುದನ್ನು ಎಂದಿಗೂ ಮರೆಯಬೇಡಿರಿ. ಈ ಜಗತ್ತು ದೈವೀ ಪ್ರಭುವನ್ನು ಮರೆತುಬಿಟ್ಟಿದೆ, ಅವನನ್ನು ಮರೆತುಬಿಟ್ಟು ಜನರು ಹೆಡ್ಡರಾಗಿದ್ದಾರೆ ಮತ್ತು ಆ ಕಾರಣದಿಂದಾಗಿ ಎಲ್ಲ ದುಃಸ್ಥಿತಿಗಳು ಹಾಗೂ ತೊಂದರೆಗಳು ಸತತ ಅವರ ಜೊತೆಗಿವೆ.

*

**ವಿರೋಧೀ ಶಕ್ತಿಗಳನ್ನು ತೊಡೆದು ಹಾಕುವ ಅತ್ಯಂತ ಒಳ್ಳೆಯ ರೀತಿ**

ವಿರೋಧೀ ಶಕ್ತಿಗಳನ್ನು ಹಾಗೂ ಅವುಗಳ ಸೂಚನೆಗಳನ್ನು ತೊಡೆದು ಹಾಕುವ ಅತ್ಯಂತ ಒಳ್ಳೆಯ ರೀತಿ ಎಂದರೆ "ನನಗೆ ಭಗವಂತನಲ್ಲದೆ ಬೇರೇನೂ ಬೇಡ" ಎಂದು ಸತತ ಭಗವಂತನ ನಾಮವನ್ನು ಪುನರುಚ್ಚರಿಸುತ್ತಿರುವುದಾಗಿದೆ, ಅದನ್ನು ಊಟ ಮಾಡುವಾಗ, ನಿದ್ರೆ ಮಾಡುವಾಗ, ಯಾವುದೇ ಚಟುವಟಿಕೆಯಲ್ಲಿ ತೊಡಗಿಕೊಂಡಾಗ ಕೈಕೊಳ್ಳುತ್ತಿರಬೇಕು. ನೀವು ಕಾಯಿಲೆಗೆ ಈಡಾದಾಗ ಇಲ್ಲವೆ ತಪ್ಪಾದ ಏನೋ ಒಂದು ನಿಮಗೆ ಸಂಭವಿಸಿದಾಗ, ನೀವು ಸಿದ್ಧಿಸಿಕೊಳ್ಳಬೇಕಾದ ಗುರಿಯನ್ನು ತಲುಪುವ ಮಾರ್ಗದಲ್ಲಿರುವ ಎಲ್ಲ ಅಡೆತಡೆಗಳನ್ನು ತೆಗೆದು ಹಾಕೆಂದು ಭಗವಂತನಿಗೆ ಪ್ರಾರ್ಥನೆ ಮಾಡಬೇಕು. ನಿಮ್ಮ ಕರೆ ಸಾಕಷ್ಟು ನಿಷ್ಕಪಟವಾದದ್ದಾಗಿದ್ದರೆ, ಒಮ್ಮೆಗೆ ಎಲ್ಲ ತೊಂದರೆಗಳು ಮಾಯವಾಗುವವು. ಸತತ ಪ್ರಾರ್ಥನೆ ಮಾಡುತ್ತಿರುವುದನ್ನು ನೀವು ರೂಢಿಸಿಕೊಂಡರೆ, ಪ್ರಾರ್ಥನೆಗಳು ನಿಷ್ಕಪಟದ್ದಾಗುತ್ತವೆ, ಏಕೆಂದರೆ ಭಗವಂತ ಪ್ರತಿಯೊಬ್ಬನ ಹೃದಯದ ಆಳಾತಿ ಆಳದಲ್ಲಿ ಇರುತ್ತಾನೆ ಮತ್ತು ಯಾವಾಗಲೂ ಅವನು ಎಲ್ಲ ನಿಷ್ಕಪಟ



ಪ್ರಾರ್ಥನೆಗಳನ್ನು ಕೇಳಿಸಿಕೊಳ್ಳುತ್ತಾನೆ, ಹಾಗೂ ಎಲ್ಲವನ್ನೂ ನೋಡುತ್ತಾನೆ.

**(Mother you said so, 23–3–1956)** **– ಶ್ರೀಮಾತೆ**

*

**ಭಗವಂತನ ನಾಮದಲ್ಲಿರುವ ದೈವೀ ಸಾಮರ್ಥ್ಯ**

ಭಗವಂತನ ನಾಮದಲ್ಲಿರುವ ದೈವೀ ಸಾಮರ್ಥ್ಯ ಹಾಗೂ ಅದು ನೀಡಿದ ರಕ್ಷಣೆ ಕುರಿತು ನಿನಗಾದ ಅನುಭವ, ಅದೇ ಬಗೆಯ ನಂಬಿಕೆ ಹಾಗೂ ನೆಚ್ಚಿಕೆಗಳಿಂದ ಉಪಯೋಗಿಸಿದ ಎಲ್ಲರ ಅನುಭವವೂ ಆಗಿದೆ. ಹೃದಯದಿಂದ ಕರೆ ಕೊಟ್ಟ ಯಾರಿಗೂ ಅದು ವಿಫಲವಾಗದು. ನಿನ್ನ ನಂಬಿಕೆಯನ್ನು ಅಲುಗಾಡುವಂತೆ ಮಾಡುವ ಯಾವುದೇ ಪರಿಸ್ಥಿತಿಗೆ ಅನುವು ಮಾಡಿಕೊಡಬೇಡ. ಏಕೆಂದರೆ ಸಾಗಿ ಹೋಗಿ ಗುರಿಯನ್ನು ತಲುಪಲು ಈ ನಂಬಿಕೆಗಿಂತ ಬೇರೆ ಯಾವುದೂ ಶ್ರೇಷ್ಠತರ ಬಲವನ್ನು ಕೊಡುವುದು ಸಾಧ್ಯವಿಲ್ಲ. ಜ್ಞಾನ ಮತ್ತು ತಪಸ್ಸು ಇವುಗಳ ಶಕ್ತಿ ಏನೇ ಆಗಿರಲಿ, ಅವುಗಳ ಪೋಷಣೆ ನೀಡುವ ಸಾಮರ್ಥ್ಯ ಕಡಿಮೆ ಪ್ರಮಾಣದಲ್ಲಿರುತ್ತದೆ – ನಂಬಿಕೆ ಪ್ರಯಾಣದಲ್ಲಿ ಅತ್ಯಂತ ಬಲವತ್ತರವಾದ ಕೈಗೋಲು. ನಿನ್ನ ಮೇಲೆ ರಕ್ಷಣೆಯಿದೆ ಹಾಗೂ ಶ್ರೀಮಾತೆಯವರ ಜಾಗರೂಕ ಪ್ರೀತಿಯಿದೆ. ಅದನ್ನು ನೆಚ್ಚಿಕೊಂಡಿರು ಮತ್ತು ನಿನ್ನ ಸತ್ತೆ ಅದಕ್ಕೆ ಹೆಚ್ಚು ಹೆಚ್ಚಾಗಿ ತೆರೆದಿರಿಸಿಕೊಳ್ಳಲಿ. – ಆಗ ಅದು ನಿನ್ನ ಮೇಲಾಗುವ ಆಕ್ರಮಣಗಳನ್ನು ನಿವಾರಿಸುವುದು ಮತ್ತು ನಿನ್ನನ್ನು ಯಾವಾಗಲೂ ಎತ್ತಿ ಹಿಡಿಯುವುದು.

**(CWSA, 32/308; SABCL, 25/347)**

*

ಭಗವಂತನ ನಾಮಕ್ಕೆ, ಸಾಮಾನ್ಯವಾಗಿ, ರಕ್ಷಣೆಗಾಗಿ, ಆರಾಧನೆಗಾಗಿ, ಭಕ್ತಿಯಲ್ಲಿ ಹೆಚ್ಚಳವಾಗುವುದಕ್ಕಾಗಿ, ಆಂತರಿಕ ಪ್ರಜ್ಞೆಯನ್ನು ತೆರೆದಿರಿಸುವುದಕ್ಕಾಗಿ ಮತ್ತು ಆ ಸಂಬಂಧದಲ್ಲಿ ಭಗವಂತನ ಸಾಕ್ಷಾತ್ಕಾರಕ್ಕಾಗಿ ಕರೆ ಕೊಡಲಾಗುತ್ತದೆ. ಅವಚೇತನದಲ್ಲಿ ಕಾರ್ಯ ಮಾಡುವುದರ ಅವಶ್ಯವಿದ್ದಷ್ಟರ ಮಟ್ಟಿಗೆ ಅಲ್ಲಿ ನಾಮ ಪರಿಣಾಮಕಾರಿಯಾಗಬೇಕು.

**(SABCL, 23/746)**

*

ಯಾವುದೇ ಹೆಸರಿಗೆ ಕರೆ ಕೊಡಲಿ, ಅದಕ್ಕೆ ಉತ್ತರ ನೀಡುವ ದೈವೀ ಸಾಮರ್ಥ್ಯ ಶ್ರೀಮಾತೆಯವರದಾಗಿರುತ್ತದೆ. ಪ್ರತಿಯೊಂದು ನಾಮ ಭಗವಂತನ ಒಂದು ಮುಖವನ್ನು ಸೂಚಿಸುತ್ತದೆ ಮತ್ತು ಆ ಮುಖದಿಂದಾಗಿ ಸೀಮಿತವಾಗಿರುತ್ತದೆ, ಶ್ರೀಮಾತೆಯವರ ಸಾಮರ್ಥ್ಯ ವಿಶ್ವಂಭರವಾದದ್ದು.

**(SABCL, 23/747)**

*

ಮಂತ್ರ ಕುರಿತು ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅದು ನೇರವಾದ ಮತ್ತು ಅತ್ಯುಚ್ಚ ಮಟ್ಟದ, ಅತ್ಯಂತ ಗಾಢವಾದ, ಅತ್ಯಂತ ಹೆಚ್ಚಿನ ರೀತಿಯಲ್ಲಿ ದೈವಿಕವಾಗಿ ಭಾರ ಹೊತ್ತ ಲಯಬದ್ಧ ಶಬ್ದವಾಗಿರುತ್ತದೆ; ಅದು ಅಂತರ್ಬೋಧೆಯ, ಜ್ಞಾನ ಪ್ರಕಾಶನದ ಸ್ಫೂರ್ತಿಯನ್ನು ಮೈವೆತ್ತಿರುತ್ತದೆ, ಆತ್ಮದ ದರ್ಶನ ಹಾಗೂ ಸಾನ್ನಿಧ್ಯಗಳಿಂದ, ವಸ್ತು-ವಿಷಯಗಳ ಆಳಾತಿ ಆಳದ ನೈಜತೆ ಹಾಗೂ ಅದರ ಸತ್ಯದೊಂದಿಗೆ, ಅದರ ದೈವೀ ಆತ್ಮ-ರೂಪಗಳೊಂದಿಗೆ, ಜೀವಿಸುವ ದೈವೀ ಸತ್ಯದಿಂದ ಜನಿಸಿದ ದೇವಪ್ರಮುಖರೊಂದಿಗೆ ಅದು (ಮಂತ್ರ) ಮನಸ್ಸನ್ನು ಆತ್ಮದಿಂದ ತುಂಬುತ್ತದೆ. ಇಲ್ಲವೆ ಹೀಗೆ ಹೇಳಬಹುದು: ಅದು (ಮಂತ್ರ) ಪರಮೋಚ್ಚ ಲಯಬದ್ಧ ಭಾಷೆಯಾಗಿದ್ದು ಸಾಂತವಾದುದೆಲ್ಲವನ್ನು ಹಿಡಿದುಕೊಳ್ಳುತ್ತದೆ ಮತ್ತು ಪ್ರತಿಯೊಂದರಲ್ಲಿ ತನ್ನದೇ ಅನಂತವಾದುದರ ಪ್ರಕಾಶ ಹಾಗೂ ಧ್ವನಿ ಇವುಗಳನ್ನು ತರುತ್ತದೆ.

**(CWSA, 26/217–18)** – **ಶ್ರೀ ಅರವಿಂದರು**

*

ಓಂ ಅವಿನಾಶಿ ಶಬ್ದ, ಓಂ ವಿಶ್ವವಾಗಿದೆ ಮತ್ತು ಇದು ಓಂ ಕುರಿತು ನಿರೂಪಣೆ. ಗತಕಾಲ, ವರ್ತಮಾನಕಾಲ ಮತ್ತು ಭವಿಷ್ಯತ್ಕಾಲ, ಹಿಂದೆ ಇದ್ದದ್ದು, ಸದ್ಯ ಇರುವಂತಹದು, ಮುಂದೆ ಇರುವುದೆಲ್ಲವೂ ಓಂ ಆಗಿದೆ.

ಹಾಗೆಯೇ ಕಾಲದ ಬಂಧನಕ್ಕೊಳಗಾಗದೆ ಅಸ್ತಿತ್ವದಲ್ಲಿರಬಹುದಾದುದೆಲ್ಲವೂ ಓಂ.

**(CWSA, 18/193)** – **ಶ್ರೀ ಅರವಿಂದರು**

*





ॐ आनन्दमयि चैतन्यमयि सत्यमयि परमे

Om anandamayi chaitanyamayi satyamayi parame

ಓಂ ಆನಂದಮಯಿ ಚೈತನ್ಯಮಯಿ ಸತ್ಯಮಯಿ ಪರಮೆ

## ಜಪ

### ಜಪವನ್ನು ಕೈಕೊಳ್ಳುವ ರೀತಿ

ಸಾಮಾನ್ಯವಾಗಿ ಜಪ ಯಶಸ್ವಿಯಾಗಬೇಕಾದರೆ ಅದಕ್ಕಿರುವ ಎರಡು ನಿಬಂಧನೆಗಳಲ್ಲಿ ಒಂದನ್ನಾದರೂ ಪಾಲಿಸಬೇಕು – ಮಾನಸಿಕವಾದ ರೀತಿ ಹೀಗಿದೆ: ಜಪದ ಅಂತರಾರ್ಥವನ್ನು ಅರಿತುಕೊಂಡು ಅದನ್ನು ಕೈಕೊಳ್ಳಬೇಕು, ಅದರ ಸ್ವರೂಪ, ಸಾಮರ್ಥ್ಯ, ಸೌಂದರ್ಯ, ಅದು ಸೂಚಿಸುವ ದೇವಪ್ರಮುಖನ ಆಕರ್ಷಣೆ ಇವುಗಳ ಮೇಲೆ ನೆಲೆಸಿದ ಏನೋ ಒಂದು ಮನಸ್ಸಿನಲ್ಲಿರಬೇಕು. ಭಾವನಾತ್ಮಕ ರೀತಿ ಹೀಗಿದೆ: ಜಪ ಹೃದಯದಿಂದ ಮೇಲೆದ್ದು ಬರಬೇಕು ಇಲ್ಲವೆ ಅದರಲ್ಲಿ ಒಂದು ಬಗೆಯ ಭಾವನೆ ಅಥವಾ ಭಕ್ತಿ ಅನುರಣಿಸಿ ಅದನ್ನು ಜೀವಂತವಾದದ್ದನ್ನಾಗಿ ಮಾಡಬೇಕು. ಮನಸ್ಸು ಇಲ್ಲವೆ ಪ್ರಾಣಿಕ ಅದಕ್ಕೆ ಆಧಾರ ಇಲ್ಲವೆ ಪೋಷಣೆ ನೀಡಬೇಕು. ಅದು ಮನಸ್ಸನ್ನು ನೀರಸವಾಗುವಂತೆ, ಪ್ರಾಣಿಕವನ್ನು ತಳಮಳಗೊಳ್ಳುವಂತೆ ಮಾಡಿದರೆ ಅದಕ್ಕೆ ಆಧಾರ ಇಲ್ಲವೆ ಪೋಷಣೆ ದೊರಕಿರುವುದಿಲ್ಲ. ಸಹಜವಾಗಿ ಮೂರನೆಯ ರೀತಿಯೊಂದಿದೆ, ಅದು ಮಂತ್ರ

ಇಲ್ಲವೆ ನಾಮದಲ್ಲಿಯೇ ನೆಚ್ಚಿಕೆಯನ್ನು ಇರಿಸಿಕೊಳ್ಳುವುದಾಗಿದೆ, ಆದರೆ ಆಗ ಅದರ ಸಾಮರ್ಥ್ಯ ತನ್ನ ಕಂಪನಗಳನ್ನು ಆಂತರಿಕ ಸತ್ತೆಯ ಮೇಲೆ ಸಾಕಷ್ಟು ಅಚ್ಚೊತ್ತುವವರೆಗೆ ಮತ್ತು ಯಾವುದೊಂದು ಕ್ಷಣದಲ್ಲಿ ದೈವೀ ಸಾನ್ನಿಧ್ಯಕ್ಕೆ ಇಲ್ಲವೆ ಸ್ಪರ್ಶಕ್ಕೆ ಇದ್ದಕ್ಕಿದ್ದಂತೆ ತೆರೆದುಕೊಳ್ಳುವಂತೆ ಆಗುವವರೆಗೆ ಮನುಷ್ಯ ಜಪವನ್ನು ಮುಂದುವರಿಸಿಕೊಂಡು ಹೋಗಬೇಕಾಗುತ್ತದೆ. ಆದರೆ ಪರಿಣಾಮಕ್ಕಾಗಿ ಹೆಣಗುವಿಕೆ ಇಲ್ಲವೆ ಒತ್ತಾಯ ಇದ್ದರೆ ಪರಿಣಾಮವನ್ನು ಮನಸ್ಸಿನಲ್ಲಿ ನಿಶ್ಚಲವಾಗಿ ಸ್ವೀಕರಿಸುವ ಆವಶ್ಯಕತೆಗೆ ತಡೆಯುಂಟಾಗುತ್ತದೆ. ಆ ಕಾರಣದಿಂದಾಗಿ ಮಾನಸಿಕ ನಿಶ್ಚಲತೆಯ ಮೇಲೆ ಅಷ್ಟೊಂದು ಒತ್ತುಕೊಟ್ಟು ಹೇಳಿದ್ದೆ, ಪ್ರಯಾಸ ಇಲ್ಲವೆ ಪ್ರಯತ್ನದ ಮೇಲೆ ಒತ್ತುಕೊಟ್ಟು ಹೇಳಿರಲಿಲ್ಲ. ಆ ಒತ್ತುಕೊಡುವಿಕೆ ಚೈತ್ಯ ಮತ್ತು ಮನಸ್ಸು ಸ್ವೀಕೃತಿಗೆ ಅವಶ್ಯವಾದ ಸ್ಥಿತಿಯನ್ನು ಅಭಿವೃದ್ಧಿಪಡಿಸಿಕೊಳ್ಳುವುದಕ್ಕಾಗಿ ಇತ್ತು – ಆ ಸ್ವೀಕೃತಿ ಕಾವ್ಯ ರಚನೆಗಾಗಿ ಇಲ್ಲವೆ ಸಂಗೀತಕ್ಕಾಗಿ ಸ್ಫೂರ್ತಿ ದೊರಕಿಸುವ ಹಾಗೆ ಸ್ವಾಭಾವಿಕ–ವಾಗಿರುತ್ತದೆ. ಆ ಕಾರಣದಿಂದಾಗಿಯೇ ನೀನು ಕಾವ್ಯ ರಚನೆಯ ಕಾರ್ಯವನ್ನು ಕೈ ಬಿಡಬೇಡ ಎಂದು ಹೇಳಿದ್ದೆ, ಅದು ಸಹಾಯಕವಾಗುತ್ತದೆ, ತಯಾರಿಗೆ ಅಡ್ಡಿ ಉಂಟಾಗುವಂತೆ ಮಾಡುವುದಿಲ್ಲ, ಏಕೆಂದರೆ ಅದು ಸ್ವೀಕೃತಿಗಾಗಿ ಸರಿಯಾದ ಮನೋಭಾವವನ್ನು ಅಭಿವೃದ್ಧಿಪಡಿಸಿಕೊಳ್ಳಲು ಮತ್ತು ಅಂತರಂಗದಲ್ಲಿರುವ ಭಕ್ತಿಯನ್ನು ಹೊರತರಲು ಒಂದು ಸಾಧನವಾಗುತ್ತದೆ. ಎಲ್ಲ ಚೈತನ್ಯವನ್ನು ಜಪ ಕೈಕೊಳ್ಳುವುದರಲ್ಲಿ ವ್ಯಯ ಮಾಡುವುದು ಹೊರೆಯಾಗುತ್ತದೆ, ಯಶಸ್ವಿಯಾಗಿ ಧ್ಯಾನ ಮಾಡುವ ರೂಢಿಯಿದ್ದವರಿಗೂ ಕೂಡ ಅದನ್ನು ನಿರ್ವಹಿಸಿಕೊಂಡು ಹೋಗುವುದು ಕಠಿಣವಾಗುತ್ತದೆ – ಮೇಲ್ಗಡೆಯಿಂದ ತಡೆಯಿಲ್ಲದ ಅನುಭವಗಳ ಪ್ರವಾಹವಿದ್ದಾಗ ಮಾತ್ರ ಕಠಿಣವಾಗುವುದಿಲ್ಲ.

**(SABCL, 23/745)** **– ಶ್ರೀ ಅರವಿಂದರು**

*

**ಗಾಯತ್ರಿ ಮಂತ್ರದ ಜಪ**

ಗಾಯತ್ರಿ ಮಂತ್ರದ ಸಾಮರ್ಥ್ಯ ದೇವೀ ಸತ್ಯದ ಪ್ರಕಾಶ ನೀಡುತ್ತದೆ. ಅದು ಜ್ಞಾನಕ್ಕಾಗಿ ಇರುವ ಮಂತ್ರ.

*

ಸತ್ತೆಯ ಎಲ್ಲ ಸ್ತರಗಳಲ್ಲಿ ದೈವೀ ಸತ್ಯದ ಪ್ರಕಾಶವನ್ನು ಗಾಯತ್ರಿ ಮಂತ್ರ ತರುತ್ತದೆ.

*



ಗಾಯತ್ರಿ ಮಂತ್ರವನ್ನು, ಸದ್ಯ ನೀನು ಅನುಸರಿಸುತ್ತಿರುವ ವಿಧಾನವನ್ನು ಬಿಟ್ಟುಕೊಡುವ ಆವಶ್ಯಕತೆ ಇಲ್ಲ. ಹೃದಯ ಕೇಂದ್ರದಲ್ಲಿ ಏಕಾಗ್ರತೆಯನ್ನು ಸಾಧಿಸುವುದು ಒಂದು ವಿಧಾನ, ಶಿರದ(ಅಥವಾ ಶಿರದ ಮೇಲೆ)ಲ್ಲಿ ಏಕಾಗ್ರತೆಯನ್ನು ಸಾಧಿಸುವುದು ಇನ್ನೊಂದು ವಿಧಾನ. ಈ ಯೋಗದಲ್ಲಿ ಇವೆರಡೂ ವಿಧಾನಗಳನ್ನು ಒಳಗೊಳ್ಳಲಾಗಿದೆ. ಮತ್ತು ಮನುಷ್ಯ ಇವೆರಡರಲ್ಲಿ ಯಾವುದು ಅವನಿಗೆ ಸುಲಭವಾದದ್ದು ಎಂದೆನಿಸಿತ್ತದೆಯೋ ಅದನ್ನು ಅವನು ಕೈಕೊಳ್ಳಬಹುದು. ಹೃದಯದಲ್ಲಿ ಏಕಾಗ್ರತೆ ಸಾಧಿಸುವುದರ ಉದ್ದೇಶ ಹೃದಯ ಕಮಲವಿರುವ ಕೇಂದ್ರವನ್ನು ತೆರೆದಿರಿಸುವುದಾಗಿದೆ, ದೈವೀ ಮಾತೆಯ ಸಾನ್ನಿಧ್ಯದ ಭಾವನೆ ತಂದುಕೊಳ್ಳುವುದಾಗಿದೆ ಮತ್ತು ಮನುಷ್ಯ ತನ್ನ ಆತ್ಮದ ಇಲ್ಲವೆ ಚೈತ್ಯ ಸತ್ತೆಯ ಅರಿವು ಪಡೆಯುವುದಾಗಿದೆ. ಶಿರದಲ್ಲಿ ಏಕಾಗ್ರತೆ ಸಾಧಿಸುವುದರ ಉದ್ದೇಶ ದೈವೀ ಪ್ರಜ್ಞೆಯತ್ತ ಮೇಲ್ಗಡೆ ಸಾಗಿ ಹೋಗುವುದಾಗಿದೆ ಮತ್ತು ಶ್ರೀಮಾತೆಯವರ ಪ್ರಕಾಶ ಇಲ್ಲವೆ ಶಕ್ತಿಯನ್ನು ಇಲ್ಲವೆ ಆನಂದವನ್ನು ಎಲ್ಲ ಕೇಂದ್ರಗಳಲ್ಲಿ ಕೆಳಗಿಳಿಸಿ ತರುವುದಾಗಿದೆ.

**(SABCL, 23/47)** **– ಶ್ರೀ ಅರವಿಂದರು**

*

**ಪ್ರಣವ ಜಪ**

ಪ್ರಣವ[1] ಜಪಕ್ಕೆ ಅದರದೇ ಒಂದು ಶಕ್ತಿಯಿದೆ ಎಂದು ಭಾವಿಸಲಾಗಿದೆ, ಆದಾಗ್ಯೂ ಅದರ ಅರ್ಥದ ಮೇಲೆ ಧ್ಯಾನ ಕೈಕೊಳ್ಳದೆ ಆ ಶಕ್ತಿ ಪೂರ್ತಿಯಾಗಿ ಕಾರ್ಯ ಮಾಡಲಾಗುವುದಿಲ್ಲ. ಆದರೆ ನನ್ನ ಅನುಭವದ ಪ್ರಕಾರ ಈ ವಿಷಯಗಳನ್ನು ಕುರಿತು ಬದಲಾಗದೆ ಇರುವ ಯಾವ ನಿಯಮವೂ ಇಲ್ಲ ಮತ್ತು ಹೆಚ್ಚಿನದು ಸಾಧಕನ ಪ್ರಜ್ಞೆಯ ಮೇಲೆ ಇಲ್ಲವೆ ಅವನ ಪ್ರತಿಸ್ಪಂದನದ ಮೇಲೆ ಅವಲಂಬಿಸಿರುತ್ತದೆ. ಕೆಲವರ ಮೇಲೆ ಅದು ಯಾವ ಪರಿಣಾಮವನ್ನೂ ಬೀರುವುದಿಲ್ಲ. – ಇನ್ನಿತರರು ಪರಿಣಾಮ ಕಂಡುಕೊಳ್ಳಬೇಕಾದರೆ ಆ ಮಂತ್ರ ಕುರಿತು ಧ್ಯಾನ ಮಾಡಬೇಕಾದ ಆವಶ್ಯಕತೆ ಇರುತ್ತದೆ.

**(SABCL, 23/748)**

*

---

1 ಪ್ರಣವ ಜಪ: ರಹಸ್ಯಾರ್ಥಕ ಉಚ್ಚಾರಾಂಶ 'ಓಂ'ದ ಜಪ.

ಉಸಿರಾಟದ ನಿಯಂತ್ರಣದೊಂದಿಗೆ ಜಪ ಮಾಡುವುದಕ್ಕೆ ನಾನು ಉತ್ತೇಜನ ನೀಡಲಿಲ್ಲ, ಏಕೆಂದರೆ ಅದು ಪ್ರಾಣಾಯಾಮ ಮಾಡುವುದಾಗುತ್ತಿತ್ತು. ಪ್ರಾಣಾಯಾಮ ಬಹಳ ಸಾಮರ್ಥ್ಯಪೂರ್ಣವಾದ ವಿಷಯ, ಆದರೆ ಅದನ್ನು ಅಸ್ತವ್ಯಸ್ತ ರೀತಿಯಲ್ಲಿ ಕೈಕೊಂಡರೆ ಅಡೆತಡೆಗಳು ಮೇಲೆದ್ದು ಬರುವಂತಾಗಬಹುದು. ಉತ್ಕಟ ಸ್ಥಿತಿಯಲ್ಲಿ (extreme cases) ದೇಹ ಅನಾರೋಗ್ಯಕ್ಕೆ ಕೂಡ ಈಡಾಗಬಹುದು.

**(SABCL, 23/747)**

*

**ಗೀತೆಯ ಶ್ಲೋಕಗಳನ್ನು ಕುರಿತು ಜಪ**

ಗೀತೆಯಲ್ಲಿಯ ಶ್ಲೋಕಗಳನ್ನು ಜಪಕ್ಕಾಗಿ ಉಪಯೋಗಿಸಬಹುದು, ಹಾಗೆ ಉಪಯೋಗಿಸುವುದರ ಉದ್ದೇಶ ಆ ಶ್ಲೋಕಗಳು ಒಳಗೊಂಡ ದೈವೀ ಸತ್ಯವನ್ನು ಸಿದ್ಧಿಸಿಕೊಳ್ಳುವುದಾಗಿರಬೇಕು. 'ಕ್ಷ' ನ ತಂದೆ, ಆ ಉದ್ದೇಶಕ್ಕಾಗಿ, ಬೋಧನೆಯ ಹೃದಯವಿರುವ ಪ್ರಧಾನ ಶ್ಲೋಕಗಳನ್ನು ಕೈಗೆತ್ತಿಕೊಂಡಿದ್ದರೆ ಆಗ ಅದು ಸರಿ–ಯಾದದ್ದಾಗಿರುತ್ತದೆ. ಶ್ಲೋಕಗಳನ್ನು ಆಯ್ದುಕೊಳ್ಳುವುದರ ಮೇಲೆ ಪ್ರತಿಯೊಂದೂ ಅವಲಂಭಿಸಿರುತ್ತದೆ. ಗೀತೆಯ ಸುಸಂಬದ್ಧವಾದ ಸಾರಾಂಶವನ್ನು, ಕೆಲವೊಂದು ಶ್ಲೋಕಗಳನ್ನು ಒಟ್ಟಿಗಿರಿಸುವುದರ ಮೂಲಕ, ಒಟ್ಟಿಗೆ ಕಂಡುಕೊಳ್ಳಲಾಗುವುದಿಲ್ಲ, ಆದರೆ ಅದು ಪ್ರಧಾನವಾದ ಸತ್ಯಗಳನ್ನು ಒಟ್ಟಿಗಿರಿಸುವ ಈ ಬಗೆಯ ಕಾರ್ಯದಲ್ಲಿ ಅವಶ್ಯವಾಗಿರುವುದಿಲ್ಲ, ಅದನ್ನು ಬೌದ್ಧಿಕವಾಗಿ ಪ್ರಸ್ತುತಪಡಿಸುವುದಕ್ಕೆ ಉಪಯೋಗಿಸಬಾರದು, ಆದರೆ ಜಪದ ಉದ್ದೇಶವನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಉಪಯೋಗಿಸಬೇಕು. ನಾನು ಆ ಪುಸ್ತಕವನ್ನು ಆದ್ಯಂತವಾಗಿ ಓದಿಲ್ಲ, ಹಾಗಾಗಿ ಅದು ಎಷ್ಟರ ಮಟ್ಟಿಗೆ ಆ ಉದ್ದೇಶವನ್ನು ಈಡೇರಿಸುತ್ತದೆ ಎಂಬುದು ನನಗೆ ತಿಳಿದಿಲ್ಲ.

**(SABCL, 24/748)**

*

**ಶ್ರೀಕೃಷ್ಣನ ನಾಮದ ಜಪ**

**ಪ್ರಶ್ನೆ :** *ಶ್ರೀ ಕೃಷ್ಣನ ನಾಮ ಜಪ ಮಾಡುವುದರಲ್ಲಿ ನಾನು ಯಾವ ಹಾನಿಯನ್ನು ಕಂಡುಕೊಳ್ಳುತ್ತಿಲ್ಲ. ಅವನ ಸತ್ತೆಯೇ ದೈವೀ ಪ್ರಭು ಶ್ರೀ ಅರವಿಂದರ ರೂಪ ತಾಳಿದೆ, ಮತ್ತು ಅವನ ಪರಾಶಕ್ತಿಯೇ ಶ್ರೀಮಾತೆಯವರ ರೂಪ ತಾಳಿದೆ.*



**ಶ್ರೀ ಅ :** ಅದರಲ್ಲಿ ಯಾವ ಹಾನಿಯೂ ಇಲ್ಲ. ಅದು ಈ ಯೋಗದೊಂದಿಗೆ ಅಸಂಬದ್ಧವಾಗಿಲ್ಲ, ಅಸಮಂಜಸವಾಗಿಲ್ಲ.

**(CWSA, 35/827)**

*

**ಜಪದ ಸಾಮರ್ಥ್ಯ**

ಮಂತ್ರ ಜಪ ಮೇಲ್ಗಡೆಗಿರುವ ದೈವೀ ಸಾಮರ್ಥ್ಯಕ್ಕೆ ಪ್ರಜ್ಞೆಯನ್ನು ತೆರೆದಿರಿಸುತ್ತದೆ. ಭೌತಿಕ ಪ್ರಜ್ಞೆಯನ್ನು ಮಂತ್ರ ಬದಲು ಮಾಡಬಹುದೆಂಬುದರಲ್ಲಿ ನನ್ನ ನಂಬಿಕೆ ಇಲ್ಲ. ಮಂತ್ರ ಜಪ ಪರಿಣಾಮಕಾರಿಯಾದಾಗ ಅದು ಪ್ರಜ್ಞೆಯನ್ನು ತೆರೆದಿರಿಸುತ್ತದೆ ಮತ್ತು ಅದರಲ್ಲಿ ಮಂತ್ರ ಪ್ರತಿನಿಧಿಸುವ ಸಾಮರ್ಥ್ಯವನ್ನು ಒಳಗೆ ತರುತ್ತದೆ.

*

ಸರಿಯಾದ ರೀತಿಯಲ್ಲಿ ಕೈಕೊಂಡ ಮಂತ್ರ ಜಪ ಮೇಲ್ಗಡೆಗಿರುವ ಜ್ಞಾನ, ಪ್ರಕಾಶ ಇತ್ಯಾದಿಗಳಿಗೆ ತೆರೆದುಕೊಳ್ಳುವುದಕ್ಕೆ ಒಂದು ಸಾಧನವಾಗುತ್ತದೆ, ಅದಕ್ಕೆ ತೆರೆದುಕೊಂಡ ನಂತರ ಮಂತ್ರ ಜಪ ನಿಂತುಹೋಗುತ್ತದೆ.

*

ನೀನು ಮಂತ್ರ ಜಪದ ಸಹಾಯದಿಂದ ಆಕ್ರಮಣವನ್ನು ತೊಡೆದು ಹಾಕಲು ಶಕ್ತನಾದೆ ಎಂಬ ವಾರ್ತೆ ಬಹಳ ಒಳ್ಳೆಯದಾದದ್ದು. ಇದು ಮತ್ತು ಗತಕಾಲದ ಅನುಭವ ತೋರಿಸಿಕೊಡುವುದೇನೆಂದರೆ ಜಪದೊಂದಿಗಿದ್ದ ಹಳೆಯ ಶುಷ್ಕ ಹಾಗೂ ದುಃಖದಾಯಕ ಒಡನಾಟದ ಮೇಲೆ ಜಯ ಸಾಧಿಸಿದಾಗ ಸರಿಯಾದ ಪ್ರಜ್ಞೆಯನ್ನು ಸೃಷ್ಟಿಸುವ ಅದರ ಸ್ವಾಭಾವಿಕ ಕಾರ್ಯ ವಿಧಾನವನ್ನು ಕೈಕೊಳ್ಳುತ್ತದೆ ಎಂಬುದಾಗಿದೆ – ಏಕೆಂದರೆ ಅದನ್ನೇ ಕೈಗೂಡಿಸುವಂತೆ ಮಾಡುವ ಉದ್ದೇಶವನ್ನು ಜಪ ಹೊಂದಿದೆ. ಅದು ಮೊದಲಿಗೆ ಪ್ರಜ್ಞೆಯ ಕಂಪನಗಳನ್ನು ಬದಲು ಮಾಡುತ್ತದೆ, ಅದರಲ್ಲಿ ಸರಿಯಾದ ಸ್ಥಿತಿ ಮತ್ತು ಸರಿಯಾದ ಸ್ಪಂದನಗಳನ್ನು ಸೃಷ್ಟಿ ಮಾಡುತ್ತದೆ ಮತ್ತು ನಂತರ ದೇವತೆಯ ಸಾಮರ್ಥ್ಯವನ್ನು ಇಲ್ಲವೆ ಸಾನ್ನಿಧ್ಯವನ್ನು ಒಳಗೆ ತರುತ್ತದೆ. ಹಿಂದೆ ಹಲವಾರು ಸಲ ನೀನು ಬರೆದು ತಿಳಿಸಿದ್ದು ಹೀಗಿದೆ: ಜಪ ಕೈಕೊಂಡುದುದರಿಂದ ನೀನು ಹಳೆಯ ಪ್ರಚೋದನೆಗಳನ್ನು ತೊಡೆದು ಹಾಕಲು

ಶಕ್ತನಾಗಿದ್ದಿ, ಸ್ಥಿರತೆಯನ್ನು ಮತ್ತು ಪ್ರಜ್ಞೆಯ ಸರಿಯಾದ ಹೊರಳುವಿಕೆಯನ್ನು ಮರಳಿ ಪಡೆಯಲು ಶಕ್ತನಾಗಿದ್ದಿ ಮತ್ತು ಈಗ ಆ ಜಪ ವೇದನೆಯ ಆಕ್ರಮಣವನ್ನು ಮತ್ತು ನಿರಾಶೆಯನ್ನು ತೊಡೆದು ಹಾಕಲು ಸಹಾಯ ಮಾಡಿದೆ ಎಂದು ಹೇಳಿರುವಿ. ಪ್ರಚೋದನೆಯ ಹಾಗೆ ಈ ಕೊನೆಯದೂ ಕೂಡ ತನ್ನ ಬಲವನ್ನು ಕಳೆದುಕೊಳ್ಳಲಿ ಮತ್ತು ಸ್ಥಿರತೆ ಹಾಗೂ ಪ್ರಶಾಂತತೆ ಇವು ಇಡೀ ಸ್ವಭಾವದಲ್ಲಿ ಸ್ಥಾಪಿತಗೊಳ್ಳುವುದನ್ನು ಪ್ರಾರಂಭಿಸುತ್ತವೆ ಎಂದು ಆಶಿಸೋಣ.

**(CWSA, 35/827–29)** **– ಶ್ರೀ ಅರವಿಂದರು**

*

**ಯಾಂತ್ರಿಕ ಜಪವೂ ಕೂಡ ಅವಚೇತನದ ಮೇಲೆ ಪರಿಣಾಮ ಬೀರುತ್ತದೆ**

**ಪ್ರಶ್ನೆ :** *ಸಮಗ್ರ ಸಿದ್ಧಿಯನ್ನು ಬಯಸುವಂತಹ ನಮಗೆ ಈ ಎಲ್ಲ ಮಂತ್ರಗಳು ಮತ್ತು ಈ ದೈನಂದಿನ ಜಪ ಇವೆಲ್ಲ ನಿಜವಾಗಿ ಸಹಾಯಕವಾಗಿವೆಯೆ ಇಲ್ಲವೆ ಅವು ಕೂಡ ನಮ್ಮನ್ನು ಒಳಗೆ ಮುಚ್ಚಿ ಹಾಕುವವೆ?*

**ಶ್ರೀಮಾತೆ :** ಅದು ಶಿಸ್ತನ್ನು ಒದಗಿಸುತ್ತದೆ. ಅದು ಬಹುಮಟ್ಟಿಗೆ ಅವಚೇತನಕ್ಕೆ ಸಂಬಂಧಿಸಿದ ಶಿಸ್ತು, ಯೋಚನೆಗಾಗಿ ಇರುವುದಕ್ಕಿಂತ ಚಾರಿತ್ರ್ಯವನ್ನು ಕುರಿತಾದ ಶಿಸ್ತು.

ಅದು ಬಹುಮಟ್ಟಿಗೆ ಶಾರೀರಿಕ ಶಿಸ್ತು. ಅಲ್ಲದೆ ಅವಚೇತನ, ಅಚೇತನ ಮತ್ತು ಭೌತದ್ರವ್ಯ, ದೇಹದ ಜೀವಕೋಶಗಳು ಇವುಗಳನ್ನು ಸಂಘಟಿಸುವ ಪರಿಣಾಮ–ವನ್ನುಂಟು ಮಾಡುತ್ತದೆ ಎಂಬುದನ್ನು ನಾನು ನೋಡಿದ್ದೇನೆ. – ಅದಕ್ಕೆ ಸಮಯ ಬೇಕಾಗುತ್ತದೆ, ಆದರೆ ಪಟ್ಟು ಹಿಡಿದು ಪುನರುಚ್ಚರಿಸುವುದರಿಂದ ದೀರ್ಘಕಾಲದ ನಂತರ ಅದರ ಪರಿಣಾಮ ಕಂಡುಕೊಳ್ಳಬಹುದು. ಉದಾಹರಣೆಗೆ ಪಿಯಾನೋ ಬಾರಿಸುವುದನ್ನು ದಿನನಿತ್ಯ ಕೈಕೊಳ್ಳುವುದರಿಂದ ಆಗುವಂತಹ ಪರಿಣಾಮ. ನೀವು ಯಾಂತ್ರಿಕವಾಗಿ ಅದನ್ನು ಮತ್ತೆ ಮತ್ತೆ ಕೈಕೊಳ್ಳುತ್ತಲೇ ಇರುತ್ತೀರಿ, ಕೊನೆಗೆ ನಿಮ್ಮ ಕೈಗಳು ಪ್ರಜ್ಞೆಯಿಂದ ತುಂಬಿಕೊಂಡಿರುತ್ತವೆ – ಅದು ದೇಹವನ್ನು ಪ್ರಜ್ಞೆಯಿಂದ ತುಂಬುತ್ತದೆ.

**(ಅನುಯಾಯಿಯೊಂದಿಗೆ ಮಾತುಕತೆ, ಸಪ್ಟಂಬರ 20, 1960)**

*



**ಪ್ರಶ್ನೆ :** *ದೊಡ್ಡ ಧ್ವನಿಯಿಂದ ಕೀರ್ತನೆ ಮಾಡುವುದು ಹೇಗೆ ಸಹಾಯಕವಾಗುತ್ತದೆ?*

**ಶ್ರೀಮಾತೆ :** ನಿಮಗೆ ಯಾವ ಬಗೆಯ ಸಹಾಯ ಬೇಕಾಗಿದೆ ಎಂಬುದರ ಮೇಲೆ ಅದು ಅವಲಂಬಿಸಿರುತ್ತದೆ. ನೀವು ಭಾವನಾತ್ಮಕ ದಿವ್ಯಾನಂದದಲ್ಲಿ ಪ್ರವೇಶಿಸಲು ಬಯಸಿದರೆ ದೊಡ್ಡ ದನಿ ತೆಗೆಯುವುದು ಮತ್ತು ನೃತ್ಯ ಮಾಡುವುದು ಅದನ್ನು ಸಿದ್ಧಿಸಿಕೊಳ್ಳಲು ಸಹಾಯಕವಾಗುವುದು. ಮನುಷ್ಯ ಯೋಗ್ಯನಾಗಿದ್ದರೆ ಇವುಗಳ ಮೂಲಕ ಆಧ್ಯಾತ್ಮಿಕ ಅನುಭವಗಳನ್ನು ಸಿದ್ಧಿಸಿಕೊಳ್ಳಬಹುದು. ಆದರೆ, ಸರ್ವ ಸಾಧಾರಣವಾಗಿ ಇವು ಪ್ರಾಣಿಕ ಚಲನೆಗಳು ಮತ್ತು ಹೀಗೆ ಎರಡು ತುದಿಗಳನ್ನು ಹೊಂದಿರುತ್ತವೆ – ಬಹಳಷ್ಟು ಸಂದರ್ಭಗಳಲ್ಲಿ ಕೆಳಮುಖವಾದ ಪ್ರವೃತ್ತಿ ಇರುತ್ತದೆ.

**(ಅನುಯಾಯಿಯೊಂದಿಗೆ ಮಾತುಕತೆ)**

*

**ಶ್ರೀ ಅರವಿಂದರ ಗಾಯತ್ರಿ**

ತತ್ ಸವಿತುರ್ವರಮ್ ರೂಪಮ್ ಜ್ಯೋತಿಃ ಪರಸ್ಯ ಧೀಮಹಿ, ಯನ್ನ ಸತ್ಯೇನ ದೀಪಯೇತ್.


Let us mediate on the most auspicious (best) form of Savitri, on the light of the Supreme which shall illumine us with the truth.

ಪರಮೋಚ್ಚನ ದೈವೀ ಪ್ರಕಾಶವಾದ ಸಾವಿತ್ರಿಯ ಅತ್ಯಂತ ಮಂಗಳಕರ ರೂಪವನ್ನು ಕುರಿತು ಧ್ಯಾನ ಮಾಡೋಣ, ಅದು ನಮ್ಮನ್ನು ದೈವೀ ಸತ್ಯದಿಂದ ಬೆಳಗುವುದು.

ಋಗ್ವೇದದಲ್ಲಿರುವ ಸಾಂಪ್ರದಾಯಿಕ ಗಾಯತ್ರಿ ಮಂತ್ರಕ್ಕೆ ಹೊಸ ರೂಪಕೊಟ್ಟು ಬರೆದ ಇದು ಶ್ರೀ ಅರವಿಂದರ ಗಾಯತ್ರಿ ಮಂತ್ರ. ಅದು ಅತಿ ಮನಸ್ಸಿನ ಅಥವಾ ದೈವೀ ಸತ್ಯಪ್ರಜ್ಞೆ (Truth Conciousness)ಯ ಹೊಸ ಸಿದ್ಧಿಯನ್ನು ಅಭಿವ್ಯಕ್ತ–ಗೊಳಿಸಲು ಇದೆ.

**(White Roses, p. 232)** **– ಶ್ರೀಮಾತೆ**

*



ಓಂ ಅಸತೋ ಮಾ ಸದ್ಗಮಯ। ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯ॥ ಓಂ ಶಾಂತಿಃ, ಶಾಂತಿಃ, ಶಾಂತಿಃ॥

## ಮಂತ್ರ ಹಾಗೂ ಸಮಗ್ರ ಯೋಗ

### ಸಮಗ್ರ ಯೋಗದಲ್ಲಿ ಸ್ಥಿರಪಡಿಸಿದ ವಿಧಾನಗಳಿಲ್ಲ

ಈ ಯೋಗದ ಸಾಧನೆ ಯಾವುದೇ ಮಾನಸಿಕ ಮಟ್ಟದ ಬೋಧನೆ ಇಲ್ಲವೆ ಧ್ಯಾನದ ವಿಧಿಸಿದ ರೂಪಗಳು, ಮಂತ್ರ ಇಲ್ಲವೆ ಅಂತಹ ವಿಷಯಗಳು ಇಂತಹವುಗಳ ಮೂಲಕ ಮುಂದುವರಿಯುವುದಿಲ್ಲ, ಆದರೆ ಅಭೀಪ್ಸೆ, ಅಂತರಂಗದಲ್ಲಿ ಇಲ್ಲವೆ ಮೇಲ್ಗಡೆಗೆ ಸ್ವ–ಏಕಾಗ್ರತೆ, ದೈವೀ ಪ್ರಭಾವಕ್ಕೆ ತೆರೆದಿರಿಸಿಕೊಳ್ಳುವಿಕೆ, ನಮ್ಮ ಮೇಲ್ಗಡೆಗಿರುವ ದೈವೀ ಸಾಮರ್ಥ್ಯ ಹಾಗೂ ಅದರ ಕಾರ್ಯಗತಿ ಇಂತಹವುಗಳ ಮೂಲಕ ಮುಂದುವರಿಯುತ್ತದೆ. ನಂಬಿಕೆ, ಅಭೀಪ್ಸೆ ಮತ್ತು ಶರಣಾಗತಿ ಇವುಗಳ ಮೂಲಕ ಮಾತ್ರ ಸ್ವ–ತೆರೆದಿರಿಸಿಕೊಳ್ಳುವಿಕೆ ಬರಬಲ್ಲದು.

**(SABCL, 23/505)**

*

### ಸಮಗ್ರ ಯೋಗದಲ್ಲಿ ಸ್ಥಿರವಾದದ್ದೆಂದು ಪರಿಗಣಿಸಲಾದ ಯಾವ ಮಂತ್ರವೂ ಇಲ್ಲ

ಈ ಯೋಗದಲ್ಲಿ ಸ್ಥಿರಗೊಳಿಸಲಾದ ಯಾವ ಮಂತ್ರವೂ ಇಲ್ಲ, ಹಾಗಿದ್ದಾಗ್ಯೂ ಸಾಧಕರು ತಮಗೆ ಸಹಾಯಕವಾಗುತ್ತದೆಂದು ಕಂಡುಕೊಂಡ ಒಂದು ಮಂತ್ರವನ್ನು ಅದು ಸಹಾಯಕವಾಗುವವರೆಗೆ ಉಪಯೋಗಿಸಬಹುದು. ಅದಕ್ಕೂ ಹೆಚ್ಚಾಗಿ



ಅಭೀಪ್ಸೆ, ಮನಸ್ಸಿನ, ಹೃದಯದ ಸಂಕಲ್ಪ ಹಾಗೂ ಇಡೀ ಸತ್ತೆ ಇವೆಲ್ಲವುಗಳಲ್ಲಿ ಏಕಾಗ್ರತೆ ಕೈಕೊಳ್ಳುವುದರ ಮೇಲೆ ಒತ್ತು ನೀಡಲಾಗುತ್ತದೆ. ಇದಕ್ಕೆ ಮಂತ್ರ ಸಹಾಯಕವಾಗುವಂತಿದ್ದರೆ ಮನುಷ್ಯ ಅದನ್ನು ಉಪಯೋಗಿಸುತ್ತಾನೆ. 'ಓಂ' ಮಂತ್ರವನ್ನು ಸರಿಯಾಗಿ ಉಪಯೋಗಿಸಿದರೆ (ಯಾಂತ್ರಿಕವಾಗಿ ಅಲ್ಲ) (ವಿಶ್ವವ್ಯಾಪಿ ಪ್ರಜ್ಞೆಯತ್ತ) ಮೇಲ್ಗಡೆ ಹಾಗೂ ಬಾಹ್ಯದಲ್ಲಿ ಹಾಗೆಯೇ ಅವರೋಹಣದಲ್ಲಿ ಸರಿಯಾಗಿ ಉಪಯುಕ್ತವಾಗಬಹುದು.

**(SABCL, 23/745)**

*

### ಮಂತ್ರದ ರೂಪದಲ್ಲಿ ಶ್ರೀಮಾತೆಯವರ ಹೆಸರು

ಒಂದು ನಿಯಮ ಎನ್ನುವ ರೀತಿಯಲ್ಲಿ, ಈ ಸಾಧನೆಯಲ್ಲಿ, ಉಪಯೋಗಿಸುವ ಮಂತ್ರ ಶ್ರೀಮಾತೆಯವರ ಹೆಸರು ಇಲ್ಲವೆ ನನ್ನ ಹಾಗೂ ಶ್ರೀಮಾತೆಯವರ ಹೆಸರುಗಳನ್ನು ಕೂಡಿಕೊಂಡದ್ದಾಗಿದೆ. ಹೃದಯದಲ್ಲಿ ಏಕಾಗ್ರತೆ, ಶಿರದಲ್ಲಿ ಏಕಾಗ್ರತೆ ಇವೆರಡನ್ನೂ ಉಪಯೋಗಿಸಬಹುದು – ಪ್ರತಿಯೊಂದಕ್ಕೂ ಅದರದೇ ಪರಿಣಾಮವಿದೆ. ಮೊದಲನೆಯದು ಚೈತ್ಯ ಸತ್ತೆಯನ್ನು ತೆರೆದಿರಿಸುತ್ತದೆ, ಭಕ್ತಿ, ಪ್ರೇಮ ಮತ್ತು ಶ್ರೀಮಾತೆಯವರೊಂದಿಗೆ ಏಕತೆ ಇವುಗಳನ್ನು ತರುತ್ತದೆ, ಹೃದಯದಲ್ಲಿ ಅವರ ಸಾನಿಧ್ಯವಿರುತ್ತದೆ, ಸ್ವಭಾವದಲ್ಲಿ ಅವರ ದೈವೀ ಶಕ್ತಿಯ ಕ್ರಿಯೆ ಇರುತ್ತದೆ. ಇನ್ನೊಂದು ಮನಸ್ಸನ್ನು ಆತ್ಮ ಸಾಕ್ಷಾತ್ಕಾರದತ್ತ (Self-realisation), ಮನಸ್ಸಿನ ಮೇಲ್ಗಡೆಗಿರುವ ಪ್ರಜ್ಞೆಯತ್ತ, ದೇಹದಿಂದ ಬಾಹ್ಯದಲ್ಲಿ ಪ್ರಜ್ಞೆ ಆರೋಹಣ ಮಾಡುವತ್ತ ಮತ್ತು ಉಚ್ಚತರ ಪ್ರಜ್ಞೆ ದೇಹದಲ್ಲಿ ಅವರೋಹಣ ಮಾಡುವತ್ತ ತೆರೆದಿರಿಸುತ್ತದೆ.

**(SABCL, 24/746)**

*

### ಸಮಗ್ರ ಯೋಗದಲ್ಲಿ ಮಂತ್ರ ದೀಕ್ಷೆ ಕೊಡುವುದೆಂಬುದಿಲ್ಲ

ನಾವು ಯಾರಿಗೂ ಮಂತ್ರ ದೀಕ್ಷೆ ಕೊಡುವುದಿಲ್ಲ. ಧ್ಯಾನದಲ್ಲಿ ಏನನ್ನೋ ಪುನರುಚ್ಚರಿಸುತ್ತಿರುವವರು ಶ್ರೀ ಮಾತೆಯವರಿಗೆ ಕರೆ ಕೊಡುತ್ತಾರೆ.

**(June, 27/1936)**

*

**ಶ್ರೀಮಾತೆಯವರ ಹೆಸರಿನ ಹೊರತಾಗಿ ಬೇರೆ ಮಂತ್ರವಿಲ್ಲ**

ಭಾರತದಲ್ಲಿ ಗುರು ಶಿಷ್ಯನೊಬ್ಬನನ್ನು ಸ್ವೀಕರಿಸಿದಾಗ ಅವನಿಗೆ ಮಂತ್ರ ದೀಕ್ಷೆ ನೀಡುತ್ತಾನೆ, ಮತ್ತು ಆ ಮಂತ್ರವನ್ನು ಮುಂದುವರಿಸಿಕೊಂಡು ಹೋಗೆಂದು ಹೇಳುತ್ತಾನೆ. ಶ್ರೀಮಾತೆಯವರ ಹೆಸರಿನ ಹೊರತಾಗಿ ನಮ್ಮಲ್ಲಿ ಬೇರೆ ಮಂತ್ರವೆಂಬುದಿಲ್ಲ. ಆದರೆ, ಸಾಮಾನ್ಯವಾಗಿ, ಶಿಷ್ಯರಿಗೆ ಕಾರ್ಯ ವಹಿಸಿಕೊಡುತ್ತೇವೆ, ಅಭೀಪ್ಸೆ ಪಡುವುದನ್ನು ನಿರಾಕರಣೆ ಮಾಡುವುದನ್ನು ಮತ್ತು ಶ್ರೀಮಾತೆಯವರಿಗೆ ತೆರೆದಿರಿಸಿ ಇಟ್ಟುಕೊಳ್ಳುವುದನ್ನು ಕುರಿತು ಹೇಳುತ್ತೇವೆ.

**(CWSA, 32/139)**

*

ಇಲ್ಲಿಂದ ಮಂತ್ರವೊಂದನ್ನು ಸ್ವೀಕರಿಸಬೇಕು ಮತ್ತು ಅದಕ್ಕಾಗಿ ಇಲ್ಲಿಗೆ ಬರಬೇಕು ಎಂಬ ನಿನ್ನ ಮಿತ್ರನ ವಿಚಾರ, ಒಟ್ಟಿನಲ್ಲಿ, ತಪ್ಪಾದದ್ದು. ಈ ಯೋಗದಲ್ಲಿ ಮಂತ್ರದೀಕ್ಷೆ ಎಂಬುವುದಿಲ್ಲ. ಶ್ರೀಮಾತೆಯವರಿಗೆ ಪ್ರಜ್ಞೆಯನ್ನು ತೆರೆದಿರಿಸುವುದು ನಿಜವಾದ ಮಂತ್ರದೀಕ್ಷೆಯಾಗಿರುತ್ತದೆ ಮತ್ತು ಅದು ಅಂತರಂಗದಲ್ಲಿ ಅಭೀಪ್ಸೆ ಪಡುವುದರಿಂದ, ಮನಸ್ಸಿನಲ್ಲಿ ಹಾಗೂ ಪ್ರಾಣಿಕದಲ್ಲಿ ತಳಮಳವನ್ನು ನಿರಾಕರಿಸುವು–ದರಿಂದ ಬರುತ್ತದೆ. ಅದನ್ನು ದೊರಕಿಸಲು ಇಲ್ಲಿಗೆ ಬರುವುದು ಅದಕ್ಕಾಗಿರುವ ರೀತಿಯಲ್ಲ. ಹಲವಾರು ಜನರು ಇಲ್ಲಿಗೆ ಬರುತ್ತಾರೆ ಮತ್ತು ಅವರು ಏನನ್ನೂ ದೊರಕಿಸುವುದಿಲ್ಲ ಇಲ್ಲವೆ ಅಂತಹರ ತೊಂದರೆಗಳು ಹೆಚ್ಚಿಕೊಳ್ಳುತ್ತವೆ ಇಲ್ಲವೆ ಅವರು ಯೋಗ ಮಾರ್ಗದಲ್ಲಿ ಪತನಗೊಳ್ಳುತ್ತಾರೆ. ಮನುಷ್ಯ ತಯಾರಿ ಮಾಡಿ–ಕೊಳ್ಳುವುದಕ್ಕಿಂತ ಮೊದಲು ಇಲ್ಲಿಗೆ ಬರುವುದು ಪ್ರಯೋಜನಕಾರಿಯಾಗುವುದಿಲ್ಲ, ಅವನು ಸಿದ್ಧನಾಗಿಲ್ಲವೆಂದು ಅದು ತೋರಿಸುತ್ತದೆ. ಬಲತ್ತರವಾದ ಆಸೆ ತಯಾರಿ ಮಾಡಿಕೊಂಡಿದ್ದಕ್ಕೆ ಪ್ರಮಾಣವಲ್ಲ. ಮನುಷ್ಯ ಆಂತರಿಕವಾಗಿ ತಯಾರಿ ಮಾಡಿಕೊಂಡಾಗ ಇಲ್ಲಿಗೆ ಬರುವುದರಲ್ಲಿ ಯಾವ ತೊಂದರೆಯೂ ಇರುವುದಿಲ್ಲ.

**(CWSA, 32/333)**

*

**ಶ್ರೀಮಾತೆಯವರಿಗೆ ಕರೆ ಕೊಡಬೇಕು ಹಾಗೂ ಅವರನ್ನು ಕುರಿತು ಹೃದಯದಲ್ಲಿ ಧ್ಯಾನ ಮಾಡಬೇಕು**

ನಿನ್ನ ಪತ್ರಕ್ಕೆ ಉತ್ತರವೆಂದು ಶ್ರೀ ಅರವಿಂದರು ಹೇಳಿದ್ದು ಇದು: ನಿನ್ನ ಹೃದಯದಲ್ಲಿ ಶ್ರೀಮಾತೆಯವರನ್ನು ಕುರಿತು ಧ್ಯಾನ ಮಾಡು ಮತ್ತು ಅವರಿಗೆ ಕರೆ ಕೊಡು – ಅವರನ್ನು ನೆನಪಿಸಿಕೋ, ಅವರಿಗೆ ನಿನ್ನ ಎಲ್ಲ ಜೀವನವನ್ನು, ಯೋಚನೆಗಳನ್ನು ಹಾಗೂ ಕ್ರಿಯೆಗಳನ್ನು ಅರ್ಪಿಸು. ನಿನಗೆ ಇಷ್ಟವಾದರೆ ಅವರ ಹೆಸರಿನ ಜಪ ಮಾಡಬಹುದು. ನಿನ್ನ ಸತ್ತೆಯನ್ನು ಪರಿಶುದ್ಧಗೊಳಿಸಲು ಮತ್ತು ನಿನ್ನ ಸ್ವಭಾವವನ್ನು ಬದಲಿಸಲು ಅವರಿಗೆ ನೀನು ಕರೆ ಕೊಡಬಹುದು.



ನಿನ್ನ ಮೇಲ್ಗಡೆಗಿರುವ ಅವರ ಸ್ಥಿರತೆ ಮತ್ತು ಶಾಂತಿಗೆ ಮೊದಲು, ನಂತರ ಅವರ ಸಾಮರ್ಥ್ಯ, ಪ್ರಕಾಶ ಹಾಗೂ ಆನಂದ (ಇವೆಲ್ಲ ಅಲ್ಲಿ ಯಾವಾಗಲೂ ಇರುತ್ತವೆ) ಇವುಗಳಿಗೆ ಕೆಳಗಿಳಿದು ಬರಲು ಕರೆಕೊಡಲು ಏಕಾಗ್ರತೆಯಲ್ಲಿ ಉಳಿದುಕೊಳ್ಳಬಹುದು. ಅದು ಯಾವಾಗಲೂ ಶಿರದ ಮೇಲಿರುತ್ತದೆ – ಆದರೆ ಅದು ಮಾನವ ಮನಸ್ಸಿಗೆ ಅತಿಪ್ರಜ್ಞೆಯದಾಗಿರುತ್ತದೆ – ಅಭೀಪ್ಸೆ ಮತ್ತು ಏಕಾಗ್ರತೆಗಳ ಮೂಲಕ ಅದು ಮನಸ್ಸಿನ ಪ್ರಜ್ಞೆಗೆ ನಿಲುಕುವಂತಹದಾಗಬಹುದು ಮತ್ತು ಆಧಾರ ಅದಕ್ಕೆ ತೆರೆದಿಟ್ಟುಕೊಳ್ಳಬಹುದು, ಅದರಿಂದಾಗಿ ಅದು ಅವರೋಹಣ ಮಾಡಿ ಮನಸ್ಸು, ಪ್ರಾಣ ಮತ್ತು ದೇಹ ಇವುಗಳಲ್ಲಿ ಪ್ರವೇಶಿಸಬಹುದು.

**(CWSA, 32/154–55)** **– ಶ್ರೀ ಅರವಿಂದರು**

*

**ದೇಹದ ಸಾಧನಕ್ಕಾಗಿ ಮಂತ್ರ ಅವಶ್ಯವಾಗಿದೆ**

ದೇಹದ ಸಾಧನಕ್ಕಾಗಿ ಮಂತ್ರದ ಆವಶ್ಯಕತೆ ಇದೆ ಎಂಬುದನ್ನು ನಾನು ಪೂರ್ತಿಯಾಗಿ ಅರಿತುಕೊಂಡಿದ್ದೇನೆ. ಶ್ರೀ ಅರವಿಂದರು ಯಾವ ಮಂತ್ರವನ್ನೂ ಕೊಡಲಿಲ್ಲ. ಮನುಷ್ಯ ಎಲ್ಲ ಕಾರ್ಯವನ್ನು ಬಾಹ್ಯ ಸಾಧನೆ(means)ಯ ಮೇಲೆ ಅವಲಂಬಿಸದೆ ಕೈಕೊಳ್ಳಲು ಶಕ್ತನಾಗಬೇಕು ಎಂದು ಅವರು ಹೇಳಿದ್ದರು. ನಾವಿರುವ ಈಗಿನ ಹಂತವನ್ನು ಅವರು ತಲುಪಿದ್ದರೆ, ಕೇವಲ ಮನೋವೈಜ್ಞಾನಿಕವಾದ ವಿಧಾನ ಸಾಕಾಗದು ಮತ್ತು ಜಪ ಅವಶ್ಯವಾಗಿದೆ, ಏಕೆಂದರೆ ಕೇವಲ ಜಪ ದೇಹದ ಮೇಲೆ ನೇರವಾಗಿ ಕಾರ್ಯ ಕೈಕೊಳ್ಳಬಹುದು ಎಂಬುದನ್ನು ನೋಡುತ್ತಿದ್ದರು. ಹಾಗಾಗಿ ಆ ವಿಧಾನವನ್ನು ನಾನು ಏಕಾಕಿಯಾಗಿ ಕಂಡುಕೊಳ್ಳಬೇಕಾಯಿತು. ನನ್ನ ಮಂತ್ರವನ್ನು ನಾನೇ ಕಂಡುಕೊಳ್ಳಬೇಕಾಯಿತು. ಆದರೆ ಈಗ ವಿಷಯಗಳು ತಯಾರಾಗಿವೆ, ಹತ್ತು ವರ್ಷ ತೆಗೆದುಕೊಳ್ಳ–ಬಹುದಾಗಿದ್ದ ಕಾರ್ಯವನ್ನು ಕೆಲವೇ ತಿಂಗಳುಗಳಲ್ಲಿ ಮಾಡಿ ಮುಗಿಸಿದ್ದೇನೆ. ಅದೇ ಇರುವ ತೊಂದರೆ, ಅದಕ್ಕೆ ಸಮಯ ಬೇಕಾಗುತ್ತದೆ.

ನನ್ನ ಮಂತ್ರವನ್ನು ನಾನು ಸತತ ಪುನರುಚ್ಚರಿಸುತ್ತಲೇ ಇರುತ್ತೇನೆ. – ಎಚ್ಚರಿರುವಾಗ, ನಿದ್ರೆಯಲ್ಲಿಯೂ ಕೂಡ, ವಸ್ತ್ರ ಧಾರಣೆ ಮಾಡುವಾಗ, ಊಟ ಮಾಡುವಾಗ, ಕಾರ್ಯ ಕೈಕೊಳ್ಳುತ್ತಿರುವಾಗ, ಇತರರೊಡನೆ ಮಾತನಾಡುತ್ತಿರುವಾಗ ಅದಲ್ಲಿರುತ್ತದೆ, ಎಲ್ಲ ಕಾಲದಲ್ಲಿ, ಹಿನ್ನೆಲೆಯ ಹಿಂದೆ ಹತ್ತಿರದಲ್ಲಿ ಇರುತ್ತದೆ.

ವಾಸ್ತವದಲ್ಲಿ, ಮಂತ್ರವಿದ್ದವರ ಹಾಗೂ ಮಂತ್ರ ಇಲ್ಲದೆ ಇರುವವರ ನಡುವಿರುವ ವ್ಯತ್ಯಾಸವನ್ನು ನೀವು ಕೂಡಲೆ ಕಂಡುಕೊಳ್ಳಬಹುದು. ಮಂತ್ರವನ್ನು ಇರಿಸಿಕೊಳ್ಳದೇ ಇದ್ದವರಲ್ಲಿ, ಧ್ಯಾನ ಕೈಕೊಳ್ಳುತ್ತಿರುವ ಇಲ್ಲವೆ ಏಕಾಗ್ರತೆಯಲ್ಲಿರುವ ಬಲವತ್ತರವಾದ ರೂಢಿ ಇದ್ದಾಗಲೂ ಅವರ ಸುತ್ತ ಏನೋ ಒಂದು ಮಂಜು ಮಂಜಾಗಿ, ಅಸ್ಪಷ್ಟವಾಗಿ ಉಳಿದುಕೊಂಡಿರುತ್ತದೆ. ಅದು ಹಾಗಿರುವಾಗ ಜಪವನ್ನು ಆಚರಿಸುತ್ತಿರುವವರಿಗೆ ಅದು ಒಂದು ಬಗೆಯ ನಿಖರತೆಯನ್ನು, ಒಂದು ಬಗೆಯ ದೃಢತೆಯನ್ನು ಹಾಗೂ ರಕ್ಷಣಾ ಕವಚವನ್ನು ಕೊಡುತ್ತದೆ. ಅವರು ಹುರಿದುಂಬಿಸಿ–ಕೊಂಡವರಾಗುತ್ತಾರೆ.

**(ಅನುಯಾಯಿಯೊಂದಿಗೆ ಮಾತುಕತೆ, ಮೇ 19, 1959)**

*

**ಮಂತ್ರಗಳೊಂದಿಗೆ ಶ್ರೀಮಾತೆಯವರ ಕೆಲವು ಅನುಭವಗಳು**

ನನ್ನ ಬಳಿ ಮಂತ್ರಗಳ ಇಡೀ ಸಂಗ್ರಹವಿದೆ, ಅವು ಸ್ವಯಂಪ್ರೇರಿತವಾಗಿ ಬಂದಿವೆ, ಮಿದುಳಿನಲ್ಲಿ ವಿಚಾರ ಮಾಡುವುದರ ಮೂಲಕವಲ್ಲ. ಅವು ಸ್ವಯಂಪ್ರೇರಣೆಯಿಂದ ಜಿಗಿದೆದ್ದು ಬಂದವು. ವೇದ ಕೂಡ ಹಾಗೆಯೇ ಮೇಲೆ ಜಿಗಿದೆದ್ದು ಬಂದಿದೆ ಎಂದು ಹೇಳಲಾಗಿದೆ.

ಅದು ಎಂದಿನಿಂದ ಪ್ರಾರಂಭವಾಯಿತು ಎಂಬುದನ್ನು ಹೇಳಲಾಗದು. – ಬಹಳ ಕಾಲದ ಹಿಂದೆ, ನಾನಿಲ್ಲಿಗೆ ಬರುವುದಕ್ಕಿಂತ ಮೊದಲೇ ಅದು ಪ್ರಾರಂಭವಾಗಿತ್ತು. ಆದಾಗ್ಯೂ ಕೆಲವು ನಾನಿಲ್ಲಿದ್ದಾಗ ಬಂದವು. ಆದರೆ ನನ್ನ ಪಾಲಿಗೆ ಅವು ಯಾವಾಗಲೂ ಚಿಕ್ಕವಾಗಿದ್ದವು. ಉದಾಹರಣೆಗೆ ಶ್ರೀ ಅರವಿಂದರು ಇಲ್ಲಿ ದೇಹದಲ್ಲಿ ಜೀವಿಸಿದ್ದಾಗ, ಯಾವುದೇ ಕ್ಷಣದಲ್ಲಿ, ಯಾವುದೇ ತೊಂದರೆ ಕಾಣಿಸಿಕೊಂಡಾಗ, ಯಾವುದಕ್ಕಾಗಿಯಾದರೂ ಆ ಮಂತ್ರ "ನನ್ನ ದೈವೀ ಪ್ರಭು" ಎಂದಾಗಿತ್ತು. – ಸರಳವಾಗಿ, ಸ್ವಯಂಪ್ರೇರಣೆಯಿಂದ ಆ ಮಂತ್ರ ಬರುತ್ತಿತ್ತು ಮತ್ತು ತತ್ಕ್ಷಣ ಸಂಪರ್ಕ ಉಂಟಾಗುತ್ತಿತ್ತು.



ನಾನು ಪಾಂಡಿಚೇರಿಗೆ ಬರುವ ಮೊದಲು ಫ್ರೆಂಚ್ ಭಾಷೆಯಲ್ಲಿ ನನ್ನ ಮಂತ್ರವಿತ್ತು. ಅದು 'Dieu de bante' et de miséricorde' (God of Kindness and mercy), ಆದರೆ ಅದರ ಅರ್ಥವೇನು ಎಂಬುದನ್ನು ಸಾಮಾನ್ಯವಾಗಿ ಅರಿತು–ಕೊಳ್ಳಲಾಗಿರುವುದಿಲ್ಲ. – ಅದು ಇಡಿಯಾದ ಕಾರ್ಯಕ್ರಮ, ವಿಶ್ವಂಭರ ಕಾರ್ಯಕ್ರಮ. ನಾನು ಈ ಮಂತ್ರವನ್ನು ಇಪ್ಪತ್ತನೆಯ ಶತಮಾನದ ಪ್ರಾರಂಭದಿಂದ ಉಚ್ಚರಿಸುತ್ತ ಬಂದಿದ್ದೇನೆ. ಅದು ಆರೋಹಣದ ಹಾಗೂ ಸಿದ್ಧಿಸಿಕೊಳ್ಳುವಿಕೆಯ ಮಂತ್ರವಾಗಿತ್ತು. ಸದ್ಯ ಅದೇ ರೀತಿಯಲ್ಲಿ ಬರುತ್ತಿಲ್ಲ, ಅದು ಹೆಚ್ಚಾಗಿ ಒಂದು ನೆನಪಿನ ರೂಪದಲ್ಲಿ ಬರುತ್ತದೆ. ಆದರೆ ಅದು ಉದ್ದೇಶಪೂರ್ವಕವಾಗಿತ್ತು. ನಾನು ಯಾವಾಗಲೂ 'Dieu de bante' et de miséricorde' ಎಂದು ಹೇಳುತ್ತಿದ್ದೆ, ಏಕೆಂದರೆ ಆಗಲೂ ಕೂಡ ಪ್ರತಿಯೊಂದೂ ಭಗವಂತನಾಗಿದೆ ಮತ್ತು ಭಗವಂತ ಎಲ್ಲ ವಿಷಯ–ವಸ್ತುಗಳಲ್ಲಿದ್ದಾನೆ, ಕೇವಲ ನಾವು ಯಾವುದು ಭಗವಂತ ಮತ್ತು ಯಾವುದು ಭಗವಂತ ಅಲ್ಲ ಎಂಬ ಭಿನ್ನತೆಯನ್ನು ಮಾಡುತ್ತೇವೆ ಎಂಬುದನ್ನು ತಿಳಿದಿದ್ದೆ.

ನಾನು ಸತತ 'ಓಂ ನಮೋ ಭಗವತೆ' ಎಂಬ ಸಂಸ್ಕೃತ ಮಂತ್ರವನ್ನು ಕೇಳಿಸಿಕೊಳ್ಳುತ್ತೇನೆ.

ಅದು ನನ್ನ ಸುತ್ತಲೂ ಇದೆ, ಅದು ನನ್ನ ಎಲ್ಲ ಜೀವಕೋಶಗಳನ್ನು ಹಿಡಿದುಕೊಳ್ಳುತ್ತದೆ ಮತ್ತು ಅವು ಒಮ್ಮೆಗೆ ಆರೋಹಣ ಮಾಡುವುದಕ್ಕಾಗಿ ಜಿಗಿದೆದ್ದು ಬರುತ್ತವೆ 'ನಾರಾಯಣ, ನಾರಾಯಣ' ಎಂಬ ನಾರದರ ಮಂತ್ರವೂ ಕೂಡ, ಅದು ನಿಜವಾಗಿ ದೈವೀ ಆಜ್ಞೆ, ಅದರರ್ಥ 'ನಾನು ಬಯಸಿದ ಹಾಗೆ ನೀನು ಕೈಕೊಳ್ಳುವಿ' ಆದರೆ ಅದು ಹೃದಯದಿಂದ ಬರುವುದಿಲ್ಲ.

**(ಅನುಯಾಯಿಯೊಂದಿಗೆ ಮಾತುಕತೆ, ಸಪ್ಟಂಬರ 16, 1958)**

*

**ಓಂ ನಮೋ ಭಗವತೆ**

ಸದ್ಯದ ಕ್ಷಣದಲ್ಲಿ ಎಲ್ಲ ಸೂತ್ರಗಳು ಇಲ್ಲವೆ ಮಂತ್ರಗಳು ಇವುಗಳಲ್ಲಿ ಹೆಚ್ಚು ನೇರವಾಗಿ ಈ ದೇಹದ ಮೇಲೆ ಕಾರ್ಯಕೈಕೊಳ್ಳುತ್ತಿರುವುದು, ಎಲ್ಲ ಜೀವ–ಕೋಶಗಳನ್ನು ಹಿಡಿದಿಟ್ಟುಕೊಳ್ಳುತ್ತಿರುವುದು ಮತ್ತು (ಕಂಪನದ ಚಲನೆಯನ್ನು) ಕೈಕೊಳ್ಳುತ್ತಿರುವುದು 'ಓಂ ನಮೋ ಭಗವತೆ' ಎಂಬ ಸಂಸ್ಕೃತ ಮಂತ್ರ.

ನಾನು ಧ್ಯಾನಕ್ಕಾಗಿ ಕುಳಿತುಕೊಂಡ ಕೂಡಲೆ, ಏಕಾಗ್ರತೆ ಕೈಕೊಳ್ಳಲು ನಿಶ್ಯಬ್ದವಾದ ನಿಮಿಷವೊಂದಿದ್ದಾಗ, ಅದು ಯಾವಾಗಲೂ ಈ ಮಂತ್ರದೊಂದಿಗೆ

ಪ್ರಾರಂಭವಾಗುತ್ತದೆ ಮತ್ತು ದೇಹದಲ್ಲಿ ಅದಕ್ಕೆ ಪ್ರತಿಸ್ಪಂದನವಿರುತ್ತದೆ, ಜೀವಕೋಶಗಳಲ್ಲಿ ಪ್ರತಿಸ್ಪಂದನವಿರುತ್ತದೆ, ಅವು ಕಂಪಿಸಲು ಪ್ರಾರಂಭಿಸುತ್ತವೆ.

(ಶ್ರೀಮಾತೆಯವರು ಸೌರ ನರಮಂಡಲ (solar plexus) ವನ್ನು ತೋರಿಸುತ್ತ) ಅದು ಇಲ್ಲಿಂದ ಮೇಲೆದ್ದು ಬಂದಿತು. ಅದು 'ಓಂ ನಮೋ ಭಗವತೆ, 'ಓಂ ನಮೋ ಭಗವತೆ' ಎಂದಿತ್ತು. ಅದು ಪ್ರಬಲವಾಗಿತ್ತು. ಕಾಲುಗಂಟೆಯವರೆಗೆ ಉಳಿದುಕೊಂಡಿದ್ದ, ಧ್ಯಾನದ ಇಡೀ ಅವಧಿಯಲ್ಲಿ ಪ್ರತಿಯೊಂದೂ ದೈವೀ ಪ್ರಕಾಶದಿಂದ ತುಂಬಿಕೊಂಡಿತ್ತು! ಆಳಾತಿ ಆಳದ ವರ್ಣಛಾಯೆಗಳಲ್ಲಿ ಅದು ಹಳದಿ ಮಿಶ್ರಿತ ಬಂಗಾರ ವರ್ಣದ್ದಾಗಿತ್ತು. (ಗಂಟಲಿನ ಸ್ತರದಲ್ಲಿ ಅದು ಬಹುಮಟ್ಟಿಗೆ ಕೆಂಪು ವರ್ಣದ್ದಾಗಿತ್ತು.) ಉಚ್ಚತರ ವರ್ಣಛಾಯೆಗಳಲ್ಲಿ ಅದು ಕ್ಷೀರ ಸ್ಫಟಿಕದ ಬಿಳಿ ಬಣ್ಣದ್ದಾಗಿತ್ತು: ಓಂ ನಮೋ ಭಗವತೆ, ಓಂ ನಮೋ ಭಗವತೆ, ಓಂ ನಮೋ ಭಗವತೆ. ಆ ಇನ್ನೊಂದು ದಿನ ನಾನು ಅಟ್ಟದ ಮೇಲಿನ ಸ್ನಾನದ ಕೋಣೆಯಲ್ಲಿದ್ದಾಗ ಅದು ಬಂದಿತು, ಅದು ನನ್ನ ಇಡೀ ದೇಹದ ಮೇಲೆ ಹಿಡಿತ ಸಾಧಿಸಿತು. ಅದೇ ರೀತಿಯಲ್ಲಿ ಮೇಲೆದ್ದು ಬಂದಿತು, ಎಲ್ಲ ಜೀವಕೋಶಗಳು ನಡುಗುತ್ತಿದ್ದವು. ಅದರಲ್ಲಿ ಎಂತಹ ಸಾಮರ್ಥ್ಯವಿತ್ತು! ಹಾಗಾಗಿ ನಾನು ಪ್ರತಿಯೊಂದನ್ನೂ ನಿಲ್ಲಿಸಿದೆ, ಚಲನೆಯನ್ನೂ ನಿಲ್ಲಿಸಿದೆ, ಆ ವಿಷಯ ಬೆಳೆಯುವುದಕ್ಕೆ ಅನುವು ಮಾಡಿಕೊಟ್ಟೆ. ಆ ಕಂಪನ ಹಿಗ್ಗುತ್ತ, ಎಂದೆಂದಿಗೂ ವಿಸ್ತರಿಸುತ್ತ ಮುಂದುವರಿಯಿತು, ಹಾಗೆಯೇ ಧ್ವನಿಯೂ ಕೂಡ ವಿಸ್ತಾರಗೊಳ್ಳುತ್ತಿತ್ತು, ಮತ್ತು ದೇಹದ ಎಲ್ಲ ಜೀವಕೋಶಗಳು ಅಭೀಪ್ಸೆಯ ಗಾಢತೆಯ ಹಿಡಿತಕ್ಕೊಳಗಾಗಿದ್ದವು.... ಇಡೀ ದೇಹ ಉಬ್ಬಿಕೊಳ್ಳುತ್ತಿರುವಂತಿತ್ತು – ಅದು ಸಹಿಸಲಾರದಂತಾಯಿತು. ಅದೆಲ್ಲವೂ ಸ್ಫೋಟಗೊಳ್ಳುತ್ತದೆಂಬ ಭಾವನೆ ನನಗೆ ಬಂದಿತು.

ಅದನ್ನೇ ಇಡಿಯಾಗಿ ಜೀವಿಸಲು ಪ್ರತಿಯೊಂದರಿಂದ ಹಿಂದೆಗೆದು–ಕೊಂಡವರನ್ನು ನಾನು ಅರ್ಥಮಾಡಿಕೊಂಡೆ.

ಅದರಲ್ಲಿ ಅದೆಂತಹ ಪರಿವರ್ತನೆಗೊಳಿಸುವ ಸಾಮರ್ಥ್ಯವಿದೆ! ಅದು ಮುಂದುವರಿದುಕೊಂಡು ಹೋದರೆ ಏನೋ ಒಂದು ಸಂಭವಿಸಬಹುದೆಂಬ ಭಾವನೆ ನನಗೆ ಬಂದಿತು. ದೇಹದ ಜೀವಕೋಶಗಳ ಸಮತೋಲನದಲ್ಲಿ ಒಂದು ಬದಲಾವಣೆಯಂತಹ ಏನೋ ಒಂದು.

**(ಅನುಯಾಯಿಯೊಂದಿಗೆ ಮಾತುಕತೆ, ಸಪ್ಟಂಬರ 16, 1958)**

*



**'ಸಾವಿತ್ರಿ' –ಪರಿವರ್ತನೆಯ ಮಂತ್ರ**

'ಸಾವಿತ್ರಿ' ಮಹಾಕಾವ್ಯ ದಿವ್ಯ ಜ್ಞಾನ ಹೊಂದಿದೆ, ಧ್ಯಾನ ಯೋಗ್ಯವಾಗಿದೆ, ಅನಂತ ಹಾಗೂ ಸನಾತನನಾದವನ ಶೋಧ ಕುರಿತಾಗಿದೆ ಎಂದು ಹೇಳಬಹುದು. ಅಮರತ್ವಕ್ಕಾಗಿರುವ ಈ ಅಭೀಪ್ಸೆಯೊಂದಿಗೆ ಅದನ್ನು ಓದಿದರೆ, ಅದು ಅಮರತ್ವವನ್ನು ಸಿದ್ಧಿಸಿಕೊಳ್ಳುವುದಕ್ಕೆ ಮಾರ್ಗದರ್ಶನ ಮಾಡುವುದು, 'ಸಾವಿತ್ರಿ'ಯನ್ನು ಓದುವುದೆಂದರೆ ನಿಜವಾಗಿ ಭಗವಂತನನ್ನು ಸಿದ್ಧಿಸಿಕೊಂಡ ಹಾಗೆ. ಯೋಗದ ಪ್ರತಿಯೊಂದು ಹೆಜ್ಜೆಯನ್ನು ಇಲ್ಲಿ ಗಮನಿಸಲಾಗಿದೆ, ಇತರ ಎಲ್ಲ ಯೋಗಗಳ ರಹಸ್ಯವೂ ಇಲ್ಲಿದೆ. ಪ್ರತಿಯೊಂದು ಶ್ಲೋಕದಲ್ಲಿ, ಯಾವಾಗಲೂ ಇರುವುದನ್ನು ಹಾಗೂ ಇಲ್ಲಿ ತೆರೆದು ತೋರಿಸಿರುವುದನ್ನು ಮನುಷ್ಯ ಅನುಸರಿಸಿದರೆ, ಅವನು ಕೊನೆಗೆ ಅತಿಮಾನಸ ಯೋಗದ ಪರಿವರ್ತನೆಯನ್ನು ನಿಶ್ಚಿತವಾಗಿ ತಲುಪುವನು. ಅದು ನಿಜವಾಗಿ, ವಿಫಲನಾಗದ, ಎಂದೂ ಕೈಬಿಡದ ಮಾರ್ಗದರ್ಶಕನಿದ್ದ ಹಾಗೆ, (ಆಧ್ಯಾತ್ಮಿಕ) ಮಾರ್ಗವನ್ನು ಅನುಸರಿಸುತ್ತಿರುವವನಿಗೆ ಅವನ ಆಧಾರ ಯಾವಾಗಲೂ ಇರುತ್ತದೆ. 'ಸಾವಿತ್ರಿ'ಯ ಪ್ರತಿಯೊಂದು ಶ್ಲೋಕ ಮಂತ್ರವಿದ್ದ ಹಾಗೆ. ಮನುಷ್ಯ ಜ್ಞಾನದ ಮೂಲಕ ವಶಪಡಿಸಿಕೊಂಡದ್ದನ್ನೆಲ್ಲ ಅದು ಮೀರಿ ಹೋಗುತ್ತದೆ. ಶಬ್ದಗಳ ಅಭಿವ್ಯಕ್ತಿ ಹಾಗೂ ಅವುಗಳನ್ನು ವ್ಯವಸ್ಥೆಗೊಳಪಡಿಸುವಿಕೆ ಇವು ಹೇಗಿವೆಯೆಂದರೆ ಅವುಗಳ ಲಯಬದ್ಧತೆಯ ಗುಂಜಾರವ ಧ್ವನಿಯ ಮೂಲವಾದ 'ಓಂ'ದತ್ತ ನಿಮ್ಮನ್ನು ಕರೆದೊಯ್ಯುತ್ತದೆ ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ.

**(ಶ್ರೀಮಾತೆಯವರನ್ನು ಕುರಿತು ಮೋನಾ ಸರ್ಕಾರನ ಟಿಪ್ಪಣಿ: Luminous Notes)**

*

**ಓಂ ನಮೋ ಭಗವತೆ**

ಇವು ಮೂರು ಶಬ್ದಗಳು. ನನಗೆ ಅವು ನೀಡಿದ ಅರ್ಥ ಹೀಗಿದೆ:

ಓಂ – ಪರಮೋಚ್ಚ ದೈವೀ ಪ್ರಭುವಿಗೆ ಮೊರೆಯಿಡುತ್ತೇನೆ.

ನಮೋ – ಅವನಿಗೆ ನನ್ನ ಪ್ರಣಾಮ.

ಭಗವತೆ – ನನ್ನನ್ನು ದೈವಿಕಳಾದವಳನ್ನಾಗಿ ಮಾಡು.

ನನಗಾಗಿ ಅದು ಪ್ರತಿಯೊಂದನ್ನು ನಿಶ್ಚಲಗೊಳಿಸುವ ಸಾಮರ್ಥ್ಯ ಹೊಂದಿದೆ.

**(CWM, 28/76)**

*

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ವತಿಯಿಂದ ವಾರ್ಷಿಕ ಅಂತರಶಾಲಾ ಸಾಂಸ್ಕೃತಿಕ ಹಬ್ಬ "ಅಂಕುರ್–2015" ಆಚರಿಸಲಾಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಮುಖ್ಯ ಅತಿಥಿಗಳಾದ ಡಾ॥ ವಿ. ಕೋವೈಚೆಲ್ವನ್ (ಉಪಾಧ್ಯಕ್ಷರು, ಟಿ.ವಿ.ಎಸ್. ಕಂಪೆನಿ) ದೀಪ ಬೆಳಗಿಸುವುದರ ಮೂಲಕ ನೆರವೇರಿಸಿದರು. ಶಾಲೆಯ ಹಳೆಯ ವಿದ್ಯಾರ್ಥಿ ಶ್ರೀ ನಿರಂಜನ್ ಅಂತರಾಷ್ಟ್ರೀಯ ಪ್ಯಾರ ಒಲಂಪಿಕ್ಸಿನ ಈಜು ಚಾಂಪಿಯನ್ ಇವರನ್ನು ಸನ್ಮಾನಿಸಲಾಯಿತು. ಬಳಿಕ ವಿವಿಧ ಸಾಂಸ್ಕೃತಿಕ ಹಾಗೂ ಸಾಹಿತ್ಯ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾದ ಡಾ॥ ಹೇಮಾ ದಿವಾಕರ್ ಮತ್ತು ಗೌರವಾನ್ವಿತ ಅತಿಥಿಗಳಾದ ಶ್ರೀಯುತ ಸಂತೋಷ್. ಪಿ (ಪ್ರಬಂಧಕರು, ಬ್ಯಾಂಕ್ ಆಫ್ ಬರೋಡಾ, ಜೆ.ಪಿ. ನಗರ) ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿದರು. ಕಾರ್ಯಕ್ರಮದಲ್ಲಿ 15 ಶಾಲೆಗಳ ವಿದ್ಯಾರ್ಥಿಗಳು ಭಾಗವಹಿಸಿದರು. ಮೀರಾಂಬಿಕಾ ಶಾಲೆಯ ವಿದ್ಯಾರ್ಥಿಗಳು ಕಾರ್ಯಕ್ರಮವನ್ನು ನಿರ್ವಹಿಸಿದರು. ಸಂಸ್ಥೆಯ ಆಡಳಿತಾಧಿಕಾರಿ ಶ್ರೀಮತಿ ಪ್ರತಿಭಾ ಸಬ್ನೀಸ್ ಮತ್ತು ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಶಾರದಾಂಬಾ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯಲ್ಲಿ ದಿನಾಂಕ 15/8/2015ರಂದು 69ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಶಾರದಾಂಬಾ ಧ್ವಜಾರೋಹಣ ನೆರವೇರಿಸಿ ಮಹರ್ಷಿ ಶ್ರೀ ಅರವಿಂದರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ವಿದ್ಯಾರ್ಥಿಗಳು ಸ್ವಾತಂತ್ರ್ಯ ದಿನಾಚರಣೆಯ ಮಹತ್ವದ ಕುರಿತು ಭಾಷಣ ಮತ್ತು ದೇಶಭಕ್ತಿ ಗೀತೆಗಳನ್ನು ಹಾಡಿದರು. ಶಾಲೆಯ ಶಿಕ್ಷಕಿಯರು ಕಾರ್ಯಕ್ರಮವನ್ನು ನಿರ್ವಹಿಸಿದರು. ನಂತರ ವಿದ್ಯಾರ್ಥಿ ವೃಂದ ಮತ್ತು ಶಿಕ್ಷಕ ವೃಂದದವರು ಸಮೂಹ ಧ್ಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿದರು.



ದಿನಾಂಕ 15ನೇ ಆಗಸ್ಟ್ 2015ರ ಶನಿವಾರದಂದು ಶ್ರೀ ಅರವಿಂದ ಸಂಕೀರ್ಣದ ವತಿಯಿಂದ ಶ್ರೀ ಅರವಿಂದರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀ ಅರವಿಂದ ಸಂಕೀರ್ಣದ ಧ್ಯಾನ ಮಂದಿರದಲ್ಲಿ ಬೆಳಿಗ್ಗೆ 10.15 ರಿಂದ 10.35ರ ವರೆಗೆ ಸಾಮೂಹಿಕ ಧ್ಯಾನ, ನಂತರ ಸಂದೇಶ ಪತ್ರ ಹಾಗೂ ಪ್ರಸಾದವನ್ನು ವಿತರಿಸಲಾಯಿತು. ತತ್ಸಂಬಂಧ ಡಾ॥ ಹರೀಶ ಜಿ.ಬಿ. "Sri Aurobindo as a Purna-Yogi" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

## ಶ್ರೀ ಅರವಿಂದ ಮಂಡಳ

ಹಲಸಂಗಿ.

ಹಲಸಂಗಿಯಲ್ಲಿ ದಿನಾಂಕ 15–7–2015ರಂದು ಕರ್ನಾಟಕ ಶ್ರೀ ಅರವಿಂದ ಮಂಡಳದ 72ನೆಯ ಮತ್ತು ಶ್ರೀ ಅರವಿಂದರ ಪುಣ್ಯ ಅವಶೇಷ ಪ್ರತಿಷ್ಠಾಪನೆಯ 43ನೇ ವಾರ್ಷಿಕ ಕಾರ್ಯಕ್ರಮ ಜರುಗಿತು. ಪಾಂಡಿಚೇರಿ ಆಶ್ರಮದಿಂದ ಶ್ರೀ ಹೀರಾಲಾಲ ಅವರು ಸಾಧಕ ಅತಿಥಿಗಳಾಗಿ ಆಗಮಿಸಿದ್ದರು. ಜೀವನವೆಲ್ಲಾ ಯೋಗವನ್ನಾಗಿ ಹೇಗೆ ಮಾಡಿಕೊಳ್ಳಬೇಕೆಂದು ವಿವರಿಸಿದರು. ಉಪನ್ಯಾಸಕರಾಗಿ ಮಣಿಪಾಲದಿಂದ ಶ್ರೀ ನಂದನ ಪ್ರಭು ಆಗಮಿಸಿದ್ದರು. "ಶ್ರೀ ಅರವಿಂದರ ಯೋಗವು ಉಳಿದ ಯೋಗಗಳಿಂದ ಹೇಗೆ ಭಿನ್ನವಾಗಿದೆ" ಎಂಬ ವಿಷಯದ ಮೇಲೆ ಸುದೀರ್ಘವಾಗಿ ಮನ ಮುಟ್ಟುವಂತೆ ಮಾತನಾಡಿದರು. ಇನ್ನೋರ್ವ ಉಪನ್ಯಾಸಕರು ವಿಜಾಪುರದ ಡಾ॥ ಆರ್.ಕೆ. ಕುಲಕರ್ಣಿಯವರು "ಸಾವಿತ್ರಿ ಮಹಾಕಾವ್ಯದ ವಿಶೇಷತೆಗಳು" ಎಂಬ ಬಗ್ಗೆ ಮಾತನಾಡಿದರು. ಅವರಿಂದ "ಸಾವಿತ್ರಿ"ಯ ಬಗ್ಗೆ ಉಪನ್ಯಾಸಗಳನ್ನೇರ್ಪಡಿಸಿ ಅವುಗಳ CD ಮಾಡಿಸಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಶ್ರೀ ತಾಯಿಯವರ ಕೃಪೆಯಿಂದ ಈ ಕಾರ್ಯ ಈಡೇರಲಿ ಎಂದು ಹಾರೈಸಲಾಗಿದೆ. ಡಾ॥ ಫ.ಗು. ಹಳಕಟ್ಟಿ, ಸಂಶೋಧನಾ ಕೇಂದ್ರ, ವಿಜಯಪುರ ಅದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾತರವರು ಉಪಸ್ಥಿತರಿದ್ದರು. 20 ಊರುಗಳಿಂದ ಸುಮಾರು 160 ಗುರು–ಬಂಧು ಭಗಿನಿಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂತೋಷಪಟ್ಟರು.



*The Truth is known only when all is seen.*

- Sri Aurobindo

**RNI No. 22511/1971**
No. of Pages **48 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.